ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 10 ಗುರುವಾರ 2024


ಸಂಪುಟ: 45 | ಸಂಚಿಕೆ: 175 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ರತನ್ ಟಾಟಾ ಇನ್ನಿಲ್ಲ


ರತನ್ ಟಾಟಾ – 1937 – 2024

ಮುಂಬೈ, ಅ.9–ಭಾರತದ ಶ್ರೇಷ್ಠ ಉದ್ಯಮಿ ಟಾಟಾ ಗ್ರೂಪ್‌ನ ಮಾಜಿ ಅಧ್ಯಕ್ಷ ರತನ್ ಟಾಟಾ ಅವರು ಮುಂಬೈನ ಕ್ಯಾಂಡಿ ಆಸ್ಪತ್ರೆಯಲ್ಲಿ ಬುಧವಾರ ತಡರಾತ್ರಿ ನಿಧನರಾದರು. ಅವರಿಗೆ 86 ವರ್ಷ ವಯಸ್ಸಾಗಿತ್ತು. ಗುಜರಾತ್ ಮೂಲದ ನೇವಲ್ ಟಾಟಾ ಮತ್ತು ಸೂನಿ ಟಾಟಾ ದಂಪತಿಯ ಪುತ್ರನಾಗಿ 1937ರ ಡಿ.28ರಂದು ಜನಿಸಿದ ರತನ್ ಟಾಟಾ 1991ರಿಂದ 2012ರವರೆಗೆ ಟಾಟಾ ಗ್ರೂಪ್‌ನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದರು. ನುತರ ಟಾಟಾ ಗ್ರೂಪ್‌ಗೆ ಸಂಬಂಧಿಸಿದ ಟ್ರಸ್ಟ್‌ನ ಮುಖ್ಯಸ್ಥರಾಗಿದ್ದರು.

ರತನ್ ಟಾಟಾ ಯಶಸ್ವಿ ಉದ್ಯಮಿ ಮಾತ್ರವಲ್ಲದೆ, ಬಡವರ ಬಂಧು, ಮಾನವತಾವಾದಿ ಎಂದೆಲ್ಲಾ ಕರೆಯಲ್ಪಡುತ್ತಿದ್ದರು. ವಿಶ್ವದಾದ್ಯಂತ ಟಾಟಾ ಕಂಪನಿಗೆ ಉತ್ತಮ ಹೆಸರು ತಂದುಕೊಟ್ಟ ಇವರು, ಬಡವರಿಗೆ ಕೋಟ್ಯಾಂತರ ರೂ. ದಾನ ಮಾಡುವ ಮೂಲಕ ಕಲಿಯುಗ ಕರ್ಣ ಎನಿಸಿಕೊಂಡಿದ್ದರು. ತಮ್ಮ ವೃದ್ಧಾಪ್ಯದಲ್ಲೂ ಅತ್ಯಂತ ಕ್ರಿಯಾಶೀಲರಾಗಿದ್ದ ಇವರನ್ನು ಅನಾರೋಗ್ಯದ ಕಾರಣದಿಂದ ಸೋಮವಾರ ಮುಂಬೈನ ಕ್ಯಾಂಡಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅದೇ ದಿನ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ ರತನ್ ಟಾಟಾ, ವಯೋಸಹಜ ಆರೋಗ್ಯ ಸಮಸ್ಯೆಯಿಂದ ತಪಾಸಣೆಗಾಗಿ ಆಸ್ಪತ್ರೆಗೆ ಬಂದಿದ್ದೇನೆ ಅಷ್ಟೇ. ನನ್ನ ಆರೋಗ್ಯ ಕುರಿತು ■ 6ನೇ ಪುಟಕ್ಕೆ

ಮೈಸೂರಲ್ಲಿ ಎ.ಆರ್.ರೆಹಮಾನ್ ಗಾನ ಮೋಡಿ

ನೆರೆದ ಜನಸಾಗರ ನೃತ್ಯ–ಸಂಗೀತಕ್ಕೆ ಸಮ್ಮೋಹ

ಮೈಸೂರು, ಅ.9(ಎಂಕೆ)– ಅಂತರ ರಾಷ್ಟ್ರೀಯ ಖ್ಯಾತಿಯ ಸಂಗೀತ ನಿರ್ದೇಶಕ, ಮ್ಯೂಸಿಕ್ ಮಾಂತ್ರಿಕ ಎ.ಆರ್.ರೆಹಮಾನ್ ಸೃಷ್ಟಿಸಿದ ನೃತ್ಯ–ಸಂಗೀತ ಲೋಕಕ್ಕೆ ಮಾರು ಹೋದ ಮೈಸೂರು...! ಮೈಸೂರು ಹೊರವಲಯದ ರಿಂಗ್ ರಸ್ತೆಯಲ್ಲಿರುವ ಉತ್ತನಹಳ್ಳಿ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ದೇವಸ್ಥಾನದ ಸಮೀಪದಲ್ಲಿ ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವ ಮೆಗಾ ಇವೆಂಟ್ ಯುವ ದಸರಾ ಕಾರ್ಯಕ್ರಮದ ನಾಲ್ಕನೆ ದಿನವಾದ ಬುಧವಾರ ಎ.ಆರ್.ರೆಹಮಾನ್ ಸಂಗೀತ ಲೋಕವೇ ಸೃಷ್ಟಿಯಾಗಿತ್ತು.

(ಪೂರ್ಣ ಸಚಿತ್ರ ವರದಿ ಪುಟ–2)


ವಿಜಯಪ್ರಕಾಶ್


ರಕ್ಷಿತಾ ಸುರೇಶ್


ಖ್ಯಾತ ಸಂಗೀತ ನಿರ್ದೇಶಕ ಎ.ಆರ್.ರೆಹಮಾನ್

ರಾಜ್ಯದಲ್ಲಿ ಶಾಂತಿಭಂಗ ಯತ್ನ

ಕಟ್ಟೆಚ್ಚರಕ್ಕೆ ಸೂಚನೆ

ಬೆಂಗಳೂರು: ವಿಚ್ಛಿದ್ರಕಾರಿ ಶಕ್ತಿಗಳು ದುಷ್ಕೃತ್ಯದ ಮೂಲಕ ರಾಜ್ಯದಲ್ಲಿ ಶಾಂತಿಭಂಗಕ್ಕೆ ಯತ್ನಿಸುತ್ತಿದ್ದು ಎಲ್ಲೆಡೆ ವ್ಯಾಪಕ ಕಟ್ಟೆಚ್ಚರ ವಹಿಸುವಂತೆ ಕೇಂದ್ರ ಗುಪ್ತದಳ ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿದೆ.

ರಾಜ್ಯದ ವಿವಿಧೆಡೆ ಅಡಗಿದ್ದ ಪಾಕಿಸ್ತಾನಿ ಪ್ರಜೆಗಳ ಬಂಧನದ ಬೆನ್ನಲ್ಲೇ ವ್ಯಾಪಕ ಮುಂಜಾಗ್ರತೆ ವಹಿಸುವಂತೆ ಎಚ್ಚರಿಕೆ ಸಂದೇಶ ರವಾನೆಯಾಗಿದೆ. ಆಯುಧ ಪೂಜೆ, ವಿಜಯದಶಮಿ ಸೇರಿದಂತೆ ಹಲವಾರು ಹಬ್ಬ ಆಚರಣೆಗಳು ಮುಂದಿನ ಒಂದೂವರೆ ತಿಂಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ವಿಧ್ವಂಸಕ ಕೃತ್ಯಕ್ಕೆ ಕೆಲವು ಸಂಘಟನೆಗಳು ಸಂಚು ಮಾಡಿವೆ ಎಂದು ಗುಪ್ತದಳ ತನ್ನ ಸಂದೇಶದಲ್ಲಿ ತಿಳಿಸಿದೆ. ಮೈಸೂರಿನ ಐತಿಹಾಸಿಕ ಜಂಬೂಸವಾರಿ, ಮಡಿಕೇರಿ ದಸರಾ, ಚಿತ್ರದುರ್ಗ ದಸರಾ ಸೇರಿ ರಾಜ್ಯದ ವಿವಿಧ ಕಡೆ ನಡೆಯುತ್ತಿರುವ ಧಾರ್ಮಿಕ ಆಚರಣೆಗಳ ಸಮಯದಲ್ಲಿ ದುಷ್ಕೃತ್ಯದ ಮೂಲಕ ಶಾಂತಿ ಭಂಗಕ್ಕೆ ಸಂಚು ನಡೆದಿದೆ. ಕೆಲವು ವಿಚ್ಛಿದ್ರಕಾರಕ ಶಕ್ತಿಗಳ ಜೊತೆ ನಂಟು ಹೊಂದಿರುವ ವ್ಯಕ್ತಿಗಳು ಬೆಂಗಳೂರು ಸೇರಿದಂತೆ ರಾಜ್ಯದ ಕೆಲವು ಭಾಗಗಳಲ್ಲಿ ತಲೆಮರೆಸಿಕೊಂಡಿದ್ದಾರೆ. ■ 6ನೇ ಪುಟಕ್ಕೆ

ಮೈಸೂರಲ್ಲಿ ಎ.ಆರ್.ರೆಹಮಾನ್ ಗಾನ ಮೋಡಿ

ನೆರೆದ ಜನಸಾಗರ ನೃತ್ಯ-ಸಂಗೀತಕ್ಕೆ ಸಮ್ಮೋಹ



ಜಾನೇ ತೂ ಯಾ ಜಾನೇ ನಾ ಚಿತ್ರದ 'ಕಭಿ ಕಭಿ ಅದಿತಿ ಜಿಂದಗೀ' ಹಿಂದಿ ಹಾಡಿಗೆ ಹೆಜ್ಜೆ ಹಾಕಿದ ನೃತ್ಯ ಕಲಾವಿದರು.



ಡ್ರಮ್ಮರ್ ಶಿವಮಣಿ



ಎ.ಆರ್.ರೆಹಮಾನ್

ಮೈಸೂರು, ಅ.9(ಎಂಕೆ)- ಅಂತರ ರಾಷ್ಟ್ರೀಯ ಖ್ಯಾತಿಯ ಸಂಗೀತ ನಿರ್ದೇಶಕ, ಮ್ಯೂಸಿಕ್ ಮಾಂತ್ರಿಕ ಎ.ಆರ್.ರೆಹಮಾನ್ ಸೃಷ್ಟಿಸಿದ ನೃತ್ಯ-ಸಂಗೀತ ಲೋಕಕ್ಕೆ ಮಾರುಹೋದ ಮೈಸೂರು...!

ಮೈಸೂರು ಹೊರವಲಯದ ರಿಂಗ್ ರಸ್ತೆಯಲ್ಲಿರುವ ಉತ್ತನಹಳ್ಳಿ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ದೇವಸ್ಥಾನದ ಸಮೀಪದಲ್ಲಿ ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವ ಮೆಗಾ ಇವೆಂಟ್ ಯುವ ದಸರಾ ಕಾರ್ಯಕ್ರಮದ ನಾಲ್ಕನೇ ದಿನವಾದ ಬುಧವಾರ ಎ.ಆರ್.ರೆಹಮಾನ್ ಸಂಗೀತ ಲೋಕವೇ ಸೃಷ್ಟಿಯಾಗಿತ್ತು.

ಭೋರ್ಗರೆದ ಜನ ಸಾಗರದ ಎದೆಯಲ್ಲಿ ಸಂಗೀತ ನಾದವನ್ನಿಳಿಸಿದ ರೆಹಮಾನ್, ಅಕ್ಷರಶಃ ತಾನೊಬ್ಬ ಸಂಗೀತ ಮಾಂತ್ರಿಕನೆಂಬುದನ್ನು ನಿರೂಪಿಸಿದರು. ಮೂರು ಗಂಟೆಗೂ ಹೆಚ್ಚು ಕಾಲ ಇಡೀ ವೇದಿಕೆಗೆ ಸಂಗೀತ ಅಲೆಗಳನ್ನು ಅಪ್ಪಳಿಸಿದ ಅವರು, ಪ್ರತಿಯೊಬ್ಬರ ಮೈ-ಮನಸುಗಳನ್ನೊಕ್ಕಿ ನಾದಗಳಿಂದ ವಿನೋದವಾಡಿದರು.

ಸಂಗೀತ ಪ್ರಾತ್ಯಕ್ಷಿಕೆಗೆ ಮುನ್ನುಡಿ ಬರೆದ ಖ್ಯಾತ ಡ್ರಮ್ಮರ್ ಶಿವಮಣಿ, ಡಮ್... ಡಮ್... ಎಂಬ ಧ್ವನಿ ಸುರುಳಿಯನ್ನು ಹಬ್ಬಿಸಿದರು. ನಂತರ ಭವ್ಯ ವೇದಿಕೆಯಲ್ಲಿ ಅಣಿಗೊಂಡಿದ್ದ ಸಂಗೀತ ಪರಿಕರಗಳ ನಡುವೆ, ಮಿರಿ ಮಿರನೆ ಮಿಂಚುತ್ತಿದ್ದ ಎಲ್‌ಇಡಿ ಪರದೆಯನ್ನೇ ಸೀಳಿಕೊಂಡು ಸದೃಶ್ಯರಾದ ರೆಹಮಾನ್, ಜೈ ಹೋ ಮೊಳಗಿಸಿದರು. ಸ್ಲಮ್‌ಡಾಗ್ ಮಿಲಿಯನೇರ್ ಚಿತ್ರದ 'ಜೈ ಹೋ' ಹಾಡನ್ನು ಹಾಡುವ ಮೂಲಕ ಇಡೀ ವೇದಿಕೆಯಲ್ಲಿ ಜೈ ಹೋ ಘೋಷಣೆ ಮೊಳಗಿಸಿದರು.

ಎಂದೆಂದಿಗೂ ಕುಣಿಯುವ ಹಾಡೆಂದೇ ಬಿಂಬಿತವಾದ ತೆಲುಗಿನ ಕಾದಲನ್ ಚಿತ್ರದ 'ಮುಕ್ಕಾಲ ಮುಕ್ಕಬಾಲ' ಹಾಡನ್ನು ಗಾಯಕಿ ಶ್ವೇತಾ ಅವರೊಂದಿಗೆ ಹಾಡಿ ಎಲ್ಲರ ಕುಣಿದು ಕುಪ್ಪಳಿಸುವಂತೆ ಮಾಡಿದರು. ಗುರು ಚಿತ್ರದ 'ತೇರೆ ಬಿನಾ ಬೆಸು', ದಿಲ್‌ಸೆ ಚಿತ್ರ 'ದಿಲ್‌ಸೆರೇ', ಸ್ವದೇಶ್ ಚಿತ್ರದ 'ಹೈ ಜೋ ದೇಶ್ ಹೈ ತೇರಾ' ಸೇರಿದಂತೆ ತಮ್ಮದೇ ಸಂಯೋಜಿತ ಹತ್ತಾರು ಹಾಡುಗಳನ್ನು ಹಾಡುವ ಮೂಲಕ ಅಪಾರ ಸಂಖ್ಯೆಯಲ್ಲಿ ನೆರೆದಿದ್ದವರ ಹೃದಯ ಗೆದ್ದರು.

ವಿಜಯ್ ಪ್ರಕಾಶ್, ರಕ್ಷಿತಾ ಮಿಂಚು: ಎ.ಆರ್.ರೆಹಮಾನ್ ಸಂಗೀತ ಪ್ರಾತ್ಯಕ್ಷಿಕೆ ತಂಡದಲ್ಲಿದ್ದ ಮೈಸೂರಿನ ಖ್ಯಾತ ಗಾಯಕ ವಿಜಯ್ ಪ್ರಕಾಶ್, ರೆಹಮಾನ್ ಅವರಿಗಾಗಿ ಪ್ರಥಮ ಬಾರಿ ಹಾಡಿದ 'ರಾಮ ನನ್ನ ಮನದಲ್ಲಿ, ರಾಮ ನಿನ್ನ ಮನದಲಿ' ಹಾಡಿನ ಹಿಂದಿ ಅವತರಣಿಕೆ ಹಾಗೂ ರೋಜಾ ಚಿತ್ರದ 'ರೋಜಾ ಜಾನೇಮಾನ್ ತೂ ಹಿ ಮೇರಾ ದಿಲ್' ಹಾಡನ್ನು ಹಿಂದಿ ಹಾಗೂ ಕನ್ನಡದಲ್ಲೂ ಹಾಡುವ ಮೂಲಕ ಸಂಚಲನ ಸೃಷ್ಟಿಸಿದರು. ಜೊತೆಗೆ ತಮಿಳಿನ 'ಏನಿದೆಯಂ ಏನೆ ಕಾದಲ್', ಹಿಂದಿಯ 'ಎನ್ನ ಸೋ ನಾ ಕ್ಯೂ ರಬ್ನೇ ಬನಾಯ' ಸೇರಿದಂತೆ ರೆಹಮಾನ್ ಸಂಗೀತ ಸಂಯೋಜನೆಯ ಸುಪ್ರಸಿದ್ಧ ಹಾಡುಗಳನ್ನು ಹಾಡಿ ರಂಜಿಸಿದರು.

ಹಾಗೆಯೇ ಮೈಸೂರಿನ ಗಾಯಕಿ ರಕ್ಷಿತಾ ಸುರೇಶ್, ಪಿಎಸ್-2 ಚಿತ್ರದ 'ಕಿರುನಗೆ ಕಿರುನಗೆ' ಹಾಡನ್ನು ಸುಶ್ರಾವ್ಯವಾಗಿ ಹಾಡಿದರೆ, ಗಾಯಕಿ ಶ್ವೇತಾ ದಿಲ್‌ಸೆ ಚಿತ್ರದ 'ಜಿಯ ಚಲೆ ಜಾ ಜಾಲೆ ನೆನುತಲೆ', 'ರಾಧೆ ಕಿ ಮೆಸೆ ಚಲೇ' ಸೇರಿದಂತೆ ಹಲವು ಹಾಡುಗಳನ್ನು ಹಾಡು ಸಂಗೀತ ಪ್ರಿಯರ ಮನತಣಿಸಿದರು. ಗಾಯಕ ಮೋಹಿತ್ ಚೌಹಾಣ್ ಡೆಲ್ಲಿ-6 ಚಿತ್ರದ 'ಮಸಕಲಿ' ಸೇರಿದಂತೆ ಕೆಲ ಹಾಡಿಗಳ ಮೂಲಕ ಎಲ್ಲರೂ ಗುನುಗುವಂತೆ ಮಾಡಿದರು.

ನನ್ನ ಅದೃಷ್ಟ: ನಾನು ಅನೇಕ ಕಡೆ ರೆಹಮಾನ್ ಸರ್ ತಂಡದೊಂದಿಗೆ ಕಾರ್ಯಕ್ರಮ ನೀಡಿದ್ದೇನೆ. ಆದರೆ, ನಾನು ಹುಟ್ಟಿ ಬೆಳೆದ ಪುಣ್ಯ ಭೂಮಿಯಲ್ಲಿ ಅವರೊಂದಿಗೆ ಪಾಲ್ಗೊಳ್ಳುತ್ತಿರುವುದು ನನ್ನ ಅದೃಷ್ಟವೆಂದ ವಿಜಯ್ ಭಾವುಕರಾದರು.

ಸಂಗೀತ ಪರಿಕರಗಳ ಝೇಂಕಾರ: ಹಿಂದಿ, ಕನ್ನಡ, ತಮಿಳು, ತೆಲುಗು ಹಾಡುಗಳ ನಡುವೆ, ಸಂಗೀತ ಪರಿಕರಗಳ ನಾದವೂ ಹೊಮ್ಮಿತು. ಆರಂಭದಲ್ಲಿ ಡ್ರಮ್ಮರ್ ಶಿವಮಣಿ ಸುಮಾರು 10 ನಿಮಿಷಕ್ಕೂ ಹೆಚ್ಚು ಕಾಲ ರಿದಂ ಸೃಷ್ಟಿಸಿದರೆ, ಇನ್ನಿತರೆ ಸಂಗೀತ ಪರಿಕರಗಳ ಕಲಾವಿದರು ಹಾಡಿನ ನಡುವೆ ಝೇಂಕರಿಸಿದರು. ಪೈಪೋಟಿ ಎಂಬಂತೆ ನಾದಗಳ ತರಂಗ ಸೃಷ್ಟಿಸಿದರು.

ನೃತ್ಯದ ಸೊಬಗು: ಸೊಗಸಾದ ಹಾಡುಗಳಿಗೆ ನೃತ್ಯ ಪ್ರದರ್ಶನ ನೀಡಿದ ರೆಹಮಾನ್ ತಂಡ, ಶೃಂಗಾರಮಯ ಲೋಕವನ್ನು ಕಣ್ತುಂಬಿಸಿದರು. ಆತ್ಯಾಕರ್ಷಕ ವಸ್ತ್ರವಿನ್ಯಾಸ, ನವೋಲ್ಲಾಸ ನೀಡುವ ನೃತ್ಯ ಸಂಯೋಜನೆಗೆ ಯುವ ಮನಸುಗಳನ್ನು ಕಣ್ಣರಳಿತು. ಗಾಯಕರಾದ ನಿಶಾ ಶೆಟ್ಟಿ, ಶ್ವೇತಾ ಮೋಹನ್, ಹರಿಚರಣ್, ನಕುಲ್ ಹಿಂದಿ, ಕನ್ನಡ, ತಮಿಳು ಹಾಡುಗಳ ಹಾಡಿ ಅಪಾರ ಮೆಚ್ಚುಗೆ ಪಡೆದರು.

ಬೆಂಕಿ: ಸಂಗೀತ ಕಾರ್ಯಕ್ರಮ ನಡೆಯುವ ವೇಳೆಯೇ ವೇದಿಕೆಯ ಬಲ ಬದಿಯಲ್ಲಿ ಬೆಂಕಿ ಕಾಣಿಸಿಕೊಂಡಿತು. ಕೂಡಲೇ ಗಮನಿಸಿದ ಪೊಲೀಸ್ ಹಾಗೂ ಅಗ್ನಿಶಾಮಕ ಸಿಬ್ಬಂದಿ ಕ್ಷಣಾರ್ಧದಲ್ಲಿಯೇ ಬೆಂಕಿಯನ್ನು ನಂದಿಸಿ ಆತಂಕ ದೂರ ಮಾಡಿದರು.

ಸಾಗರೋಪಾದಿಯಲ್ಲಿ ಹರಿದು ಬಂದ ಜನ ಸಾಗರ...

ಮೈಸೂರು ದಸರಾ ಮೆಗಾ ಇವೆಂಟ್ ಯುವ ದಸರಾ 4ನೇ ದಿನ ಸಂಗೀತ ಮಾಂತ್ರಿಕ ಎ.ಆರ್.ರೆಹಮಾನ್, ಸಂಗೀತ ಪ್ರಾತ್ಯಕ್ಷಿಕೆ ಸವಿಯಲು ಸಾಗರೋಪಾದಿಯಲ್ಲಿ ಜನ ಸಾಗರವೇ ಹರಿದು ಬಂದಿತ್ತು. ರಿಂಗ್ ರಸ್ತೆಯಲ್ಲಿ ಸುಮಾರು 3 ಕಿ.ಮೀ ದೂರದಷ್ಟು ವಾಹನಗಳನ್ನು ಪಾರ್ಕಿಂಗ್ ಮಾಡಲಾಗಿತ್ತು. ವಿಐಪಿ, ವಿವಿಐಪಿ, ಗೋಲ್ಡ್‌ಕಾರ್ಡ್, ಡೈಮಂಡ್ ಕಾರ್ಡ್ ಇತ್ಯಾದಿ ಇತ್ಯಾದಿ ಸೀಟುಗಳೆಲ್ಲವೂ ಭರ್ತಿಯಾಗಿ ಕೂರಲು ಸ್ಥಳವಿಲ್ಲದೆಯೇ ಸಾವಿರಾರು ಮಂದಿ ನಿಂತಿದ್ದರು. ಪೊಲೀಸರಂತೂ ಸಂಜೆ 5 ಗಂಟೆಯಿಂದಲೇ ತಂಡೋಪ ತಂಡವಾಗಿ ಬರುತ್ತಿದ್ದ ವಾಹನಗಳನ್ನು ಪಾರ್ಕಿಂಗ್ ಸ್ಥಳಕ್ಕೆ ಕಳುಹಿಸಲು, ಜನಸ್ತೋಮವನ್ನು ನಿರ್ವಹಿಸುವಲ್ಲಿ ಹೈರಾಣಾದರು.



ಗಾಯಕಿ ನಿಶಾ ಶೆಟ್ಟಿ ಮತ್ತು ಸಹಕಲಾವಿದರಿಂದ ನೃತ್ಯ

ಇಬ್ಬರು ಮಾಜಿ ಸಿಎಂಗಳಿಗೆ ಹನಿಟ್ರ್ಯಾಪ್ ಮಾಡಿ ಮುನಿರತ್ನ ಸಚಿವರಾದರು

ಅತ್ಯಾಚಾರ ಸಂತ್ರಸ್ತೆ ಹೊಸ ಬಾಂಬ್




ಬೆಂಗಳೂರು, ಅ. 9(ಕೆಎಂಶಿ)-ರಾಜ್ಯದ ಇಬ್ಬರು ಮಾಜಿ ಮುಖ್ಯಮಂತ್ರಿಗಳಿಗೆ ಹನಿಟ್ರ್ಯಾಪ್ ಮಾಡಿ ಶಾಸಕ ಮುನಿರತ್ನ ಸಚಿವ ಸ್ಥಾನ ಗಿಟ್ಟಿಸಿಕೊಂಡರು ಎಂದು ಅತ್ಯಾಚಾರ ಸಂತ್ರಸ್ತೆ ಇಂದಿಲ್ಲಿ ಬಾಂಬ್ ಸಿಡಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಚಿವರು, ಶಾಸಕರು, ಹಿರಿಯ ಅಧಿಕಾರಿಗಳು ಅಷ್ಟೇ ಅಲ್ಲ, ಎಸಿಪಿ, ಸಬ್‌ಇನ್ಸ್‌ಪೆಕ್ಟರ್‌ಗಳನ್ನು ಹನಿಟ್ರ್ಯಾಪ್ ಮಾಡಿ, ಅಶ್ಲೀಲ ವಿಡಿಯೊಗಳನ್ನು ಇಟ್ಟುಕೊಂಡು ತಮ್ಮ ಕಾರ್ಯಗಳನ್ನು ಸಾಧಿಸುತ್ತಿದ್ದರು. ನನಗೆ ಮತ್ತು ನನ್ನ ಕುಟುಂಬಕ್ಕೆ ಸೂಕ್ತ ರಕ್ಷಣೆ ನೀಡಿದರೆ ಈ ಎಲ್ಲಾ ವಿಡಿಯೊಗಳನ್ನು ಬಹಿರಂಗಪಡಿಸುತ್ತೇನೆ.

ಈ ಎಲ್ಲಾ ಸಿಡಿಗಳು ಮುನಿರತ್ನ ಬಳಿಯೇ ಅಲ್ಲ, ನನ್ನ ಬಳಿಯೂ ಒಂದೊಂದು ಪ್ರತಿಗಳಿವೆ. ಮುನಿರತ್ನ ಸಿನೆಮಾ ತೆಗೆಯುವ ನಿರ್ಮಾಪಕ ಅಷ್ಟೇ ಅಲ್ಲ, ಅತ್ಯಾಧುನಿಕ ಕ್ಯಾಮೆರಾ ಮತ್ತು ಯಂತ್ರೋಪಕರಣಗಳನ್ನು ಇಟ್ಟುಕೊಂಡು ಹನಿಟ್ರ್ಯಾಪ್ ಮಾಡುತ್ತಿದ್ದರು. ಇದಕ್ಕೆ ನಾನೊಬ್ಬಳೇ ಬಲಿಪಶು ಅಲ್ಲ, ಇನ್ನೂ ಆರು ಮಂದಿ ಇದ್ದಾರೆ. ಅವರ್‍ಯಾರೂ ಬಹಿರಂಗವಾಗಿ ಹೇಳಿಕೆ ನೀಡಲು ಮುಂದೆ ಬರುತ್ತಿಲ್ಲ.

ಹನಿಟ್ರ್ಯಾಪ್‌ಗೆ ಕಿರುತೆರೆ ಹಾಗೂ ಸಿನೆಮಾ ನಟಿಯರನ್ನು ಬಳಕೆ ಮಾಡಿಲ್ಲ, ಸಂಕಷ್ಟದಲ್ಲಿರುವ ಮಹಿಳೆಯರನ್ನು ದುರ್ಬಳಕೆ ಮಾಡಿಕೊಂಡು ಮುನಿರತ್ನ ಇಂತಹ ಹೇಯ ಕೆಲಸ ಮಾಡಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು 10 ನಿಮಿಷ ಕಾಲಾವಕಾಶ ನೀಡಿದರೆ ಮುನಿರತ್ನ ಅವರ ಬಣ್ಣ ಬಯಲು ಮಾಡುತ್ತೇನೆ, ನಂತರ ಅವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲಿ ಎಂದರು.

ನಿಧನ

ಸಿದ್ದೇಗೌಡ




ಮೈಸೂರಿನ ಕುಂಬಾರಕೊಪ್ಪಲು ನಿವಾಸಿ ಸಿದ್ದೇಗೌಡರು(86) ಬುಧವಾರ ನಿಧನರಾದರು. ಮೃತರು ಮೂವರು ಪುತ್ರರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಬುಧವಾರ ಕುಂಬಾರಕೊಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ನಂಜಪ್ಪ



ಮೈಸೂರು, ಅ.9-ಮೂಲತಃ ಮೊಸಂಬಾಯನಹಳ್ಳಿ ಗ್ರಾಮದವರಾಗಿದ್ದು, ಮೈಸೂರಿನ ಯರಗನಹಳ್ಳಿಯಲ್ಲಿ ವಾಸವಿದ್ದ ಮರದ ವ್ಯಾಪಾರಿ ನಂಜಪ್ಪ (70) ಅವರು ಇಂದು (ಬುಧವಾರ) ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಗುರುವಾರ) ಬೆಳಗ್ಗೆ 11 ಗಂಟೆಗೆ ಯರಗನಹಳ್ಳಿ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

10.10.2024 ಗುರುವಾರ, ಮಳೆ ನಕ್ಷತ್ರ: ಚಿತ್ತ, 10.10.2024 ರಿಂದ 23.10.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಪೂಷಾ, ರಾಹುಕಾಲ : ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಶ್ರೀ ಶ್ರೀ ಸುಬ್ಬರಾಯ ದಾಸರ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ :** ನವರಾತ್ರಿ ಬ್ರಹ್ಮೋತ್ಸವ, ಬೆಳಗ್ಗೆ ಪವಮಾನ ಹೋಮ, ಹನುಮಂತೋತ್ಸವ, ಸಂಜೆ ಪ್ರಹ್ಲಾದೋತ್ಸವ, ಗರುಡೋತ್ಸವ, ಸ್ಥಳ: ದೇವಸ್ಥಾನ ಆವರಣ, ಕೃಷ್ಣ ವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಶ್ರೀ ಶಿವಛತ್ರಪತಿ ಅಂಬಾಭವಾನಿ ಟೆಂಪಲ್ ಟ್ರಸ್ಟ್, ಅಂಬಾಭವಾನಿ ಅಮ್ಮನವರ ದೇವಸ್ಥಾನ :** ದುರ್ಗಾ ಮಾತಾ ದೌಡ್ ಕಾರ್ಯಕ್ರಮ, ಸ್ಥಳ: ಅಂಬಾ ಭವಾನಿ ವೃತ್ತದಿಂದ, ಬೆಳಗ್ಗೆ 5.30ಕ್ಕೆ.

■ **ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು :** ಪ್ರಥಮ ವರ್ಷದ ಎಂ.ಕಾಂ. ವಿದ್ಯಾರ್ಥಿಗಳ ಸೇರ್ಪಡೆ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಚೀಫ್ ಜನರಲ್ ಮ್ಯಾನೇಜರ್ ಬಿ. ಕಿರಣ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಗೌರವ ಅತಿಥಿಗಳು : ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್, ಖಜಾಂಚಿ ಶ್ರೀಶೈಲ ರಾಮಣ್ಣವರ್, ಕಾಲೇಜು ಅಧ್ಯಕ್ಷ ಟಿ. ನಾಗರಾಜು, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 9.30ಕ್ಕೆ.

■ **ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ಲಕ್ಷ್ಮೀವೆಂಕಟರಮಣ ಸ್ವಾಮಿಯ 50ನೇ ಬ್ರಹ್ಮೋತ್ಸವ, ಬೆಳಗ್ಗೆ ಚತುಃಸ್ಥಾನಾರ್ಚನೆ, ನಿತ್ಯಹೋಮ, ಗರುಡೋತ್ಸವ, ನಿವೇದನ, ಶಾತ್ತುಮೊರೈ, ತೀರ್ಥಪ್ರಸಾದ ವಿನಿಯೋಗ, ಸಂಜೆ ಲಕ್ಷ್ಮೀಸಹ್ರನಾಮ ಹೋಮ, ಸಿಂಹವಾಹನೋತ್ಸವ, ಪ್ರಹ್ಲಾದ ಪರಿಪಾಲನೆ, ನಿವೇದನ, ಶಾತ್ತುಮೊರೈ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ವಾಣಿವಿಲಾಸ ಮೊಹಲ್ಲಾ.

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.

■ **ಚಾಮುಂಡಿಬೆಟ್ಟದ ತಪ್ಪಲಿನ ಶಬರಿಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ :** ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದಲ್ಲಿ ನವರಾತ್ರಿ ಪ್ರಯುಕ್ತ ದಸರಾ ಹಬ್ಬದ ಆಚರಣೆ, ಪವಿತ್ರ ಗ್ರಂಥ ಪೂಜೆ (ಪುಸ್ತಕ ಪೂಜೆ), ಸ್ಥಳ: ಶ್ರೀಅಯ್ಯಪ್ಪಸ್ವಾಮಿ ದೇವಸ್ಥಾನ, ಚಾಮುಂಡಿಬೆಟ್ಟ ತಪ್ಪಲು.

■ **ಶ್ರೀ ಭುವನೇಶ್ವರಿ ಸೇವಾ ಟ್ರಸ್ಟ್ :** ಸರಸ್ವತಿ ಪೂಜೆಯ ಪ್ರಯುಕ್ತ ಶಿಕ್ಷಕರಿಗೆ ಸನ್ಮಾನ ಹಾಗೂ ಮಕ್ಕಳಿಗೆ ಪುಸ್ತಕ ವಿತರಣಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್ ಕುಮಾರ್, ಪಾಲಿಕೆ ಮಾಜಿ ಸದಸ್ಯ ಮಾ.ವಿ. ರಾಮ್‌ಪ್ರಸಾದ್, ಬಿ.ವಿ. ಮಂಜುನಾಥ್, ಅಪೂರ್ವ ಸುರೇಶ್, ಪ್ರಮೀಳ, ಕೆ.ಎಸ್. ಶಶಿಕಲಾ, ಬಿ. ಬಾಲಕೃಷ್ಣ, ಮಾಲಿಂಗಿ ಸುರೇಶ್, ಎಚ್. ಸುತ್ತೂರು ಜಯರಾಮ್, ಪದ್ಮ, ಸ್ಥಳ: ನಮೋ ಯೋಗ ಭವನ, ರಾಮಾನುಜ ರಸ್ತೆ, ಬೆಳಗ್ಗೆ 11ಕ್ಕೆ.

■ **ಅಹಿಂದ ಸಂಘಟನೆಗಳು ಹಾಗೂ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ :** ರಾಜ್ಯಪಾಲರು ದಸರಾ ಕಾರ್ಯಕ್ರಮದಲ್ಲಿ ಭಾಗವಹಿಸಬಾರದೆಂದು ಒತ್ತಾಯಿಸಿ 'ಗೋ ಬ್ಯಾಕ್ ಗೌರ್‍ನರ್' ಪೋಸ್ಟರ್ ಹಾಗೂ ಪತ್ರ ಚಳವಳಿ, ಸ್ಥಳ: ರಾಮಸ್ವಾಮಿ ವೃತ್ತದ ಅಂಚೆ ಪೆಟ್ಟಿಗೆ ಎದುರು, ಬೆಳಗ್ಗೆ 11.30ಕ್ಕೆ.

■ **ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ :** ಶ್ರೀ ಶಾರದಾಶರನ್ನವರಾತ್ರೋತ್ಸವ-2024, ಶ್ರೀ ದುರ್ಗಾಲಂಕಾರ, ಶ್ರೀ ದುರ್ಗಾ ಹೋಮ, ಸ್ಥಳ: ಶಂಕರ ಮಠದ ಆವರಣ, ಫೋರ್ಟ್ ಮೊಹಲ್ಲಾ.

■ **ತ್ರಯೀನ್ಯಾಸ್ ಶ್ರೀ ವಿದ್ಯಾ ಫೌಂಡೇಷನ್ :** 28ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 8.30 ರಿಂದ ಮಹಾಭಿಷೇಕ, ಶ್ರೀ ಗೌರಿ, ಶ್ರೀ ವಿದ್ಯಾದೀಪದುರ್ಗಾ ಪೂಜೆ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀ ಚಕ್ರಾರ್ಚನೆ, ಶ್ರೀ ಸುಂದರಕಾಂಡ ಪಾರಾಯಣ, ಸಂಜೆ 5.30 ರಿಂದ ಶ್ರೀ ವಿದ್ಯಾ ಷೋಡಶದುರ್ಗಾ ಜಗದ್ಧಾತ್ರಿ ಹೋಮ, ಶ್ರೀ ವನದುರ್ಗಾ, ಶ್ರೀ ಶೂಲಿನಿದುರ್ಗಾ, ಶ್ರೀ ಜಾತವೇದದುರ್ಗಾ, ಶ್ರೀ ಶಾಂತಿದುರ್ಗಾ, ಶ್ರೀ ಶಬರಿದುರ್ಗಾ, ಶ್ರೀ ಜ್ವಲದುರ್ಗಾ, ಶ್ರೀ ಲವಣದುರ್ಗಾ, ಶ್ರೀ ದೀಪದುರ್ಗಾ, ಶ್ರೀ ಆಸುರೀದುರ್ಗಾ, ಶ್ರೀ ಅಷ್ಟಾಕ್ಷರಿದುರ್ಗಾ, ಶ್ರೀ ಜಯದುರ್ಗಾ, ಶ್ರೀ ಶೀತಲದುರ್ಗಾ, ಶ್ರೀಮಹಿಷಮರ್ದಿನಿದುರ್ಗಾ, ಶ್ರೀ ಭ್ರಮರದುರ್ಗಾ, ಶ್ರೀ ಪಕ್ಷಿದುರ್ಗಾ, ಶ್ರೀ ದೃಷ್ಟಿದುರ್ಗಾ ಹೋಮ, ಪೂರ್ಣಾಹುತಿ, ಕುಂಕುಮಾರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಚತುಃಷಷ್ಠಿ ಮತ್ತು ದಿಕ್ಪಾಲಕ, ಕ್ಷೇತ್ರಪಾಲ ಬಲಿಹರಣ, ಸ್ಥಳ: ತ್ರಯೀನ್ಯಾಸ್, ಜಯಲಕ್ಷ್ಮೀಪುರಂ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ದಸರಾ ಗೀತಾರಾಧನ, 6.30 ದಸರಾದಲ್ಲಿ ಇಂದು, ಪ್ರಸ್ತುತಿ : ಜಾಂಪಣ್ಣ ಆಶೀಹಾಳ್, 6.35 ಸೀರೆಯ ಸೊಬಗು-ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ : ಜಯಶ್ರೀ ಹೆಗಡೆ, 6.40 ರಾಜಮಾರ್ಗ-ಮೈಸೂರಿನ ಇತಿಹಾಸ ಪ್ರಸಿದ್ಧ ಮಾರ್ಗಗಳ ಪರಿಚಯ, ಪ್ರಸ್ತುತಿ : ಡಾ. ಮೈಸೂರು ಉಮೇಶ್, 6.50 ರೈತರಿಗೆ ಸಲಹೆ, 7.15 ಹಸಿರುಹೊನ್ನು-ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 7.45 ಶರಣ ಸಂಸ್ಕೃತಿ ಉತ್ಸವ-ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು-ಶ್ರೀಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ, ಚಿತ್ರದುರ್ಗ, 8.30 ಚಿತ್ರಗೀತೆಗಳು, 9.05 ಚಾಮುಂಡಿ ಹಬ್ಬ-ದಸರಾ ಸಂಭ್ರಮ, ಜನಪದರ ನಾಲಿಗೆಯಲ್ಲಿ ಮೈಸೂರು ದೇವತೆ, ರಚನೆ : ಡಾ.ಪಿ.ಕೆ. ರಾಜಶೇಖರ್, ಪ್ರಸ್ತುತಿ : ಡಾ. ಮೈಸೂರು ಉಮೇಶ್, 9.35 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ – ದಸರಾ ಪ್ರಯುಕ್ತ ಶ್ರೀ ಮುತ್ತುಸ್ವಾಮಿ ದೀಕ್ಷಿತರ ನವಾವರಣ ಕೃತಿಗಳನ್ನೊಳಗೊಂಡ ವಿಶೇಷ ಸಂಗೀತ ಸರಣಿ -ನಮೋ ಜಗತ್ತಾರಿಣಿ, ನಿರ್ಮಾಣ-ಮೈಸೂರು. ಎಸ್. ರಾಜಲಕ್ಷ್ಮೀ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ-ಕಾಡಿನಲ್ಲಿನ ಕಥೆಗಳು. ಪ್ರಸ್ತುತಿ : ಜಿ. ಶಾಂತಕುಮಾರ್

ಮಧ್ಯಾಹ್ನ: 12.30 ದೇವರನಾಮ-ಶೀಲಾ ಹೂಗಾರ್, 12.45 ಚಿತ್ರಗೀತೆಗಳು, 1.20 ಭಾವಗೀತೆಗಳು-ಪುಷ್ಪಲತಾ ಚಂದ್ರಹಾಸ್, 2.40 ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ರಸಮಂಜರಿ, 6.10 ಸೀರೆಯ ಸೊಬಗು-ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ : ಜಯಶ್ರೀ ಹೆಗಡೆ, 6.50 ಕೃಷಿರಂಗ-ಕಿಸಾನ್‌ವಾಣಿ, ಪ್ರಾಯೋಜಕರು : ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ 'ನಂ ಕಂಪನಿ' ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ, ತೋಟದ ಬೆಳೆಗಳು, ಸಂಬಾರ ಹಾಗೂ ಸುಗಂಧ ದ್ರವ್ಯ ಬೆಳೆಗಳ ಮೌಲ್ಯವರ್ಧನ ತಾಂತ್ರಿಕತೆಗಳು. ಈ ಕುರಿತು ಮೈಸೂರಿನ ಕೇಂದ್ರೀಯ ಆಹಾರ ತಂತ್ರಜ್ಞಾನ, ಸಂಶೋಧನಾಲಯದ ವಿಜ್ಞಾನಿ ಡಾ. ಬೆಟ್ಟದಯ್ಯ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್. ಕೇಶವಮೂರ್ತಿ, 7.45 ಕನ್ನಡದಲ್ಲಿ ಭಾಷಣ, 8.00 ಯುವವಾಣಿ, 8.30 ಅರಮನೆ ಸಂಗೀತ ವೈಭವ-ಸಂಗೀತ ರೂಪಕ, 10.00 ನಾಟಕ: ಚೋಳರ ಕಾಲದ ರಾಜದಂಡ, ರಚನೆ : ಅಪರಂಜಿ ಶಿವು, ನಿರ್ಮಾಣ : ಎಸ್.ಎಸ್.ಉಮೇಶ್

■ **ಹೇಮಲತಾ ಕುಮಾರಸ್ವಾಮಿ :** ಮೈಸೂರು ಮನೆ ಮನೆ ದಸರಾ ಬೊಂಬೆ ಪ್ರದರ್ಶನ, ಸ್ಥಳ: 567/3, 2ನೇ ರಾಮಚಂದ್ರ ಅಗ್ರಹಾರ, ಖಿಲ್ಲೆ ಮೊಹಲ್ಲಾ.

■ **ಶ್ರೀ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನ ಚಾರಿಟಬಲ್ ಟ್ರಸ್ಟ್ :** ಶರನ್ನವರಾತ್ರಿ ಉತ್ಸವ-2024, ಬೆಳಗ್ಗೆ 9ಕ್ಕೆ ಕುಮಾರಿ ಪೂಜೆ, ಬೆಳಗ್ಗೆ 10ಕ್ಕೆ ಬ್ರಹ್ಮಚಾರಿ ಪೂಜೆ, ಬೆಳಗ್ಗೆ 11ಕ್ಕೆ ಸುಮಂಗಲಿ ಪೂಜೆ, ಕಾಳಿಕಾ ಅಲಂಕಾರ, ಸ್ಥಳ: ದೇವಸ್ಥಾನದ ಪ್ರಾಂಗಣ, ವಾಣಿವಿಲಾಸ ಮೊಹಲ್ಲಾ, ಬೆಳಗ್ಗೆ 9 ಗಂಟೆಯಿಂದ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಗರ್ಭಾಶಯದ ಫೈಬ್ರಾಯ್ಡ್‌ಗಳ ವೈದ್ಯಕೀಯ ತಪಾಸಣಾ ಶಿಬಿರ, ಗುದಗತ ರೋಗಗಳಾದ ಪೈಲ್ಸ್, ಮೂಲವ್ಯಾಧಿ, ಫಿಸ್ತುಲಾ, ಭಗಂದರ, ನಾಡಿವ್ರಣ, ಫಿಶರ್ ತೊಂದರೆಗಳಿಗೆ ಉಚಿತ ತಪಾಸಣಾ ಮತ್ತು ಸಲಹಾ ಶಿಬಿರ, ಮೂತ್ರಪಿಂಡ (ಕಿಡ್ನಿ) ಕಾಯಿಲೆಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ ಸಂಜೆ 4.30ರವರೆಗೆ.

■ **ವ್ಯವಸ್ಥಾಪಕರು :** ಕೆ.ಎಸ್. ರಾಘವೇಂದ್ರ ಅವರಿಂದ ಪೇಪರ್ ಪಲ್ಪ್ ಉಪಯೋಗಿಸಿ ಕೈಯಿಂದ ಮಾಡಿದ ಬೊಂಬೆಗಳ ಮೂಲಕ ದಶಾವತಾರ ಒಳಗೊಂಡ ಶ್ರೀ ಬಾಲಕೃಷ್ಣ ಲೀಲೆ ಪ್ರಸಂಗಗಳ ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ 2ನೇ ಹಂತ, ಬೆಳಗ್ಗೆ 10 ಗಂಟೆಯಿಂದ.

■ **ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕೆ ಸೇವಾ ಟ್ರಸ್ಟ್ :** ಶರನ್ನವರಾತ್ರಿ ವೈಭವ-2024, ಸಪ್ತಮಿ, ಬೆಳಗ್ಗೆ 10ಕ್ಕೆ ದುರ್ಗಾ ಹೋಮ, ದುರ್ಗಾ ದೀಪ ನಮಸ್ಕಾರ (ಸಂಜೆ 7 ಗಂಟೆಗೆ), ಸ್ಥಳ: ಶ್ರೀ ವೆಂಕಟಾರ್ಜುನ ಧ್ಯಾನ ಮಂದಿರ, ಹಾರೋಹಳ್ಳಿ ಗ್ರಾಮ. ಸಂಜೆ ಭಜನೆ, ಆರತಿ, ಸ್ಥಳ: ಗುರುನಿವಾಸ, ಸೋನಾರ್ ಬೀದಿ, ನಾರಾಯಣಶಾಸ್ತ್ರಿ ರಸ್ತೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ :** ದಸರಾ ಮಹೋತ್ಸವ-2024 ಅಂಗವಾಗಿ ಛಾಯಾಚಿತ್ರ ಪ್ರದರ್ಶನ, ಸ್ಥಳ: ಸುಚಿತ್ರ ಕಲಾ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 11.30 ರಿಂದ.

■ **ಶ್ರೀ ರಾಮಕೃಷ್ಣ ಆಶ್ರಮ :** ಶ್ರೀ ಶ್ರೀ ದುರ್ಗಾಪೂಜೆ, ಮಹಾಸಪ್ತಮಿ, ಬೆಳಗ್ಗೆ 7 ರಿಂದ ಶ್ರೀ ದುರ್ಗಾಮಾತೆಗೆ ಪೂಜೆ, ಬೆಳಗ್ಗೆ 8 ರಿಂದ ದುರ್ಗಾಸಪ್ತಶತೀ ಪಾರಾಯಣ, 11 ರಿಂದ ಭಜನೆ, 11.45 ರಿಂದ ಆರತಿ, ಪುಷ್ಪಾಂಜಲಿ, ಸಂಜೆ 7ಕ್ಕೆ ಸಂಧ್ಯಾರತಿ, ವಿಶೇಷ ಭಜನೆ, ಸ್ಥಳ: ಶ್ರೀ ರಾಮಕೃಷ್ಣ ಆಶ್ರಮ, ಯಾದವಗಿರಿ.

■ **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ :** ನವರಾತ್ರಿ ಪೂಜಾ ಕಾರ್ಯಕ್ರಮ, ಭಜನೆ, ರವಿಕಾಂತಾ ನಂದಸ್ವಾಮಿ ಅವರಿಂದ ಪ್ರವಚನ, ಸ್ಥಳ: ದೇವಸ್ಥಾನದ ಆವರಣ, ಸಂಜೆ 5.30 ರಿಂದ.

■ **ರಂಗಾಯಣ, ಮೈಸೂರು :** ನವರಾತ್ರಿ ಅಂಗವಾಗಿ ರಂಗ ಉತ್ಸವ, ರಂಗ ಕೀರ್ತನ ಸಂಪದ ಡಾ. ಲಕ್ಷ್ಮಣದಾಸ್ ಮಿತ್ರ ಮಂಡಳಿ, ತುಮಕೂರು ಅವರಿಂದ ಪಾದುಕಾ ಪಟ್ಟಾಭಿಷೇಕ ನಾಟಕ ಪ್ರದರ್ಶನ, ಸ್ಥಳ: ರಂಗಾಯಣ ಆವರಣ, ಸಂಜೆ 6.30ಕ್ಕೆ.

ಅಂದದ ನಗರಿಗೆ ಬೆಳಕಿನ ಶೃಂಗಾರ...



ಸಾಂಸ್ಕೃತಿಕ ನಗರಿ ಮೈಸೂರಿಗೆ ಬೆಳಕಿನ ಶೃಂಗಾರ ಮಾತಲ್ಲಿ ವರ್ಣಿಸಲಾಗದು; ಕಂಗಳೇ ಚೆಲುವನ್ನು ನಿರ್ಧರಿಸಬಲ್ಲವು !

ದಸರಾಗೆ ಇಂಬು ನೀಡುವ 'ಬೊಂಬೆ ಸಂಭ್ರಮ'







ಮೈಸೂರು ಗೋಕುಲಂ ಬಡಾವಣೆಯ ವೈದ್ಯನಾಥನ್ ಅವರ ನಿವಾಸದಲ್ಲಿ ಬೊಂಬೆಗಳನ್ನು ಜೋಡಿಸಿರುವುದು ಕಣ್ಮನ ಸೆಳೆಯುವಂತಿದೆ.

ಮೈಸೂರು, ಅ.9(ಎಸ್‌ಬಿಡಿ)– ನವರಾತ್ರಿಯಲ್ಲಿ ಬೊಂಬೆಗಳನ್ನು ಜೋಡಿಸಿ, ಪೂಜಿಸುವ ಸಂಪ್ರದಾಯವನ್ನು ಹಿಂದಿನಿಂದಲೂ ಹಲವು ಕುಟುಂಬಗಳು ಮುಂದುವರೆಸಿಕೊಂಡು ಬಂದಿವೆ.

ದೇವರ ಸ್ಮರಣೆಯೊಂದಿಗೆ ಮನುಕುಲದ ಮೌಲ್ಯ ಸಾರುವ ಸೂಚಕವೆಂಬಂತೆ ಬೊಂಬೆಗಳನ್ನು ಜೋಡಿಸುವುದೇ ಒಂದು ಹಬ್ಬ. ಹಲವು ದೇವರುಗಳ ಬೊಂಬೆಗಳ ಜೊತೆಗೆ ಪುರಾಣ ಹಾಗೂ ಐತಿಹಾಸಿಕ ಸಂಗತಿಗಳನ್ನು ಬಿಂಬಿಸುವ ವೈವಿಧ್ಯಮಯ ಬೊಂಬೆಗಳನ್ನು ಕಣ್ತುಂಬಿಕೊಳ್ಳುವುದು ಮಹದಾನಂದ. ಕ್ರಮಬದ್ಧ ಹಾಗೂ ಆಕರ್ಷಕ ರೀತಿಯಲ್ಲಿ ಬೊಂಬೆಗಳನ್ನು ಜೋಡಿಸಿದ್ದರಂತೂ ನೋಡುಗರ ಹೃನ್ಮನಕ್ಕೆ ಸುಗ್ಗಿ–ಸಂಭ್ರಮ. ಹೀಗೆ, ಮೈಸೂರು ಗೋಕುಲಂ ಬಡಾವಣೆ ಪಾರ್ಕ್ ರಸ್ತೆಯ ವೈದ್ಯನಾಥನ್ ಅವರ 'ವೈಷ್ಣವಿ ನಿಲಯ'ದಲ್ಲಿ 'ದಸರಾ ಬೊಂಬೆ ಜೋಡಣೆ' ನಯನ ಮನೋಹರವಾಗಿದೆ. ವೃತ್ತಿಯಲ್ಲಿ ಚಾರ್ಟರ್ಡ್ ಅಕೌಂಟೆಂಟ್(ಸಿಎ) ಆಗಿರುವ ಇವರ ಮನೆಯಲ್ಲಿ ಹಲವು ವರ್ಷಗಳಿಂದ ನವರಾತ್ರಿಯಲ್ಲಿ ಬೊಂಬೆ ಕೂರಿಸುವ ಸಂಪ್ರದಾಯವನ್ನು ಪಾಲಿಸಿಕೊಂಡು ಬರಲಾಗಿದೆ. ಹಾಗೆಯೇ ಈ ಬಾರಿಯೂ ಅತ್ಯಾಕರ್ಷಕವಾಗಿ ಬೊಂಬೆಗಳನ್ನು ಜೋಡಿಸಲಾಗಿದೆ.

ವಿಜಯದಶಮಿಯಂದು ಅರಮನೆ ಅಂಗಣದಿಂದ ಬನ್ನಿಮಂಟಪದವರೆಗೆ ತಾಯಿ ಚಾಮುಂಡೇಶ್ವರಿ ಮೂರ್ತಿ ಸಹಿತ ಚಿನ್ನದ ಅಂಬಾರಿ ಹೊತ್ತು ಸಾಗುವ ಗಜಪಡೆ ನಾಯಕ, ಪೊಲೀಸ್ ವಾದ್ಯವೃಂದ ಸೇರಿದಂತೆ ಜಂಬೂಸವಾರಿಯ ಚಿತ್ರಣವನ್ನು ಕಣ್ಣಿಗೆ ಕಟ್ಟುವಂತೆ ಕ್ರಮಬದ್ಧವಾಗಿ ಬೊಂಬೆಗಳನ್ನು ಜೋಡಿಸಲಾಗಿದೆ. ಮೈಸೂರು ಸಂಸ್ಥಾನ ಆಳಿದ ಹಲವು ರಾಜ–ಮಹಾರಾಜರನ್ನು ಬಿಂಬಿಸುವ ಗೊಂಬೆಗಳೂ ಕಣ್ಮನ ಸೆಳೆಯುತ್ತಿವೆ.

ಶ್ರೀ ವಿಷ್ಣು, ಶ್ರೀಕೃಷ್ಣಲೀಲೆ, ಲಕ್ಷ್ಮಿ ವೆಂಕಟೇಶ್ವರ, ಶಿವಲಿಂಗ, ಗುರುರಾಯರು, ಸಾಹಿಬಾಬಾ, ಮಹದೇಶ್ವರ, ಸುಮಾರು 140 ವರ್ಷಗಳಷ್ಟು ಹಿಂದಿನದು ಎನ್ನಲಾಗುವ ನೀಲಿ ವರ್ಣದ ಶ್ರೀಕೃಷ್ಣನ ಬೊಂಬೆ ಸೇರಿದಂತೆ ಹಲವು ದೇವರುಗಳು, ದೈವೀ ಪುರುಷರ ಬೊಂಬೆಗಳು ವಿಶೇಷವಾಗಿವೆ. ಮದುವೆ ದಿಬ್ಬಣ, ವಿವಾಹ ನೆರವೇರಿದ ಮನೆಯಲ್ಲಿನ ಚಿತ್ರಣ ಸೊಗಸಾಗಿದೆ. ಏಳು ಹಂತಗಳಲ್ಲಿ ಸುಂದರವಾಗಿ ಜೋಡಿಸಿರುವ ವರ್ಣಮಯ, ವೈವಿಧ್ಯಮಯ ಬೊಂಬೆಗಳ ಮುಂಭಾಗ ವಿವಿಧ ಆಹಾರ ಧಾನ್ಯಗಳು, ಖಾದ್ಯಗಳು, ಹಣ್ಣು–ತರಕಾರಿಗಳು, ಸಿಹಿ ತಿನಿಸುಗಳನ್ನೂ ಇಡಲಾಗಿದೆ. ಹತ್ತು ದಿನಗಳಿಂದ ಸೂಕ್ಷ್ಮತೆಯಿಂದ ಬೊಂಬೆಗಳನ್ನು ಅಚ್ಚುಕಟ್ಟಾಗಿ ಜೋಡಿಸಲಾಗಿದ್ದು, ನವರಾತ್ರಿ ಮುಕ್ತಾಯವಾದ ಬಳಿಕ ಅವುಗಳನ್ನು ಜೋಪಾನವಾಗಿಡಲಾಗುವುದು. ಮನೆ ಮಂದಿಯೆಲ್ಲಾ ಸೇರಿ ಬೊಂಬೆ ಜೋಡಿಸುವುದೆಂದರೆ ಆನಂದ. ಹಿರಿಯರ ಸಂಪ್ರದಾಯ ಉಳಿಸಿಕೊಂಡು ಮುಂದಿನ ಪೀಳಿಗೆಗೆ ಪರಿಚಯಿಸುವುದು ನಮ್ಮೆಲ್ಲರ ಕರ್ತವ್ಯ ಎಂಬುದು ಎಂದು ಸಿಎ ವೈದ್ಯನಾಥನ್ ಅವರ ಮನದಾಳದ ನುಡಿ.

ಇಡಿ ನೋಟಿಸ್ ಬಿಸಿ; ಮುಡಾ ಅಧಿಕಾರಿಗಳಲ್ಲಿ ತಳಮಳ

ಮೈಸೂರು, ಅ.9–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಅಧಿಕಾರಿಗಳಿಗೆ ಇಡಿ ಜ್ವರ ಶುರುವಾಗಿದೆ.

ನಿವೇಶನ ಅಕ್ರಮ ಮಂಜೂರು ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ವಿರುದ್ಧದ ದೂರಿಗೆ ಸಂಬಂಧಿಸಿದಂತೆ ಅಗತ್ಯ ದಾಖಲೆಗಳನ್ನು ಸಲ್ಲಿಸುವಂತೆ ಜಾರಿ ನಿರ್ದೇಶನಾಲಯ(ಇಡಿ) ಮುಡಾಗೆ ಪತ್ರ ರವಾನಿಸಿದೆ ಎನ್ನಲಾಗಿರುವ ಹಿನ್ನೆಲೆಯಲ್ಲಿ ಪ್ರಾಧಿಕಾರದ ಆಯುಕ್ತರಾದ ರಘುನಂದನ್ ಅವರು ಸಂಬಂಧಪಟ್ಟ ಅಧಿಕಾರಿಗಳ ಮೂಲಕ ದಾಖಲೆ ಜೋಡಿಸುವಲ್ಲಿ ನಿರತರಾಗಿದ್ದಾರೆ. ಇಡಿ ಕೇಳಿರುವ ಎಲ್ಲಾ ದಾಖಲೆಗಳಿಗೂ ರಾತ್ರಿ ಬಹುಹೊತ್ತಿನವರೆಗೂ ತಲಾಶ್ ನಡೆಸಲಾಗಿದೆ ಎಂದು ತಿಳಿದುಬಂದಿದೆ. ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ನೀಡಿದ ದೂರಿನನ್ವಯ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ನಾಲ್ವರ ವಿರುದ್ಧ ಎಫ್‌ಐಆರ್ ದಾಖಲಾದ ಬೆನ್ನಲ್ಲೇ ಇಡಿ ಪ್ರವೇಶಿಸಿದೆ. ಕೃಷ್ಣ ಅವರೇ ಇಡಿಗೂ ದೂರು ನೀಡಿದ್ದು, ಈಗಾಗಲೇ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಪ್ರಕ್ರಿಯೆಗಳು ಆರಂಭಗೊಂಡಿವೆ. ಇದರ ಭಾಗವಾಗಿ ದಾಖಲೆಗಳನ್ನು ಬೆಂಗಳೂರು ಕಚೇರಿಗೆ ತಲುಪಿಸುವಂತೆ ಇಡಿ ಪತ್ರ ರವಾನಿಸಿದೆ ಎನ್ನಲಾಗಿದೆ. ಒಂದೆಡೆ ಲೋಕಾಯುಕ್ತ ಪೊಲೀಸರ ತನಿಖೆ ನಡುವೆಯೇ ಇಡಿ ತಲೆಬಿಸಿ ಮುಡಾ ಅಧಿಕಾರಿಗಳ ಕಾಡಲಾರಂಭಿಸಿದೆ.

ಹೆಸರು ಬದಲಾವಣೆ

ರಮೇಶ್ ಜೇವೂರ, S/o ಶಿರೆಪ್ಪ ಜೇವೂರ, ಆದ ನಾನು ನಂ. 1173, ಅನುಗ್ರಹ, 8ನೇ ಮೇನ್, ಇಎಸ್‌ಐ ಆಸ್ಪತ್ರೆ ಪಕ್ಕ, ಗೋಕುಲಂ 3ನೇ ಹಂತ, ಮೈಸೂರು–570 002 ಇಲ್ಲಿ ವಾಸವಿದ್ದು, ನನ್ನ ಆಧಾರ್ ಕಾರ್ಡ್ ಮತ್ತು ಪಾನ್ ಕಾರ್ಡ್‌ನಲ್ಲಿ ರಮೇಶ್ ಜೇವೂರ ಎಂದು ನಮೂದಾಗಿದ್ದು, ನನ್ನ ಹೆಸರನ್ನು ಜೇವೂರ ರಮೇಶ್ ಶಿರೆಪ್ಪ ಯಿಂದ ರಮೇಶ್ ಜೇವೂರ ಎಂಬುದಾಗಿ ನೋಟರಿ ಎಸ್.ಎನ್. ಉಮಾಪತಿ ಸಮ್ಮುಖದಲ್ಲಿ ದಿ. 9–10–2024ರಂದು ಮೈಸೂರಿನಲ್ಲಿ ಬದಲಾಯಿಸಿಕೊಂಡಿರುತ್ತೇನೆ. ಸಹಿ/– ರಮೇಶ್ ಜೇವೂರ

ನಕ್ಕರೆ ಅದೇ ಸ್ವರ್ಗ

ಗುಂಡ : ಸ್ವಾಮಿಗಳೇ... ನನ್ನ ಮದುವೆಗೆ ಎಲ್ಲರನ್ನು ಕರೆಯಬೇಕು. ಆದರೆ, ಕಡಿಮೆ ಖರ್ಚಾಗಬೇಕು. ಏನು ಮಾಡಬೇಕು?

ಸ್ವಾಮೀಜಿ : 'ಮದುವೆ ಆಗಿ ಸುಖ, ಶಾಂತಿ ಮತ್ತು ನೆಮ್ಮದಿಯಿಂದ ಇರುವವರಿಗೆ ಮಾತ್ರ ಆಹ್ವಾನ' ಎಂದು ಮದುವೆ ಆಹ್ವಾನ ಪತ್ರಿಕೆಯಲ್ಲಿ ಹಾಕಿಸು...!

ಮೈಸೂರು ಮಿತ್ರ

ಗುರುವಾರ, 10 ಅಕ್ಟೋಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಸಿರಿವಂತರ ಮಹಲುಗಳಲ್ಲಿ, ಬಡವರಿರುವ ಗುಡಿಸಲಲ್ಲಿ, ಬೇಸಾಯದ ಕಾಯಕದಲ್ಲಿ, ಕಾರ್ಖಾನೆಯ ಯಂತ್ರಗಳಲ್ಲಿ ಕೇಳಲಿ ಕೇಳಲಿ ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ. – ಸ. ರುದ್ರಮೂರ್ತಿ ಶಾಸ್ತ್ರಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕುಂಬಾರನಿಗೆ ವರುಷ, ದೊಣ್ಣೆಗೆ ನಿಮಿಷ

ನಿಮ್ಮ ಪತ್ರಗಳು

'ಅಂಧಯುಗ' ನಾಟಕ ಉತ್ತಮ ರಂಗ ಪ್ರಯೋಗ



ಮಾನ್ಯರೆ,

ಮೈಸೂರಿನ ನಟನಾ ರಂಗಭೂಮಿಯಲ್ಲಿ ನಡೆದ ಮಂಡ್ಯ ರಮೇಶ್ ನಿರ್ದೇಶನದ 'ಅಂಧಯುಗ' ನಾಟಕ ರಂಗಾಸಕ್ತರ ಮನಸ್ಸನ್ನು ಗೆಲ್ಲುವಲ್ಲಿ ಯಶಸ್ವಿಯಾಗಿದೆ. ಇದೊಂದು ಉತ್ತಮ ರಂಗಪ್ರಯೋಗ. "ಕಾವ್ಯೇಷು ನಾಟಕಂ ರಮ್ಯಂ" ಕಾಳಿದಾಸನ ನುಡಿಯಂತೆ ನಾಟಕವು ಮನುಷ್ಯನ ವ್ಯಕ್ತಿತ್ವದಲ್ಲಿ ಅಡಗಿರುವ ಪ್ರತಿಭೆಗಳನ್ನು ಅಭಿನಯದ ಮೂಲಕ ಅಭಿವ್ಯಕ್ತಿಸುತ್ತದೆ. ಪ್ರಾಯೋಗಿಕ ನಾಟಕಗಳು ಪ್ರೇಕ್ಷಕರನ್ನು ತನ್ನೆಡೆಗೆ ಸೆಳೆಯುವಲ್ಲಿ ಯಶಸ್ವಿಯಾಗಿದೆ. 'ಅಂಧಯುಗ' ನಾಟಕ ಪೌರಾಣಿಕ ವಸ್ತುಗಳ ಮೇಲೆ ಹೊಸ ದೃಷ್ಟಿಕೋನವನ್ನು ಇರಿಸಿ ನೋಡುವುದು, ಸಮಾಜದ ಮೇಲೆ ಪರಿಣಾಮವನ್ನು ಉಂಟು ಮಾಡಬಹುದಾದ ರಂಗಪ್ರಯೋಗವಾಗಿದೆ. ಈ ನಾಟಕದಲ್ಲಿ ನೆಳಲು ಬೆಳಕಿನಿಂದ ದೃಶ್ಯವನ್ನು ಕಟ್ಟಿಕೊಟ್ಟಿರುವುದು ಒಂದು ವಿಶೇಷವಾದ ರಂಗಪ್ರಯೋಗ. ದ್ವಾಪರಯುಗದ ಮಹಾಭಾರತ, ಕುರುಕ್ಷೇತ್ರ ಯುದ್ಧದ 17, 18ನೇ ದಿನದ ಮಾತುಕತೆ ನಾಟಕ ಪ್ರಯೋಗ. ಕಥೆ ಹುಟ್ಟಿಕೊಳ್ಳುವುದು ಕುರುಡ ಧೃತರಾಷ್ಟ್ರನ ರಾಜ್ಯಾಡಳಿತದಿಂದ. ಅನೇಕ ಮಜಲುಗಳನ್ನು ದಾಟಿ ಯುದ್ಧದಲ್ಲಿ ಸಮಾಪ್ತಿಯಾಗುತ್ತದೆ. ಅಂದರೆ ಅಂಧತೆಯಿಂದ ಪ್ರಾರಂಭವಾಗಿ ಅಂಧತ್ವದಲ್ಲಿಯೇ ಕೊನೆಗೊಳ್ಳುತ್ತದೆ. ಧೃತರಾಷ್ಟ್ರನ ಅಂಧ ಪ್ರೀತಿ, ಕೊನೆಯಲ್ಲಿ ಉಳಿಯುವ ಸಂಜಯ, ವಿಧುರ, ಕೃತವರ್ಮ, ಅಶ್ವತ್ಥಾಮ ಇವರು ನಾಟಕದ ಸಂಪೂರ್ಣತೆಗೆ ಪೂರಕವಾಗಿದ್ದಾರೆ. ಅವರ ವಿಮರ್ಶನಾ ನಿಲುವು ಬಹಳ ಮುಖ್ಯವಾಗುತ್ತದೆ. ಅಶ್ವತ್ಥಾಮನ ಬದ್ಧತೆಯು ನಾಟಕದಲ್ಲಿ ಯಶಸ್ವಿಯಾಗಿದೆ, ಹಾಗೆಯೇ ದ್ವಾರಪಾಲಕ ಸೈನಿಕರಿಬ್ಬರ ಮಾತುಗಳು ವರ್ತಮಾನದ ಸಾಮಾಜಿಕ, ರಾಜಕೀಯ ನಿಲುವುಗಳನ್ನು ಪ್ರತಿಬಿಂಬಿಸುತ್ತದೆ. ಇಂತಹ ರಂಗಪ್ರಯೋಗಗಳು ಪ್ರಸ್ತುತ ಸಮಾಜಕ್ಕೆ ಅತ್ಯಂತ ಅವಶ್ಯಕ.

–ಮಹೇಶ್ ಕುಮಾರ್, ನಿವೃತ್ತ ಪ್ರಾಧ್ಯಾಪಕರು, ಮಹಾರಾಣಿ ಕಾಲೇಜ್, ಮೈಸೂರು

ರೈಲ್ವೇ ನಿಲ್ದಾಣದಲ್ಲಿ ಪ್ರೀಪೈಡ್ ಆಟೋ ಕಾರ್ಯಾಚರಿಸಲಿ

ಮಾನ್ಯರೆ,

ಮೈಸೂರು ರೈಲ್ವೇ ನಿಲ್ದಾಣದಲ್ಲಿ ಪ್ರೀಪೈಡ್ ಆಟೋ ಬೂತ್ ಕಾರ್ಯ ನಿರ್ವಹಿಸುತ್ತಿಲ್ಲ. ಇದರಿಂದ ಪ್ರಯಾಣಿಕರಿಗೆ ಭಾರಿ ತೊಂದರೆಯಾಗಿದೆ. ಮೈಸೂರು ನಿವಾಸಿಯಾದ ನಾನು ರೈಲ್ವೇ ನಿಲ್ದಾಣದಿಂದ ಶ್ರೀರಾಂಪುರಕ್ಕೆ ಆಟೋ ದರ ಕೇಳಿದಾಗ 250 ರಿಂದ 300 ರೂ. ಕೇಳಿದರು. ಈ ಪ್ರಯಾಣದ ಸರಿಯಾದ ದರ 110 ರೂ. ದಸರಾ ಪ್ರಯುಕ್ತ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ರೈಲಿನಲ್ಲಿ ಪ್ರಯಾಣಿಸುತ್ತಾರೆ. ಈ ಸಮಯದಲ್ಲಿ ರೈಲ್ವೇ ನಿಲ್ದಾಣದಲ್ಲಿ ಪ್ರೀಪೈಡ್ ಬೂತ್ ಕಾರ್ಯ ನಿರ್ವಹಿಸುತ್ತಿಲ್ಲ ಏಕೆ? ಏನಿದರ ಉದ್ದೇಶ. ಇದರಿಂದ ಪ್ರಯಾಣಿಕರಿಂದ ಆಟೋದವರು ಹೆಚ್ಚಿನ ದರ ವಸೂಲಿ ಮಾಡುತ್ತಿದ್ದಾರೆ. ಕೇಳಿದರೆ ಒನ್ ವೇ ಟ್ರಾಫಿಕ್ ಇದೆ ಎಂದು ಹೇಳುತ್ತಾರೆ. ಒನ್‌ವೇ ಇರುವುದು ಸಿಟಿಯ ಸುತ್ತಮುತ್ತ. ಎಲ್ಲಾ ಏರಿಯಾದಲ್ಲೂ ಒನ್‌ವೇ ಇರುತ್ತದೆಯೇ? ಇದರ ಬಗ್ಗೆ ಅಗತ್ಯ ಕ್ರಮ ಕೈಗೊಂಡು ಪ್ರಯಾಣಿಕರ ಹಣವನ್ನು ರಕ್ಷಿಸಿ.

–ಎಂ.ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ ಮೈಸೂರು.

ಲಿಂಗಾಂಬುದಿ ಕೆರೆ ಫಲ–ಪುಷ್ಪ ಪ್ರದರ್ಶನಕ್ಕೆ ದುಬಾರಿ ಪ್ರವೇಶ

ಮಾನ್ಯರೆ,

ಮೈಸೂರಿನ ಲಿಂಗಾಂಬುದಿ ಕೆರೆಯ ಆವರಣದಲ್ಲಿ ನಡೆಯುತ್ತಿರುವ ಈ ವರ್ಷದ ದಸರಾ "ಫಲ–ಪುಷ್ಪ ಪ್ರದರ್ಶನಕ್ಕೆ" ಪ್ರವೇಶ ದರ ವಯಸ್ಕರಿಗೆ ರೂ. 60 ಮತ್ತು ಮಕ್ಕಳಿಗೆ ರೂ.30 ನಿಗದಿಪಡಿಸಿರುವುದು ಒಂದು ರೀತಿಯಲ್ಲಿ ಇಲ್ಲಿನ ಅಧಿಕಾರಿಗಳು ಮಾಡುತ್ತಿರುವ "ಹಾಲುದರೋಡೆ" ಎನ್ನಬಹುದು. ಕೇವಲ ಅರ್ಧ ಗಂಟೆಯಲ್ಲಿ ನೋಡಿ ಮುಗಿಸಬಹುದಾದ ಈ ಫಲಪುಷ್ಪ ಪ್ರದರ್ಶನಕ್ಕೆ ರೂ.60 ನಿಗದಿಪಡಿಸಿದ್ದಾರೆ. ಅದೇ ಮೈಸೂರಿನ ಹೃದಯ ಭಾಗದಲ್ಲಿರುವ ಕುಪ್ಪಣ್ಣ ಪಾರ್ಕ್‌ನಲ್ಲಿ ಏರ್ಪಡಿಸಿರುವ ಮುಖ್ಯ ಫಲಪುಷ್ಪ ಪ್ರದರ್ಶನಕ್ಕೆ ರೂ.40 ಮಾತ್ರ ಪ್ರವೇಶ ದರವಿದೆ. ಅಲ್ಲದೇ ಈ ಫಲಪುಷ್ಪ ಪ್ರದರ್ಶನದಲ್ಲಿ ಸಾವಿರಾರು ಬಗೆಯ ಪುಷ್ಪಗಳಿದ್ದು, ಇದನ್ನು ಪೂರ್ಣವಾಗಿ ನೋಡಲು ಕನಿಷ್ಠ 3 ರಿಂದ 4 ಗಂಟೆ ಸಮಯವಾದರೂ ಬೇಕಾಗುತ್ತದೆ. ಈ ರೀತಿಯಲ್ಲಿ ಅವೈಜ್ಞಾನಿಕವಾಗಿ ದರ ನಿಗದಿಪಡಿಸಿರುವ ಅಧಿಕಾರಿಗಳಿಗೆ ಕನಿಷ್ಠ ತಿಳುವಳಿಕೆಯೂ ಇಲ್ಲವೇ ಅಥವಾ ನಮ್ಮನ್ನು ಪ್ರಶ್ನಿಸುವವರು ಯಾರೂ ಇಲ್ಲ ಎಂದುಕೊಂಡಿರಬಹುದು. ದಸರಾ ಮಹೋತ್ಸವ ಅಧಿಕಾರಿಗಳು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.



ದಸರೆ ಇಂಗ್ಲೀಷ್‌ಮಯ, ಕನ್ನಡ ನಾಪತ್ತೆ

ಮಾನ್ಯರೇ,

ದಸರೆಯಲ್ಲಿ ಹೊಸದಾಗಿ ಹಾಕಲಾಗಿರುವ ರಸ್ತೆ ಸೂಚನಾ ಫಲಕಗಳಲ್ಲಿ ಇಂಗ್ಲಿಷ್‌ಗೆ ಆದ್ಯತೆ ನೀಡಿರುವುದನ್ನು ವಿರೋಧಿಸಿ ಕನ್ನಡ ಕಾರ್ಯಕರ್ತರಾದ ನಾವುಗಳು (ಸ.ರ.ಸುದರ್ಶನ ಮತ್ತು ಅರವಿಂದ ಶರ್ಮ) 'ನೋ ಪಾರ್ಕಿಂಗ್' ಎಂಬ ಇಂಗ್ಲಿಷ್ ಭಾಗದ ಮೇಲೆ 'ಕನ್ನಡ ಮೊದಲು' ಎಂದು ಕಪ್ಪು ಬಣ್ಣ ಬಳಿದು ಪ್ರತಿಭಟಿಸಿದೆವು. ಆಹಾರ ಮೇಳದಲ್ಲಿ ಇಂಗ್ಲಿಷ್ ಮೆರೆಸಿದ್ದ ಕೋಕಾ ಕೋಲಾ, ಹ್ಯಾಂಗ್ಯೋ, ಕ್ವಾಲಿಟಿ ಮುಂತಾದ ಕಂಪನಿಗಳ ಫಲಕಗಳಿಗೂ ಬಣ್ಣ ಬಳಿದೆವು. ನಿನ್ನೆಯವರೆಗೂ ಕನ್ನಡ ಪ್ರಧಾನ ರಸ್ತೆ ಸೂಚನಾ ಫಲಕಗಳನ್ನು ಹಾಕಿದ್ದ ಪೊಲೀಸರು ಮತ್ತೆ 'ನೋ ಪಾರ್ಕಿಂಗ್' ಎಂಬ ಇಂಗ್ಲಿಷ್ ಪ್ರಧಾನವಾದ ನೂರಾರು ಫಲಕಗಳನ್ನು ಹೊಸದಾಗಿ ಹಾಕಿರುವುದು ಖಂಡನೀಯ.


ಹಾಗೆಯೇ ಆಹಾರ ಮೇಳದವರು ತಮ್ಮ ನಾಮಫಲಕಗಳನ್ನು ಕೋಕಾ ಕೋಲಾ ಮತ್ತು ಹ್ಯಾಂಗ್ಯೋ ಪ್ರಾಯೋಜಿಸಲು ಅವಕಾಶ ಕೊಟ್ಟು ಅವು ತಮ್ಮ ಲಾಂಛನಗಳನ್ನು ನಾಮಫಲಕದ ಪ್ರಾರಂಭದಲ್ಲೇ ಇಂಗ್ಲಿಷ್‌ನಲ್ಲಿ ಬರೆಯಲು ಅವಕಾಶ ಕೊಟ್ಟಿರುವುದು ವಿಷಾದನೀಯ. ಹಾಗೆಯೇ ಪೊಲೀಸರು ಹಾಕಿಕೊಂಡಿರುವ ಗುರುತಿನ ಚೀಟಿಯಲ್ಲೂ ಕನ್ನಡ ಕಾಣೆಯಾಗಿದೆ.

ಪೊಲೀಸ್ ಇಲಾಖೆ ಮತ್ತು ಸರ್ಕಾರದ ಒಂದು ಭಾಗವಾಗಿದ್ದರೂ ಇಂಗ್ಲಿಷ್ ಆದ್ಯತೆಗೆ ಅವಕಾಶ ಕೊಟ್ಟಿರುವುದು ಅಧಿಕಾರಿಗಳಿಂದ ನಿಯಮ ಉಲ್ಲಂಘನೆಯಾಗಿದೆ. ಆದ್ದರಿಂದ ಈ ಲೋಪಕ್ಕೆ ಕಾರಣರಾದ ಇಲಾಖೆಯ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಬೇಕು. ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಸೂಕ್ತ ಕ್ರಮ ಕೈಗೊಳ್ಳಬೇಕು. ವಿಜಯದಶಮಿ ಮೆರವಣಿಗೆಯ ಸಂದರ್ಭದಲ್ಲಿ ಪ್ರಾಯೋಜಕರು ಮೊದಲು ಶೇ.60ರಷ್ಟು ಕನ್ನಡಕ್ಕೆ ಪ್ರಾಧಾನ್ಯ ಕೊಟ್ಟು ತಮ್ಮ ಪ್ರಚಾರ ಫಲಕಗಳನ್ನು ಹಾಕಬೇಕು.

–ಸ ರ ಸುದರ್ಶನ, ಅರವಿಂದ ಶರ್ಮ, ಕನ್ನಡ ಕಾರ್ಯಕರ್ತರು

ದಸರಾ ಮೆರುಗು ಹೆಚ್ಚಿಸಿದ ಡ್ರೋನ್ ಶೋ!

ವೈಮಾನಿಕ ಪ್ರದರ್ಶನವಿಲ್ಲದ ನಿರಾಸೆ ನಿವಾರಿಸಿದ ಬಾನಲ್ಲಿನ ಚಮತ್ಕಾರ ಚಿತ್ತಾರ ಪ್ರದರ್ಶನ



ಪಂಜಿನ ಕವಾಯತು ಮೈದಾನದಲ್ಲಿ ಪ್ರದರ್ಶನ ನೀಡುತ್ತಿರುವ ಡ್ರೋನ್‌ಗಳನ್ನು ಮೈಸೂರು ಬನ್ನಿಮಂಟಪದ ಸಂತ ಫಿಲೋಮಿನಾ ಕಾಲೇಜು ಮೈದಾನದಲ್ಲಿನ ತಾತ್ಕಾಲಿಕ ಡಾಕಿಂಗ್ ಸ್ಟೇಷನ್‌ನಲ್ಲಿ ಇರಿಸಲಾಗಿದೆ.



ಬಾಟ್ಲ್ಯಾಬ್ ಡೈನಾಮಿಕ್ಸ್‌ನ ಬಿಸಿನೆಸ್ ಡೆವಲಪ್ಮೆಂಟ್ ಎಗ್ಸಿಕ್ಯೂಟಿವ್ ಕ್ಷಿತಿಜ್ ಕೈಕೇಯ ಡ್ರೋನ್ ಬಗ್ಗೆ ವಿವರಿಸುತ್ತಿರುವುದು

ಸ್ವಾರ್ಮ್ ತಂತ್ರಜ್ಞಾನ

ಡ್ರೋನ್‌ಗಳ ಮೂಲಕ ಆಕಾಶದಲ್ಲಿ ಅನಿಮೇಷನ್ ರಚಿಸಲು ಪ್ರತ್ಯೇಕ ತಂಡ ಸ್ಟೋರಿಬೋರ್ಡ್ ಮತ್ತು ಪ್ರದರ್ಶನ ವಿನ್ಯಾಸವನ್ನು ರಚಿಸುತ್ತದೆ. ನಂತರ, ಅನಿಮೇಷನ್ ವಿನ್ಯಾಸವನ್ನು ಅಂತಿಮಗೊಳಿಸುವ ಮೊದಲು ಅಭಿಪ್ರಾಯ ಪಡೆಯುವ ಸಲುವಾಗಿ ಗ್ರಾಹಕರೊಂದಿಗೆ ವಿಚಾರ–ವಿನಿಮಯ ಮಾಡಿಕೊಳ್ಳಲಾಗುತ್ತದೆ. ವಿನ್ಯಾಸ ಮತ್ತು ಅನುಕ್ರಮವನ್ನು ಅಂತಿಮಗೊಳಿಸಿದ ನಂತರ, ಪ್ರೋಗ್ರಾಂ ಅನ್ನು ವಿನ್ಯಾಸಗೊಳಿಸಲಾಗುತ್ತದೆ ಮತ್ತು ಲ್ಯಾಪ್ಟಾಪ್ ಮೂಲಕ ಡ್ರೋನ್‌ಗಳಿಗೆ ಸಂದೇಶ ರವಾನಿಸಲಾಗುತ್ತದೆ. ಅವುಗಳು ಅದನ್ನು ಅರ್ಥಮಾಡಿಕೊಳ್ಳುತ್ತದೆ. ಒಮ್ಮೆ ಡ್ರೋನ್‌ಗಳು ಟೇಕಾಫ್ ಆದ ನಂತರ ಉಳಿದವು ಸ್ವಾರ್ಮ್ ಟೆಕ್ನಾಲಜಿಯ ಸಹಾಯದಿಂದ ಅನಿಮೇಷನ್ ರಚನೆ ಸೇರಿದಂತೆ ಸ್ವಯಂಚಾಲಿತವಾಗಿರುತ್ತದೆ. ಒಬ್ಬ ನುರಿತ ಆಪರೇಟರ್ ಎಲ್ಲಾ ಡ್ರೋನ್‌ಗಳಿಗೆ ಆದೇಶ ನೀಡುತ್ತಾನೆ.

ಎಲ್‌ಇಡಿ ಬಲ್ಬ್‌ಗಳನ್ನು ಡ್ರೋನ್‌ಗಳಿಗೆ ಅಳವಡಿಸಲಾಗುತ್ತದೆ. ಇವು ಲಕ್ಷಾಂತರ ಬಣ್ಣ ಸಂಯೋಜನೆಗಳನ್ನು ರಚಿಸುವ ಸಾಮರ್ಥ್ಯ ಹೊಂದಿವೆ. ಅನಿಮೇಶನ್ ಅನ್ನು ಅಂತಿಮಗೊಳಿಸಿದ ನಂತರ, ಒಂದು ಪ್ರೋಗ್ರಾಂ ಮೂಲಕ ವಿವಿಧ ಅನಿಮೇಷನ್‌ಗಳಿಗೆ ಬಣ್ಣಗಳನ್ನು ಜೋಡಿಸಲಾಗುತ್ತದೆ. ಇದು ಪ್ರತಿ ರಚನೆಯಲ್ಲಿ ಪ್ರದರ್ಶಿಸಬೇಕಾದ ಬಣ್ಣವನ್ನು ಅರ್ಥಮಾಡಿಕೊಳ್ಳಲು ಡ್ರೋನ್‌ಗಳಿಗೆ ಸಹಾಯ ಮಾಡುತ್ತದೆ.

ಜಿಪಿಎಸ್ ತಂತ್ರಜ್ಞಾನ

ಡ್ರೋನ್ ಪ್ರದರ್ಶನಕ್ಕೆ ಜಿಪಿಎಸ್ ತಂತ್ರಜ್ಞಾನವನ್ನು ಬಳಸಿಕೊಂಡು ಪ್ರೋಗ್ರಾಮಿಂಗ್ ಮಾಡಲಾಗುತ್ತದೆ. ಡ್ರೋನ್‌ಗಳು ಗಾಳಿಯಲ್ಲಿದ್ದಾಗ ಪರಸ್ಪರ ನಿರ್ದಿಷ್ಟ ಅಂತರವನ್ನು ಕಾಯ್ದುಕೊಳ್ಳಬೇಕಾಗುತ್ತದೆ. ಸಾಫ್ಟ್‌ವೇರ್ ಮತ್ತು ಉಪಗ್ರಹ ಸಂವಹನದಿಂದ ಇದನ್ನು ಸಾಧಿಸಲಾಗುತ್ತದೆ. ಅದು ಡ್ರೋನ್‌ಗಳು ಆಕಾಶದಲ್ಲಿ ಅನಿಮೇಷನ್ ಅನುಕ್ರಮದಲ್ಲಿ ತಮ್ಮ ಸ್ಥಾನವನ್ನು ತಿಳಿದುಕೊಳ್ಳಲು ಅನುವು ಮಾಡಿಕೊಡುತ್ತದೆ. ಟೇಕ್–ಆಫ್ ಮಾಡುವ ಮೊದಲು, ಡ್ರೋನ್‌ಗಳನ್ನು ಪರೀಕ್ಷಿಸಲಾಗುತ್ತದೆ. ಡ್ರೋನ್‌ಗಳು ಹಾರಾಟ ನಡೆಸಲು ಮತ್ತು ಸಿಗ್ನಲ್‌ಗಳನ್ನು ಸ್ವೀಕರಿಸಲು ಯೋಗ್ಯವಾಗಿದ್ದರೆ, ಅವು ಹಸಿರು ಬೆಳಕನ್ನು ಪ್ರದರ್ಶಿಸುತ್ತವೆ. ನಿಖರವಾದ ಸಮಸ್ಯೆಯನ್ನು ಗುರುತಿಸಲು ಪ್ರತಿ ಡ್ರೋನ್‌ನಲ್ಲಿ ವಿಭಿನ್ನ ಬಣ್ಣವನ್ನು ಪ್ರದರ್ಶಿಸಲಾಗುತ್ತದೆ.



ಬ್ಲೇಜ್ ಡ್ರೋನ್‌ಗಳ ಸಮೀಪ ದೃಶ್ಯ

ಮೈಸೂರು, ಅ.9(ವಿಎನ್‌ಎಸ್)– ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವ ಸಂದರ್ಭದಲ್ಲಿ ಲೋಹದ ಹಕ್ಕಿಗಳ ಚಮತ್ಕಾರ ವೈಮಾನಿಕ ಪ್ರದರ್ಶನವಿಲ್ಲದೇ ನಿರಾಸೆಗೊಂಡಿದ್ದ ಪಾರಂಪರಿಕ ನಗರಿ ಮೈಸೂರಿನ ಜನತೆ ಹಾಗೂ ಪ್ರವಾಸಿಗರಿಗೆ ಇದೇ ಮೊದಲ ಬಾರಿ ವ್ಯವಸ್ಥೆ ಮಾಡಿರುವ ಡ್ರೋನ್ ಪ್ರದರ್ಶನ ಸಂಭ್ರಮ ತಂದಿದೆ.

ವೈಮಾನಿಕ ಪ್ರದರ್ಶನವು (ತಾಲೀಮು ಹಾಗೂ ಪ್ರದರ್ಶನ) ಎರಡು ದಿನಗಳ ಕಾಲ ಆಯೋಜಿಸಲಾಗುತ್ತಿತ್ತು. ಇದರೊಂದಿಗೆ ಪಂಜಿನ ಕವಾಯತು ಮೈದಾನದಲ್ಲಿ ಸಣ್ಣ ಪ್ರಮಾಣದಲ್ಲಿ ಡ್ರೋನ್‌ಗಳ ಪ್ರದರ್ಶನವೂ ಇರುತ್ತಿತ್ತು. ಆದರೆ ಆಗಿನ ಡ್ರೋನ್ ಪ್ರದರ್ಶನ ಬರೀ ಹಾರಾಟಕ್ಕೆ ಸೀಮಿತವಾಗಿತ್ತು ಆದರೆ, ಈ ಬಾರಿ ರಾತ್ರಿಯ ಹೊತ್ತಲ್ಲಿ ಆಗಸದಲ್ಲಿ 1500 ಡ್ರೋನ್‌ಗಳು ವರ್ಣರಂಜಿತ ಚಮತ್ಕಾರ ಪ್ರದರ್ಶಿಸಿದವು. ಈ ಡ್ರೋನ್‌ಗಳಿಗೆ ಎಲ್‌ಇಡಿ ಬಲ್ಬ್‌ಗಳನ್ನು ಅಳವಡಿಸಲಾಗಿದ್ದು, ಆಗಸದಲ್ಲಿ ವ್ಯವಸ್ಥಿತವಾಗಿ ತಾಯಿ ಚಾಮುಂಡೇಶ್ವರಿ, ಕರ್ನಾಟಕ ಭೂಪಟ ಮಾತ್ರವಲ್ಲದೆ, ಹಲವಾರು ಆಕೃತಿಗಳನ್ನು ರಚಿಸಿ, ರಂಜಿಸಿದ್ದು ನೋಡುಗರ ಮನಸನ್ನು ಉಲ್ಲಾಸಗೊಳಿಸಿತ್ತು.

ವೈಮಾನಿಕ ಪ್ರದರ್ಶನ ಎರಡು ದಿನ ಮಾತ್ರ ನಡೆಯುತ್ತಿದ್ದರೆ ಈ ಬಾರಿಯ ಅತ್ಯಾಕರ್ಷಕ ಡ್ರೋನ್ ಪ್ರದರ್ಶನವನ್ನು ಅ.6, 7 ಮತ್ತು ಅ.11, 12ರಂದು ಸೇರಿ 4 ದಿನಗಳ ಕಾಲ ಆಯೋಜಿಸಲಾಗಿದೆ. ವೈಮಾನಿಕ ಪ್ರದರ್ಶನಕ್ಕಿಂತ ಹೆಚ್ಚಿನ ಆಕರ್ಷಣೆಯನ್ನು ಈ ಪ್ರದರ್ಶನ ಪಡೆಯಿತು. ಪಂಜಿನ ಕವಾಯತು ಮೈದಾನ ಡ್ರೋನ್‌ಗಳ ಪ್ರದರ್ಶನವನ್ನು ಕಣ್ತುಂಬಿಕೊಳ್ಳಲು ಪ್ರೇಕ್ಷಕರಿಂದ ತುಂಬಿ ತುಳುಕಿತು.

ದಸರಾ ವಿಶೇಷ ಅಧಿಕಾರಿ ಮತ್ತು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ಮತ್ತು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕಿ ಜಿ.ಶೀಲಾ, ತಾಂತ್ರಿಕ ನಿರ್ದೇಶಕ ಮುನಿಗೋಪಾಲರಾಜು ನೇತೃತ್ವದ ದಸರಾ ಉನ್ನತಾಧಿಕಾರ ಸಮಿತಿಯು ಈ ಬಾರಿ ಡ್ರೋನ್ ಪ್ರದರ್ಶನ ಆಯೋಜಿಸುವ ಬಗ್ಗೆ ಚಿಂತನ–ಮಂಥನ ನಡೆಸಿತು. ಅದಕ್ಕಾಗಿ ಆಕಾಶದಲ್ಲಿ ವರ್ಣರಂಜಿತವಾಗಿ ಚಮತ್ಕಾರ ಮಾಡುವ ಡ್ರೋನ್ ಪ್ರದರ್ಶನಗಳನ್ನು ಆಯೋಜಿಸುವಲ್ಲಿ ಅನುಭವ ಹೊಂದಿರುವ ದೆಹಲಿ ಮೂಲದ ಕಂಪನಿ ಬಾಟ್ಲ್ಯಾಬ್ ಡೈನಾಮಿಕ್ಸ್ (BotLab Dynamics)ನ ಸೇವೆಯನ್ನು ಪಡೆಯಲು ನಿರ್ಧರಿಸಿದರು.

ಬಾಟ್ಲ್ಯಾಬ್ ಡೈನಾಮಿಕ್ಸ್ ಸಂಸ್ಥೆಗೆ ಮೈಸೂರು ದಸರಾ ಹೊಸದಲ್ಲ. ಮೈಸೂರಿನಲ್ಲಿ ಕಳೆದ ಎರಡು ವರ್ಷಗಳಿಂದ ಡ್ರೋನ್ ಶೋಗಳನ್ನು ನಡೆಸುತ್ತಾ ಬಂದಿದೆ. ಆದರೆ 250 ಡ್ರೋನ್‌ಗಳೊಂದಿಗೆ ಸಣ್ಣ ಪ್ರಮಾಣದಲ್ಲಿ ಚಮತ್ಕಾರ ತೋರುತ್ತಿದ್ದ ಸಂಸ್ಥೆ, ಈ ವರ್ಷ, 1,500 ಡ್ರೋನ್‌ಗಳನ್ನು ಬಳಸಿದ್ದು, ಅದ್ಭುತ ಪ್ರದರ್ಶನವಾಗಿದೆ. ಡ್ರೋನ್ ಪ್ರದರ್ಶನದ ವೀಕ್ಷಣಾ ಪ್ರದೇಶವು ಬನ್ನಿಮಂಟಪದ ಪಂಜಿನ ಕವಾಯತು ಮೈದಾನವಾಗಿದ್ದರೆ, ಅದರ ನಿಯಂತ್ರಣ ಕೇಂದ್ರವು ಸೇಂಟ್ ಫಿಲೋಮಿನಾ ಕಾಲೇಜು ಮೈದಾನದಲ್ಲಿದೆ. ಡ್ರೋನ್‌ಗಳು ಕಾರ್ಯಸ್ಥಾನ ಸೇಂಟ್ ಫಿಲೋಮಿನಾ ಮೈದಾನದಿಂದ ಹಾದು ಪಂಜಿನ ಕವಾಯತು ಮೈದಾನದಲ್ಲಿ ಜನರು ವೀಕ್ಷಿಸಲು ಸಹಕಾರಿಯಾಗುವಷ್ಟು ಎತ್ತರಕ್ಕೆ ಸಾಗುತ್ತವೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಬಾಟ್ಲ್ಯಾಬ್ ಡೈನಾಮಿಕ್ಸ್ ಬಿಸಿನೆಸ್ ಡೆವಲಪ್ಮೆಂಟ್ ಎಕ್ಸಿಕ್ಯೂಟಿವ್ ಕ್ಷಿತಿಜ್ ಕೈಕೇಯ ಅವರು, 2022ರ ಗಣರಾಜ್ಯೋತ್ಸವ ಸಂದರ್ಭದಲ್ಲಿ ನಡೆದ ಬೀಟಿಂಗ್ ರಿಟ್ರೀಟ್ ಸಮಾರಂಭದಲ್ಲಿ 1,000 ಡ್ರೋನ್‌ಗಳು ಹಾಗೂ 2023ರಲ್ಲಿ 3,500 ಡ್ರೋನ್‌ಗಳೊಂದಿಗೆ ಪ್ರದರ್ಶನ ನೀಡಲಾಗಿತ್ತು. ಆ ಸಂದರ್ಭದಲ್ಲಿ ಅದೊಂದು ದಾಖಲೆಯಾಗಿತ್ತು.


ಈ ವರ್ಷ, ನಾವು ಉದ್ಯಮಿ ಅನಂತ್ ಅಂಬಾನಿ ಅವರ ವಿವಾಹಪೂರ್ವ ಕಾರ್ಯಕ್ರಮಕ್ಕಾಗಿ ಜಾಮ್‌ನಗರದಲ್ಲಿ 5,500 ಡ್ರೋನ್‌ಗಳೊಂದಿಗೆ ಪ್ರದರ್ಶನ ನೀಡಿ ಮತ್ತೊಂದು ದಾಖಲೆಯನ್ನು ನಿರ್ಮಿಸಿದ್ದೇವೆ. ಆಕಾಶದಲ್ಲಿ ರಚಿಸಲಾದ ಅನಿಮೇಷನ್‌ಗಳನ್ನು ಸಾಫ್ಟ್‌ವೇರ್ ಮೂಲಕ ಪ್ರೋಗ್ರಾಮ್ ಮಾಡಲಾಗುತ್ತದೆ ಮತ್ತು ಡ್ರೋನ್‌ಗಳಿಗೆ ನಿರ್ದೇಶನ ನೀಡಲಾಗುತ್ತದೆ. ಡ್ರೋನ್‌ಗಳು ಅನಿಮೇಷನ್‌ಗಳನ್ನು ಸ್ವಯಂಚಾಲಿತವಾಗಿ ರಚಿಸುತ್ತವೆ. ಕಾರ್ಯಕ್ರಮಗಳಿಗೆ ಬಳಸಲಾದ ಡ್ರೋನ್‌ಗಳನ್ನು 'ಬ್ಲೇಜ್' ಎಂದು ಕರೆಯಲಾಗುತ್ತದೆ. ಹಿಂದಿನ ಆವೃತ್ತಿಯನ್ನು 'ನಿಂಯೋ' ಎಂದು ಕರೆಯಲಾಗುತ್ತಿತ್ತು. ಪ್ರಸ್ತುತ, ಕಂಪನಿಯು 6,500 ಡ್ರೋನ್ ದಾಸ್ತಾನು ಹೊಂದಿದೆ. ಈ ಬಾರಿ ಮೈಸೂರು ದಸರಾದಲ್ಲಿ ಸುಮಾರು 1,500 ಡ್ರೋನ್‌ಗಳನ್ನು ಬಳಸಲಾಗುತ್ತಿದೆ ಎಂದರು.

ಹವಾಮಾನ: ಸಾಮಾನ್ಯ ಪರಿಸ್ಥಿತಿಗಳಲ್ಲಿ, ಕಾರ್ಯಕ್ರಮ ಯೋಜನೆಯಂತೆ ನಡೆಯುತ್ತದೆ. ಆದರೆ ಹವಾಮಾನ ಪರಿಸ್ಥಿತಿ ಬದಲಾವಣೆಯಾದಾಗ ಪರಿಸ್ಥಿತಿ ಸಹಜ ಸ್ಥಿತಿಗೆ ಬರುವವರೆಗೆ ಈ ಕಾರ್ಯಕ್ರಮವನ್ನು ಮುಂದೂಡಲು ನಾವು ನಮ್ಮ ಗ್ರಾಹಕರಿಗೆ ವಿನಂತಿಸುತ್ತೇವೆ ಎಂದು ಕ್ಷಿತಿಜ್ ಹೇಳಿದರು. ಡ್ರೋನ್‌ಗಳು ಎಲೆಕ್ಟ್ರಾನಿಕ್ ವಸ್ತುವಾಗಿದ್ದು, ಸಾಮಾನ್ಯ ಮಳೆ ಮತ್ತು ಗಾಳಿ ಇದ್ದಾಗ ಉತ್ತಮವಾಗಿ ಕಾರ್ಯನಿರ್ವಹಿಸುತ್ತವೆ. ಆದರೆ ಭಾರಿ ಮಳೆ ಮತ್ತು ಗಾಳಿ ಇದ್ದರೆ, ಅವು ಕಾರ್ಯನಿರ್ವಹಿಸುವುದಿಲ್ಲ. ಆದ್ದರಿಂದ, ನಾವು ಟೇಕ್ ಆಫ್ ಮಾಡುವ ಮೊದಲು ಹವಾಮಾನ ಸ್ಥಿತಿ–ಗತಿ ಬಗ್ಗೆ ಮುನ್ನೆಚ್ಚರಿಕೆ ತೆಗೆದುಕೊಳ್ಳುತ್ತೇವೆ ಎಂದರು.

ಇದು ಚೆಸ್ಕಾಂನ ದಸರಾ ಪ್ರಾರಂಭದಿಂದಲೂ ಪಾರಂಪರಿಕ ನಗರವನ್ನು ಬೆಳಗುತ್ತಿರುವ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (CESC) ಈ ವರ್ಷ ಮೆಗಾ ಪ್ರದರ್ಶನ ಆಯೋಜಿಸುವ ಮೂಲಕ ಉತ್ಸವಕ್ಕೆ ಇನ್ನಷ್ಟು ಮೆರಗು ತಂದಿದೆ. ಚೆಸ್ಕಾಂನ ತಾಂತ್ರಿಕ ನಿರ್ದೇಶಕ ಎಂ.ಕೆ. ಮುನಿಗೋಪಾಲ್ ರಾಜು ಮಾತನಾಡಿ, ಚೆಸ್ಕಾಂನ ಹಿರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ಡ್ರೋನ್ ಪ್ರದರ್ಶನಗಳಿಗೆ ಸಂಬಂಧಿಸಿದಂತೆ ಉತ್ತಮವಾಗಿ ಕಾರ್ಯನಿರ್ವಹಿಸಿದ್ದಾರೆ. ದಸರಾವನ್ನು ಅದ್ದೂರಿಯಾಗಿ ಆಚರಿಸುವುದರೊಂದಿಗೆ, ಏನಾದರೂ ವಿಶೇಷತೆಯನ್ನು ಹೊರತರಬೇಕೆಂದು ಜಿಲ್ಲಾಧಿಕಾರಿಗಳು ಬಯಸಿದ್ದರು. ಶ್ರೀರಂಗಪಟ್ಟಣ ಶಾಸಕರೂ ಆದ ಚೆಸ್ಕಾಂ ಅಧ್ಯಕ್ಷ ರಮೇಶಬಾಬು ಬಂಡಿಸಿದ್ದೇಗೌಡ ಮತ್ತು ಚೆಸ್ಕಾಂ ಎಂಡಿ ಶೀಲಾ ಅವರ ನೇತೃತ್ವದಲ್ಲಿ ಚೆಸ್ಕಾಂ ಹಿರಿಯ ಅಧಿಕಾರಿಗಳು ಸಭೆ ನಡೆಸಿದೆವು. ಅವರ ಮಾರ್ಗದರ್ಶನದಲ್ಲಿ ನಾವು ಮೆಗಾ ಡ್ರೋನ್ ಶೋ ಆಯೋಜಿಸಲು ನಿರ್ಧರಿಸಿದೆವು. ಅದು ನಿರೀಕ್ಷೆ ಹಾಗೂ ಕಾರ್ಯ ಯೋಜನೆಯಂತೆ ಯಶಸ್ವಿಯಾಗುತ್ತಿದೆ ಎಂದು ತಿಳಿಸಿದರು.



ಮುನಿಗೋಪಾಲ್ ರಾಜು



ಸಂತ ಫಿಲೋಮಿನಾ ಕಾಲೇಜು ಮೈದಾನದಿಂದ ಉಡಾವಣೆಗೊಳ್ಳುತ್ತಿರುವ ಡ್ರೋನ್‌ಗಳು.



ಬ್ಯಾಟರಿಗಳಲ್ಲಿ ಡ್ರೋನ್‌ಗಳನ್ನು ಚಾರ್ಜ್‌ಗಿಟ್ಟಿರುವುದು.

ಚಾಮುಂಡಿಬೆಟ್ಟದಲ್ಲಿ ಯೋಗ ಚಾರಣ–ದುರ್ಗಾ ನಮಸ್ಕಾರ

ಮೈಸೂರು,ಅ.9(ಆರ್‌ಕೆ)–ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಯೋಗ ದಸರಾ ಉಪಸಮಿತಿ ವತಿಯಿಂದ ಇಂದು ಚಾಮುಂಡಿಬೆಟ್ಟದಲ್ಲಿ 'ಯೋಗ ಚಾರಣ ಮತ್ತು ದುರ್ಗಾ ನಮಸ್ಕಾರ' ಕಾರ್ಯಕ್ರಮ ಆಯೋಜಿಸಲಾಗಿತ್ತು. ಇದು ಯಶಸ್ವಿಯಾಗಿ ನಡೆಯಿತು.

ಚಾಮುಂಡಿಬೆಟ್ಟದ ತಪ್ಪಲಿನ ಬಳಿ ಬೆಳಗ್ಗೆ 7 ಗಂಟೆಗೆ ಆರಂಭವಾದ ಯೋಗ ಚಾರಣ ಕಾರ್ಯಕ್ರಮವನ್ನು ಉಪಸಮಿತಿ ಅಧ್ಯಕ್ಷ ಎಂ. ಮಹೇಶ್ ಉದ್ಘಾಟಿಸಿದರು. ಯೋಗಪಟುಗಳು, ವಿದ್ಯಾರ್ಥಿಗಳು, ಯುವಕ–ಯುವತಿಯರು ಹಾಗೂ ಹಿರಿಯ ನಾಗರಿಕರು ಈ ಸಂದರ್ಭ ಯೋಗ ಮಾನವ ಸರಪಳಿ ನಿರ್ಮಿಸಿ ಜನರ ಮನಸೆಳೆದರು.

ಮೆಟ್ಟಿಲುಗಳನ್ನೇರಿ ಚಾಮುಂಡಿಬೆಟ್ಟ ತಲುಪಿದ ಯೋಗಾಸಕ್ತರು, ಶ್ರೀ ಚಾಮುಂಡೇಶ್ವರಿ ದೇವಸ್ಥಾನದ ಆವರಣದಲ್ಲಿ ದುರ್ಗಾ ನಮಸ್ಕಾರ, ಸೂರ್ಯ ನಮಸ್ಕಾರ, ವಜ್ರಾಸನ, ಸ್ವಾನಾಸನ, ತ್ರಿಕೋನಾಸನ, ಶವಾಸನ, ಸಿದ್ಧಾಸನ, ಅರ್ಧ ಚಕ್ರಾಸನ ಸೇರಿದಂತೆ ವಿವಿಧ ಭಂಗಿಯ ಆಸನಗಳನ್ನು ಪ್ರದರ್ಶಿಸಿದರಲ್ಲದೆ, ಸಾಂಸ್ಕೃತಿಕ ಕಾರ್ಯಕ್ರಮವು ಅತ್ಯಾಕರ್ಷಕವಾಗಿತ್ತು. ಜಿಎಸ್‌ಎಸ್ ಫೌಂಡೇಷನ್ ಮುಖ್ಯಸ್ಥ ಟಿ. ಶ್ರೀಹರಿ, ಯೋಗ ದಸರಾ ಉಪಸಮಿತಿ ವಿಶೇಷಾಧಿಕಾರಿ ಕೆ.ರಮ್ಯ, ಕಾರ್ಯಾಧ್ಯಕ್ಷ ನಾಗಮ್ಮ, ಉಪಾಧ್ಯಕ್ಷರಾದ ವೈ.ಎಸ್.ರವಿಕುಮಾರ್ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.




ಚಾಮುಂಡಿಬೆಟ್ಟದಲ್ಲಿ 'ಯೋಗ ಚಾರಣ ಮತ್ತು ದುರ್ಗಾ ನಮಸ್ಕಾರ' ಕಾರ್ಯಕ್ರಮ ನಡೆಯಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com



ದಸರಾ ವಿಶೇಷ 2024





ಮೈಸೂರು ದಸರಾ ಮಹೋತ್ಸವ–2024 ಇಂದಿನ ಕಾರ್ಯಕ್ರಮಗಳು

ಯುವ ದಸರಾ



ಸಂಜೆ 6.00	ಸುಪ್ರಸಿದ್ಧ ಸಂಗೀತ ಸಂಯೋಜಕರು ಹಾಗೂ ನಿರ್ದೇಶಕರಾದ ಇಳಯರಾಜಾ ಅವರಿಂದ ಸಂಗೀತ ರಸ ಸಂಜೆ ಕಾರ್ಯಕ್ರಮ, ಸ್ಥಳ: ಜ್ವಾಲಾಮುಖಿ ತ್ರಿಪುರ ಸುಂದರಿ ದೇವಸ್ಥಾನದ ಸಮೀಪ, ಉತ್ತನಹಳ್ಳಿ ರಿಂಗ್ ರಸ್ತೆ.

ಸಾಂಸ್ಕೃತಿಕ ಕಾರ್ಯಕ್ರಮಗಳು–ಅರಮನೆ ಆವರಣ

ಸಂಜೆ 4.00	ಖಾಸಿಂ ಅಲಿ ಮತ್ತು ತಂಡ, ಹಾವೇರಿ ಜಿಲ್ಲೆ ಅವರಿಂದ ಸುಗಮ ಸಂಗೀತ
ಸಂಜೆ 4.30	ವೈ.ಎಂ. ಪುಟ್ಟಣ್ಣಯ್ಯ ಮತ್ತು ತಂಡ, ಮೈಸೂರು ಅವರಿಂದ ರಂಗ ಗೀತೆಗಳು
ಸಂಜೆ 5.15	ಇಸ್ಕಾನ್, ಮೈಸೂರು ಅವರಿಂದ ಭಜನಾ ಸಂಕೀರ್ತನ
ಸಂಜೆ 6.00	ಒಂದೆಡೆ ರಂಗ ತಂಡ–ಅಕ್ಕೈ ಪದ್ಮಶಾಲಿ ಅವರಿಂದ ಜೋಗಪ್ಪ ಜೋಗಮ್ಮ ಚೌಡಿಕೆ ಪದಗಳು
ಸಂಜೆ 7.00	ಜೀ ಕನ್ನಡ ರಿಯಾಲಿಟಿ ಷೋ ಖ್ಯಾತಿಯ ಗಾಯಕರುಗಳಿಂದ ಸ್ವರತ ರಂಗ ಸಂಗೀತ ಸಂಜೆ
ರಾತ್ರಿ 8.30	ಮಮೆಖಾನ್ ಮತ್ತು ಫ್ಲೇವರ್ಸ್ ಆಫ್ ಇಂಡಿಯಾ–ಕಂಟೆಂಪರರಿ ಡ್ಯಾನ್ಸ್ ಕಂಪನಿ ಅವರಿಂದ ರಾಜಸ್ಥಾನಿ ಷೋಕ್ ಮತ್ತು ಸೂಫಿ ಡ್ಯಾನ್ಸರ್ಸ್ ಜುಗಲ್‌ಬಂದಿ

ಜಗನ್ಮೋಹನ ಅರಮನೆ

ಸಂಜೆ 4.45	ಟಿಸೆರಿಂಗ್ ಪಾಲಿಜೋರೆ ವಿಟ್ಟು, ಮೈಸೂರು ಅವರಿಂದ ಲಡಕಿ ನೃತ್ಯ
ಸಂಜೆ 5.15	ಎಸ್.ಪಿ. ಶೃತಿ ಮತ್ತು ತಂಡ, ಬೆಂಗಳೂರು ಅವರಿಂದ ಸುಗಮ ಸಂಗೀತ
ಸಂಜೆ 6.00	ಜಯಂತ್ ಕುಮಾರ್ ಮತ್ತು ತಂಡ ಅವರಿಂದ ಭರತನಾಟ್ಯ
ಸಂಜೆ 7.00	ಶಿವದೇವ ಮತ್ತು ತಂಡ, ಮೈಸೂರು ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ
ರಾತ್ರಿ 8.00	ಸಂತೋಷ್ ಹಿಲಿಯಾನ ಮತ್ತು ತಂಡ, ದಕ್ಷಿಣ ಕನ್ನಡ ಅವರಿಂದ ಯಕ್ಷಗಾನ–ನಾಟ್ಯ–ವೈಭವ

ಕಲಾಮಂದಿರ

ಸಂಜೆ 5.00	ಎಂ.ಎಸ್. ಸಚಿನ್ ಮತ್ತು ತಂಡ, ಮೈಸೂರು ಅವರಿಂದ ವೀರಗಾಸೆ
ಸಂಜೆ 5.30	ಸುಮಂತ್ ಮತ್ತು ತಂಡ, ಮಂಡ್ಯ ಅವರಿಂದ ಡೊಳ್ಳು ಕುಣಿತ
ಸಂಜೆ 6.00	ಜಿ.ಕೆ. ಮಹೇಶ್ ಮತ್ತು ತಂಡ, ಮೈಸೂರು ಅವರಿಂದ ಜಾನಪದ ಗೀತೆಗಳು
ಸಂಜೆ 7.00	ಪೂಜಾ ಉದಯಶಂಕರ್ ಮತ್ತು ತಂಡ, ಮೈಸೂರು ಅವರಿಂದ ಭರತನಾಟ್ಯ
ರಾತ್ರಿ 8.00	ಪುಟ್ಟರಾಜು ಗೋನಾಳ್ ಮತ್ತು ತಂಡ ಅವರಿಂದ ಸುಗಮ ಸಂಗೀತ
ರಾತ್ರಿ 9.00	ಬೆನಕ ನಾಟ್ಯ ಮಂದಿರ, ಬೆಂಗಳೂರು ಅವರಿಂದ ನೃತ್ಯರೂಪಕ

ಗಾನಭಾರತಿ, ಕುವೆಂಪುನಗರ

ಸಂಜೆ 4.45	ಹರೀಶ್ ಮತ್ತು ತಂಡ, ಮೈಸೂರು ಅವರಿಂದ ನಾದಸ್ವರ
ಸಂಜೆ 5.15	ಪಿ. ಆದ್ಯಶ್ರೀ ಮತ್ತು ತಂಡ, ಶಿವಮೊಗ್ಗ ಅವರಿಂದ ಸುಗಮ ಸಂಗೀತ
ಸಂಜೆ 6.00	ನೃತ್ಯಾತಿ ಕಲಾಶಾಲೆ, ಮೈಸೂರು (ಅನುಷಾ ವರುಣ್) ಅವರಿಂದ ಭರತನಾಟ್ಯ
ಸಂಜೆ 7.00	ಗಾನಸಿಂಚನ ಕಲಾತಂಡ (ಸಿ.ಯು. ಸಿಂಚನ ಮತ್ತು ತಂಡ), ಚಿಕ್ಕಮಗಳೂರು ಅವರಿಂದ ಜಾನಪದ ಗೀತೆಗಳು
ರಾತ್ರಿ 8.00	ಕೃಪಾಲಿ ಮತ್ತು ತಂಡ, ಮೈಸೂರು ಅವರಿಂದ ನೃತ್ಯ
ರಾತ್ರಿ 9.00	ಶ್ರೀ ಗಣಪತಿ ಷಣ್ಮುಖಸ್ವಾಮಿ ರಾಮ, ಮೈಸೂರು ಅವರಿಂದ ಸುಗಮ ಸಂಗೀತ

ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ

ಸಂಜೆ 4.45	ರವಿ ನಿಂಗಪ್ಪ ದ್ಯಾವನಕಟ್ಟಿ ಮತ್ತು ತಂಡ, ಹಾವೇರಿ ಅವರಿಂದ ನಾಸಿಕ್ ಡೋಲು
ಸಂಜೆ 5.15	ಮಂಗಳ ರವಿ ಮತ್ತು ತಂಡ ಅವರಿಂದ ಸುಗಮ ಸಂಗೀತ
ಸಂಜೆ 6.00	ಕೆ.ಬಿ. ರವಿಕುಮಾರ್ ಮತ್ತು ತಂಡ, ದಾವಣಗೆರೆ ಅವರಿಂದ ಪುರವಂತಿಕೆ
ಸಂಜೆ 7.00	ರಂಗಭಂಡಾರ ಕಲಾ ಸಂಘ, ಚಿತ್ರದುರ್ಗ (ಬಿ. ನಿರ್ಮಲ) ಅವರಿಂದ ವಚನ ವಾದನ
ರಾತ್ರಿ 8.00	ಎಂ.ಎಸ್. ನಿತ್ಯಾಶ್ರೀ ಮತ್ತು ಚಿನ್ಮಯಿ ಭಾರದ್ವಾಜ್, ಮೈಸೂರು ಅವರಿಂದ ಭರತನಾಟ್ಯ
ರಾತ್ರಿ 9.00	ಪರಸ್ಪರ, ಮೈಸೂರು (ಎಸ್. ಸಾಗರ್ ಮತ್ತು ತಂಡ) ಅವರಿಂದ ಜಾನಪದ ಗೀತೆಗಳು

ಚಿಕ್ಕಗಡಿಯಾರ (ಡೆಫರಿನ್ ಟವರ್)

ಸಂಜೆ 5.00	ಉದಯ್ ಮತ್ತು ತಂಡ, ಕೊಡಗು ಅವರಿಂದ ಸೋಡೆಡಿಮ್ಮಿ ನೃತ್ಯ
ಸಂಜೆ 5.30	ಕರಿಯಪ್ಪ ಮತ್ತು ತಂಡ, ಮೈಸೂರು ಅವರಿಂದ ಪೂಜಾ ಕುಣಿತ
ಸಂಜೆ 6.00	ಯಲ್ಲಪ್ಪ ಸಿದ್ದಪ್ಪ ತಿರ್ಲಕೊಪ್ಪ, ಧಾರವಾಡ ಅವರಿಂದ ಗೀಗೀಪದ
ಸಂಜೆ 7.00	ರಾಜಣ್ಣ ಮತ್ತು ತಂಡ, ಚಾಮರಾಜನಗರ ಅವರಿಂದ ತಮಟೆ ವಾದನ
ರಾತ್ರಿ 8.00	ಬೋರವ್ವ ಬಗಣ್ಣವಾರೆ ಮತ್ತು ತಂಡ, ಬಾಗಲಕೋಟೆ ಅವರಿಂದ ಚೌಡಿಕೆ ಪದ
ರಾತ್ರಿ 9.00	ಕೀರ್ತಿ ರಾಥೋಡ್ ಮತ್ತು ತಂಡ, ವಿಜಯನಗರ ಅವರಿಂದ ಲಂಬಾಣಿ ನೃತ್ಯ

ಪುರಭವನ

ಬೆಳಗ್ಗೆ 10.30	ಪಾಪಣ್ಣ ಮತ್ತು ತಂಡ, ಮೈಸೂರು ಅವರಿಂದ ರಂಗ ಗೀತೆಗಳು
ಮಧ್ಯಾಹ್ನ 12.00	ಅಭಿಮಾನಿ ರಂಗ ವೈಭವ, ಬಳ್ಳಾರಿ (ಎ.ಎಸ್.ಶರಣ್) ಅವರಿಂದ 'ಮರಳಿ ಪಡೆದ ಮಾಂಗಲ್ಯ' ನಾಟಕ ಪ್ರದರ್ಶನ
ಮಧ್ಯಾಹ್ನ 3.00	ಶ್ರೀ ಗುರು ಪುಟ್ಟರಾಜು ನಾಟಕ ಮತ್ತು ಸಾಂಸ್ಕೃತಿಕ ಸಂಘ, ಬಾದಾಮಿ (ಎಸ್. ಶಶಿರೇಖಾ ಮತ್ತು ಶಬ್ಬೀರ್) ಅವರಿಂದ 'ಮನವಂತರ ಮನೆತನ' ನಾಟಕ ಪ್ರದರ್ಶನ
ಸಂಜೆ 6.00	ಶ್ರೀ ಹನಮಂತ ಮಲ್ಲಗಿ ತೆಗ್ಗಿ, ಬಾಗಲಕೋಟೆ ಅವರಿಂದ ಭಾಗ್ಯವಂತಿ ಮಹಾತ್ಮೆ ನಾಟಕ ಪ್ರದರ್ಶನ

ಕಿರು ರಂಗಮಂದಿರ, ಕಲಾಮಂದಿರ ಆವರಣ

ಮಧ್ಯಾಹ್ನ 2.00	ಡಾ. ಸ್ನೇಹಶ್ರೀ ನಿರ್ಮಲ್‌ಕುಮಾರ್, ಮೈಸೂರು ಅವರಿಂದ ಸುಗಮ ಸಂಗೀತ
ಮಧ್ಯಾಹ್ನ 3.00	ಕರ್ನಾಟಕ ಕಲಾದರ್ಶಿನಿ, ಬೆಂಗಳೂರು (ಶ್ರೀನಿವಾಸ್ ಆಸ್ಥಾನ್) ಅವರಿಂದ ಲವ–ಕುಶ ಮಹಿಳಾ ಯಕ್ಷಗಾನ
ರಾತ್ರಿ 7.00	ಜಂಗಮ ಕಲೆಕ್ಟಿವ್, ಬೆಂಗಳೂರು (ಕೆ.ಪಿ. ಲಕ್ಷ್ಮಣ್) ಅವರಿಂದ 'ಬಾಬ್ ಮಾರ್ಲೆ ಫ್ರಂ ಕೋಡಿಹಳ್ಳಿ' ನಾಟಕ ಪ್ರದರ್ಶನ

ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ

ಸಂಜೆ 5.00	ಅನುಸೂಯ ಜಾದವ್ ಮತ್ತು ತಂಡ, ಬಿಜಾಪುರ ಅವರಿಂದ ಬಂಜಾರ ನೃತ್ಯ
ಸಂಜೆ 5.30	ಕಲ್ಯಾಣಿ ಮತ್ತು ತಂಡ, ಮೈಸೂರು ಅವರಿಂದ ಸುಗಮ ಸಂಗೀತ
ಸಂಜೆ 6.30	ಹರ್ಷಿತಾ ಸುದೇಶ್ ಮತ್ತು ತಂಡ, ಬೆಂಗಳೂರು ಅವರಿಂದ ಭರತನಾಟ್ಯ
ರಾತ್ರಿ 7.30	ಮನೋಜ್ ಮತ್ತು ತಂಡ, ಚಿತ್ರದುರ್ಗ ಅವರಿಂದ 'ಆಗಂತುಕ' ತನಿಖಾ ನಾಟಕ ಪ್ರದರ್ಶನ

ನಟನ ರಂಗಮಂದಿರ, ರಾಮಕೃಷ್ಣನಗರ

ಸಂಜೆ 5.00	ಎನ್.ಎಸ್. ದರ್ಶನ್ ಮತ್ತು ತಂಡ, ಚಾಮರಾಜನಗರ ಅವರಿಂದ ಭಕ್ತಿಗೀತೆಗಳು
ಸಂಜೆ 6.30	ಕೌಸ್ತುಭ ಕಲಾ ಸೇವಾ ಟ್ರಸ್ಟ್, ದಕ್ಷಿಣ ಕನ್ನಡ ಅವರಿಂದ 'ರಘುವಂಶ' ಯಕ್ಷಗಾನ

ಶ್ರೀಕಂಠೇಶ್ವರ ದೇವಸ್ಥಾನ, ನಂಜನಗೂಡು

ಸಂಜೆ 5.00	ಮುತ್ತುರಾಯಪ್ಪ ಮತ್ತು ತಂಡ ಅವರಿಂದ ಚಿಲಿಪಿಲಿ ಗೊಂಬೆ
ಸಂಜೆ 5.30	ಧರ್ಮೇಂದ್ರ ಮತ್ತು ತಂಡದವರಿಂದ ಸೋಮನ ಕುಣಿತ
ಸಂಜೆ 6.00	ವೈ. ರುದ್ರಾಕ್ಷಿ ಮತ್ತು ತಂಡ, ದಾವಣಗೆರೆ ಅವರಿಂದ ಲಂಬಾಣಿ ನೃತ್ಯ
ಸಂಜೆ 7.00	ಕೆ.ಎನ್. ಅಶ್ವಿನಿ ಮತ್ತು ತಂಡ, ಮೈಸೂರು ಅವರಿಂದ ಸುಗಮ ಸಂಗೀರ
ರಾತ್ರಿ 8.00	ಈರಪ್ಪ ಫಕೀರಪ್ಪ ಬಾಬ್ಲಿ, ಬೆಳಗಾವಿ ಅವರಿಂದ ಭಜನೆ
ರಾತ್ರಿ 9.00	ಜಡೇಶ್ ಹೆಮ್ಮಿಗನೂರ್ ಮತ್ತು ತಂಡ, ಬಳ್ಳಾರಿ ಅವರಿಂದ ಜಾನಪದ ಗೀತೆಗಳು

ನವರಾತ್ರಿ ಜನಪದ ರಂಗ ಉತ್ಸವ, ವನರಂಗ, ರಂಗಾಯಣ

ಸಂಜೆ 6.30	ರಂಗಕೀರ್ತನ ಸಂಪದ ಡಾ. ಲಕ್ಷ್ಮಣ್‌ದಾಸ್ ಮಿತ್ರ ಮಂಡಳಿ, ತುಮಕೂರು ಅವರಿಂದ 'ಪಾದುಕಾ ಪಟ್ಟಾಭಿಷೇಕ' ನಾಟಕ ಪ್ರದರ್ಶನ

ಪ್ರತಿದಿನದ ಆಕರ್ಷಣೆ

ದಸರಾ ಫಲಪುಷ್ಪ ಪ್ರದರ್ಶನ, ಸ್ಥಳ: ಕುಪ್ಪಣ್ಣ ಪಾರ್ಕ್	ಬೆಳಗ್ಗೆ 9 ರಿಂದ ರಾತ್ರಿ 8.30
ದಸರಾ ಫಲಪುಷ್ಪ ಪ್ರದರ್ಶನ, ಸ್ಥಳ: ಲಿಂಗಾಂಬುದಿ ಕೆರೆ	ಬೆಳಗ್ಗೆ 9 ರಿಂದ ರಾತ್ರಿ 7
ದಸರಾ ಫಲಪುಷ್ಪ ಪ್ರದರ್ಶನ, ಸ್ಥಳ: ಕುಕ್ಕರಹಳ್ಳಿ ಕೆರೆ	ಬೆಳಗ್ಗೆ 9 ರಿಂದ ರಾತ್ರಿ 7
ಪುಸ್ತಕ ಮೇಳ, ಸ್ಥಳ: ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ	ಬೆಳಗ್ಗೆ 10 ರಿಂದ ರಾತ್ರಿ 7
ದಸರಾ ವಸ್ತುಪ್ರದರ್ಶನ, ಸ್ಥಳ: ವಸ್ತುಪ್ರದರ್ಶನ ಮೈದಾನ	ಮಧ್ಯಾಹ್ನ 2.30 ರಿಂದ ರಾತ್ರಿ 8.30
ಆಹಾರ ಮೇಳ, ಸ್ಥಳ: ಮಹಾರಾಜ ಕಾಲೇಜು ಮೈದಾನ	ಬೆಳಗ್ಗೆ 11 ರಿಂದ ರಾತ್ರಿ 9
ರೈಲ್ ಮ್ಯೂಸಿಯಂ	ಬೆಳಗ್ಗೆ 10 ರಿಂದ ರಾತ್ರಿ 8

ಯಶಸ್ವಿ ಜಂಬೂಸವಾರಿ ತಾಲೀಮು

• ಶಸ್ತ್ರಸಹಿತ 6 ತುಕಡಿ, 2 ಅಶ್ವದಳದ ತುಕಡಿ, ಪೊಲೀಸ್ ಬ್ಯಾಂಡ್ ವಾದನದ ತಂಡ ಭಾಗಿ • ನಾಡಗೀತೆ ಮೊಳಗುವ ವೇಳೆ 21 ಬಾರಿ ಸಿಡಿಮದ್ದು ಸಿಡಿಸಿ ತಾಲೀಮು



ಮೈಸೂರು ಅರಮನೆ ಆವರಣದಲ್ಲಿ ಬುಧವಾರ ನಡೆದ ಜಂಬೂಸವಾರಿ ತಾಲೀಮಿನಲ್ಲಿ ಅಭಿಮನ್ಯುವಿನ ಮೇಲೆ ಪುಷ್ಪಾರ್ಚನೆ ಮಾಡುತ್ತಿರುವುದು.

ಮೈಸೂರು,ಅ.9(ಎಂಟಿವೈ)– ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ಜಂಬೂಸವಾರಿಗೆ ಕ್ಷಣಗಣನೆ ಆರಂಭವಾಗಿರುವ ಹಿನ್ನೆಲೆಯಲ್ಲಿ ಮೈಸೂರು ಅರಮನೆಯಲ್ಲಿ ಬುಧವಾರ ಬೆಳಗ್ಗೆ ಜಂಬೂಸವಾರಿ ಮೆರವಣಿಗೆಯ ಮೊದಲ ತಾಲೀಮು ಯಶಸ್ವಿಯಾಗಿ ನೆರವೇರಿಸಲಾಯಿತು.

ವಿಜಯ ದಶಮಿಯ ದಿನವಾದ ಅ.12ರಂದು ಮಧ್ಯಾಹ್ನ 1.41ರಿಂದ 2.10ರವರೆಗೆ ಸಲ್ಲುವ ಶುಭ ಮಕರ ಲಗ್ನದಲ್ಲಿ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗ ಸಿಎಂ ಸಿದ್ದರಾಮಯ್ಯ ನಂದಿ ಧ್ವಜಕ್ಕೆ ಪೂಜೆ ಸಲ್ಲಿಸಿ ಜಂಬೂಸವಾರಿ ಮೆರವಣಿಗೆಗೆ ಚಾಲನೆ ನೀಡಲಿದ್ದು, ಅಂದು ಸಂಜೆ 4 ರಿಂದ 4.30ರೊಳಗೆ ಸಲ್ಲುವ ಕುಂಭ ಲಗ್ನದಲ್ಲಿ ಗಜಪಡೆಯ ನಾಯಕ ಅಭಿಮನ್ಯು ಮೇಲೆ ಕಟ್ಟಿರುವ ಚಿನ್ನದ ಅಂಬಾರಿಯಲ್ಲಿ ವಿಜೃಂಭಿಸಲಿರುವ ನಾಡದೇವಿಯ ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ಮಾಡಲಾಗುತ್ತದೆ. ಈ ಹಿನ್ನೆಲೆಯಲ್ಲಿ ಅಂತಿಮ ಹಂತದ ಸಿದ್ಧತೆಗಾಗಿ ಇಂದು ನಡೆದ ತಾಲೀಮು ಮಹತ್ವದ್ದಾಗಿದೆ.

ಜಂಬೂಸವಾರಿ ದಿನ ಅರಮನೆ ಆವರಣದಲ್ಲಿ ಅಂಬಾರಿ ಆನೆ ಮುಂದೆ ಪೊಲೀಸ್ ತುಕಡಿ, ಅಶ್ವದಳ, ಪೊಲೀಸ್ ಬ್ಯಾಂಡ್ ವಾದನದ ತಂಡ ಸೇರಿದಂತೆ ಯಾವ ಕ್ರಮಾಂಕದಲ್ಲಿ ಸಾಗಬೇಕೆಂಬ ಸ್ಪಷ್ಟ ಚಿತ್ರಣಕ್ಕಾಗಿ ಇಂದು ಬೆಳಗ್ಗೆ ಜಂಬೂಸವಾರಿಯ ಪುಷ್ಪಾರ್ಚನೆಯ ತಾಲೀಮು ನಡೆಸಲಾಯಿತು. ಹಿರಿಯ ಹೆಣ್ಣಾನೆ ವರಲಕ್ಷ್ಮೀ ಆನೆಯನ್ನು ಹೊರತುಪಡಿಸಿ 13 ಆನೆಗಳು ತಾಲೀಮಿನಲ್ಲಿ ಹೆಜ್ಜೆ ಹಾಕಿದವು.

ಜಂಬೂಸವಾರಿಯಲ್ಲಿ ಸಾಗುವ ನಿಶಾನೆ ಆನೆ ಧನಂಜಯ, ನೌಫತ್ ಆನೆ ಗೋಪಿ, ಸಾಲಾನೆಗಳು ಯಾವ ಕ್ರಮಾಂಕದಲ್ಲಿ ಸಾಗಬೇಕೆಂದು ಈಗಾಗಲೇ ನಿರ್ಧರಿಸಲಾಗಿದ್ದು, ಆ ಕ್ರಮಾಂಕದಂತೆ ಇಂದು ನಡೆದ ತಾಲೀಮಿನಲ್ಲಿ ಆನೆಗಳು ಸಾಗಿದವು. ಬಳಿಕ ಅಂಬಾರಿ ಆನೆ ಅಭಿಮನ್ಯು ಕುಮ್ಕಿ ಆನೆಗಳಾದ ಲಕ್ಷ್ಮೀ ಹಾಗೂ ಹಿರಣ್ಯಳೊಂದಿಗೆ ಪುಷ್ಪಾರ್ಚನೆ ಸ್ಥಳಕ್ಕೆ ಆಗಮಿಸಿತು. ಈ ವೇಳೆ ಪೆರೇಡ್ ಕಮಾಂಡರ್, ಅಶ್ವದಳ ಕಮಾಂಡೆಂಟ್ ವಿ.ಶೈಲೇಂದ್ರ ಅವರು ಕುದುರೆ ಮೇಲೆ ಬಂದು ಪೆರೇಡ್ ಆರಂಭಕ್ಕೆ ಗಣ್ಯರಿಂದ ಅನುಮತಿ ಕೇಳಿದರು. ಅನುಮತಿ ಸಿಗುತ್ತಿದ್ದಂತೆ ರಾಷ್ಟ್ರಗೀತೆ ನುಡಿಸಲು ಕಮಾಂಡ್ ನೀಡುತ್ತಿದ್ದಂತೆ ವೇದಿಕೆ ಮೇಲಿದ್ದ ಶಾಸಕ ಟಿ.ಎಸ್.ಶ್ರೀವತ್ಸ, ಡಿಸಿಪಿಗಳಾದ ಎಂ.ಮುತ್ತುರಾಜ್, ಜಾಹ್ನವಿ, ಸಿಎಆರ್ ಡಿಸಿಪಿ ಮಾರುತಿ, ಎಸಿಪಿಗಳಾದ ಶಾಂತಮಲ್ಲಪ್ಪ, ಅಶೋಕ್(ಸಿಎಆರ್), ಅರಮನೆ ಭದ್ರತಾ ವಿಭಾಗದ ಎಸಿಪಿ ಚಂದ್ರಶೇಖರ್ ಅಂಬಾರಿ ಆನೆ ಅಭಿಮನ್ಯುವಿನ ಮೇಲೆ ಪುಷ್ಪಾರ್ಚನೆ ಮಾಡಿದರು.

ಈ ವೇಳೆ ಕೋಟೆ ಮಾರಮ್ಮ ದೇವಾಲಯದ ಮೈದಾನದಲ್ಲಿ ಸಿಡಿಮದ್ದು ಸಿಡಿಸುವ ತಂಡ 7 ಫಿರಂಗಿಗಳಲ್ಲಿ ತಲಾ ಮೂರು ಸುತ್ತಿನಂತೆ 21 ಬಾರಿ ಸಿಡಿಮದ್ದು ಸಿಡಿಸಿದರು. ರಾಷ್ಟ್ರಗೀತೆ ನುಡಿಸುತ್ತಿದ್ದಂತೆಯೇ ಅಭಿಮನ್ಯು ಸೊಂಡಿಲೆತ್ತಿ ಗಣ್ಯರಿಗೆ ಸೆಲ್ಯೂಟ್ ಹೊಡೆದರೆ, ಸಮವಸ್ತ್ರ ಧರಿಸಿದ್ದ ಪೊಲೀಸ್ ಅಧಿಕಾರಿಗಳು, ಅರಣ್ಯ ಸಿಬ್ಬಂದಿ ಸೆಲ್ಯೂಟ್ ಹೊಡೆದು ಗೌರವ ಸಮರ್ಪಿಸಿದರು.

ನಂತರ ಪೊಲೀಸ್ ಬ್ಯಾಂಡ್ ವಾದನದ ಶಬ್ದಕ್ಕೆ ಅನುಗುಣವಾಗಿ ಶಸ್ತ್ರ ಸಹಿತ 6 ಪೊಲೀಸ್ ತುಕಡಿಗಳು ಆಕರ್ಷಕ ಪಥಸಂಚಲನದಲ್ಲಿ ಸಾಗಿತು. ಅಶ್ವಪಡೆಯ ಎರಡು ತುಕಡಿಗಳು ಹಿಂಬಾಲಿಸಿತು. ಅಂತಿಮವಾಗಿ ಅಂಬಾರಿ ಆನೆ ಅಭಿಮನ್ಯು ಕುಮ್ಕಿ ಆನೆಯೊಂದಿಗೆ ತಾಲೀಮಿನಲ್ಲಿ ಸಾಗಿತು.


ಸುಧಾರಣೆ ಕಂಡ ಕುಮ್ಕಿ ಆನೆಗಳು: ಸಿಡಿಮದ್ದು ಸಿಡಿತದ ತಾಲೀಮು ವೇಳೆ ಸಿಡಿಮದ್ದು ಶಬ್ದಕ್ಕೆ ಹೆದರಿದ್ದ ಕುಮ್ಕಿ ಆನೆ ಹಿರಣ್ಯ ಹಾಗೂ ಶ್ರೀರಂಗಪಟ್ಟಣದಲ್ಲಿ ಓಡಾಡಿದ್ದ ಲಕ್ಷ್ಮೀ ಆನೆ ಇಂದು ನಡೆದ ತಾಲೀಮಿನಲ್ಲಿ ಅಳುಕಿಲ್ಲದೆ ಪಾಲ್ಗೊಂಡು ಗಮನ ಸೆಳೆದವು. ಅಭಿಮನ್ಯುವಿನ ಬಲಕ್ಕೆ ಲಕ್ಷ್ಮೀ, ಎಡ ಭಾಗಕ್ಕೆ ಹಿರಣ್ಯ ಆನೆ ಸಾಗಲಿದ್ದು, ತಾಲೀಮಿನ ವೇಳೆ ಸಿಡಿಸಿದ ಸಿಡಿಮದ್ದಿನ ಶಬ್ಧ ಹಾಗೂ ಆನೆ ಸಮೀಪವೇ ಪೊಲೀಸ್ ಬ್ಯಾಂಡ್ ವಾದನದ ತಂಡ ರಾಷ್ಟ್ರೀಗೀತೆ ನುಡಿಸಿದ ಶಬ್ಧಕ್ಕೆ ಆರಂಭದ ಐದಾರು ಸೆಕೆಂಡ್‌ನಲ್ಲಿ ಸಣ್ಣ ಪ್ರಮಾಣದಲ್ಲಿ ಬೆಚ್ಚಿದವು. ಬಳಿಕ ಮಾವುತರು ಎರಡೂ ಆನೆಗಳನ್ನು ಸಮಾಧಾನಪಡಿಸಿದರು. ನಂತರ ಸುಧಾರಿಸಿ ತಾಲೀಮಿನಲ್ಲಿ ಗಮನಾರ್ಹವಾಗಿ ವರ್ತಿಸಿ ಸೈ ಎನಿಸಿಕೊಂಡವು.

ಮೊದಲ ತಾಲೀಮು ಯಶಸ್ವಿ

"ದಸರಾ ಗಜಪಡೆಗೆ ಬುಧವಾರ ಜಂಬೂಸವಾರಿಯ ತಾಲೀಮನ್ನು ಯಶಸ್ವಿಯಾಗಿ ನಡೆಸಲಾಗಿದೆ. ಎಲ್ಲಾ ಆನೆಗಳು ಪರಿಪಕ್ವವಾಗಿ ವರ್ತಿಸಿವೆ. ಜಂಬೂಸವಾರಿ ದಿನ ಇರುವ ವಾತಾವರಣದ ಪರಿಚಯ ಮಾಡಿಕೊಡಲು ತಾಲೀಮು ನಡೆಸಲಾಗಿದೆ. ಸಿಡಿಮದ್ದು ಸಿಡಿಸಿ, ರಾಷ್ಟ್ರಗೀತೆಯನ್ನು ನುಡಿಸಲಾಗಿದ್ದು, ಆನೆಗಳ ವರ್ತನೆಯಲ್ಲಿ ಯಾವುದೇ ರೀತಿ ಬದಲಾವಣೆ ಕಂಡಿಲ್ಲ. ಈ ಹಿನ್ನೆಲೆಯಲ್ಲಿ ಗಜಪಡೆ ಜಂಬೂಸವಾರಿಗೆ ಸನ್ನದ್ಧಗೊಂಡಿವೆ.

–ಡಾ.ಐ.ಬಿ.ಪ್ರಭುಗೌಡ, ಡಿಸಿಎಫ್

ಅ.20ರವರೆಗೆ ಬೃಂದಾವನ ಗಾರ್ಡನ್‌ನಲ್ಲಿ ಫಲಪುಷ್ಪ ಪ್ರದರ್ಶನ; ದೀಪಾಲಂಕಾರ





ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಕೃಷ್ಣರಾಜಸಾಗರ (ಕೆಆರ್‌ಎಸ್)ದ ಬೃಂದಾವನ ಗಾರ್ಡನ್‌ನಲ್ಲಿ ಅ.20ರವರೆಗೆ ಫಲಪುಷ್ಪ ಪ್ರದರ್ಶನ ಹಾಗೂ ವಿದ್ಯುತ್ ದೀಪಾಲಂಕಾರ ವ್ಯವಸ್ಥೆ ಮಾಡಲಾಗಿರುವುದನ್ನು ಕಾಣಬಹುದು.

ಮೈಸೂರು,ಅ.9(ಆರ್‌ಕೆ)– ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಕೃಷ್ಣರಾಜಸಾಗರ (ಕೆಆರ್‌ಎಸ್)ದ ಬೃಂದಾವನ ಗಾರ್ಡನ್‌ನಲ್ಲಿ ಅಕ್ಟೋಬರ್ 20ರವರೆಗೆ ಫಲಪುಷ್ಪ ಪ್ರದರ್ಶನ ಹಾಗೂ ವಿದ್ಯುತ್ ದೀಪಾಲಂಕಾರ ವ್ಯವಸ್ಥೆ ಮಾಡಲಾಗಿದೆ.

ಬೃಂದಾವನ ವೀಕ್ಷಿಸಲು ಬರುವ ಪ್ರವಾಸಿಗರಿಗೆ ವಿದ್ಯುತ್ ದೀಪಾಲಂಕಾರ ಮತ್ತು ಫಲಪುಷ್ಪ ಪ್ರದರ್ಶನ ಮನರಂಜನೆ ನೀಡುತ್ತಿದ್ದು, ಪ್ರವಾಸಿಗರನ್ನು ಸೆಳೆಯುತ್ತಿದೆ. ಕಾವೇರಿ ನೀರಾವರಿ ನಿಗಮವು ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಿದ್ದು, ಪ್ರತಿದಿನ ಸಂಜೆ ಪ್ರವಾಸಿಗರು ಕೆಆರ್‌ಎಸ್‌ನತ್ತ ಅಧಿಕ ಸಂಖ್ಯೆಯಲ್ಲಿ ಧಾವಿಸುತ್ತಿದ್ದಾರೆ.

ಮೈಸೂರು ನಗರದ ವಿದ್ಯುತ್ ದೀಪಾಲಂಕಾರ ಹಾಗೂ ಯುವ ದಸರಾದಲ್ಲಿ ಅಂತರರಾಷ್ಟ್ರೀಯ ಖ್ಯಾತಿಯ ಸಂಗೀತ, ಗಾಯಕರಿಂದ ಕಾರ್ಯಕ್ರಮ ಆಯೋಜಿಸುತ್ತಿರುವುದರಿಂದ ಭಾರೀ ಪ್ರಮಾಣದಲ್ಲಿ ಪ್ರೇಕ್ಷಕರು ಪಾಲ್ಗೊಳ್ಳುತ್ತಿರುವುದರಿಂದ ಶುಕ್ರವಾರದಿಂದ ಮುಂದಿನ ವಾರದ ಅಂತ್ಯದವರೆಗೆ ಕೆಆರ್‌ಎಸ್‌ಗೆ ಹೆಚ್ಚಿನ ಸಂಖ್ಯೆಯ ಪ್ರವಾಸಿಗರು ಬರುವ ಸಾಧ್ಯತೆ ಇದೆ ಎಂದು ಕಾವೇರಿ ನೀರಾವರಿ ನಿಗಮ (ಸಿಎನ್‌ಎನ್‌ಎಲ್)ದ ಅಧಿಕಾರಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ ಅಭಿವೃದ್ಧಿಪಡಿಸಿರುವ ಸಂಗೀತ ಕಾರಂಜಿ, ವಿದ್ಯುದ್ದೀಪಾಲಂಕಾರದೊಂದಿಗೆ ಕಂಗೊಳಿಸುತ್ತಿರುವ ಬೃಂದಾವನ ಗಾರ್ಡನ್ ಹಾಗೂ ಸಂಗೀತ ರಸಸಂಜೆ ಕಾರ್ಯಕ್ರಮಗಳಿಂದಾಗಿ ಕೆಆರ್‌ಎಸ್‌ನತ್ತ ಪ್ರವಾಸಿಗರು ಈಗಾಗಲೇ ಭಾರೀ ಸಂಖ್ಯೆಯಲ್ಲಿ ಮುಖ ಮಾಡಿದ್ದು, ಅವರಿಗೆ ಅಗತ್ಯ ಮೂಲ ಸೌಕರ್ಯ ಕಲ್ಪಿಸಿರುವುದಾಗಿ ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.

ಶ್ರೀರಂಗಪಟ್ಟಣದ ಶ್ರೀ ರಂಗನಾಥಸ್ವಾಮಿ, ಕಾವೇರಿ ಮಾತೆ, ರಾಧಾಕೃಷ್ಣ, ಕರ್ನಾಟಕ ಸುವರ್ಣ ಸಂಭ್ರಮ, ಮೈಸೂರು ರಾಜವಂಶಸ್ಥರ ಗಂಡಭೇರುಂಡ ಲಾಂಛನ, ಟಿಪ್ಪು ಸುಲ್ತಾನ್, ದರಿಯಾ ದವಲತ್ ಸೇರಿದಂತೆ ಮಂಡ್ಯ ಜಿಲ್ಲೆಯ ವೈಶಿಷ್ಟ್ಯಗಳನ್ನು ಫಲಪುಷ್ಪ ಪ್ರದರ್ಶನದಲ್ಲಿ ಸಾದರಪಡಿಸಲಾಗಿದೆ.

ವಿದ್ಯುತ್ ಕಂಬ,ತಂತಿ ಮೇಲೆ ಬೆಳೆದುಕೊಂಡಿದ್ದ ಗಿಡಗಂಟಿಗಳು

ಚೆಸ್ಕಾಂ ನಿರ್ಲಕ್ಷ್ಯದಿಂದ ವಿದ್ಯುತ್ ಸ್ಪರ್ಶಗೊಂಡು ರೈತ ಮಹಿಳೆ ಸಾವು

ಚೆಸ್ಕಾಂ ವಿರುದ್ಧ ಗ್ರಾಮಸ್ಥರ ಪ್ರತಿಭಟನೆ, ಸೂಕ್ತ ಪರಿಹಾರಕ್ಕೆ ಆಗ್ರಹ





ಕೆ.ಆರ್.ಪೇಟೆ,ಅ.9– ಮನೆಯ ಬಳಿ ಇರುವ ವಿದ್ಯುತ್ ಕಂಬ ಮತ್ತು ತಂತಿಗಳ ಮೇಲೆ ಗಿಡಗಂಟಿಗಳು ಬೆಳೆದುಕೊಂಡಿದ್ದರಿಂದ ವಿದ್ಯುತ್ ಸ್ಪರ್ಶವಾಗಿ ರೈತ ಮಹಿಳೆಯೊಬ್ಬರು ಸಾವನ್ನಪ್ಪಿರುವ ಘಟನೆ ತಾಲೂಕಿನ ಬೂಕನಕೆರೆ ಹೋಬಳಿಯ ಮುದುಗೆರೆ ಗ್ರಾಮದಲ್ಲಿ ಬುಧವಾರ ಸಂಭವಿಸಿದ್ದು, ರೊಚ್ಚಿಗೆದ್ದ ಗ್ರಾಮಸ್ಥರು ಪ್ರತಿಭಟನೆ ನಡೆಸಿದರು.

ಮುದುಗೆರೆ ಗ್ರಾಮದ ರೈತ ಮೋಹನ್ ಅವರ ಧರ್ಮಪತ್ನಿ ನೇತ್ರಾವತಿ ಮೋಹನ್ (47) ಮೃತ ರೈತ ಮಹಿಳೆ. ಮನೆಯ ಮುಂದಿರುವ ವಿದ್ಯುತ್ ಕಂಬ ಹಾಗೂ ವಿದ್ಯುತ್ ತಂತಿಗಳ ಮೇಲೆ ಗಿಡಗಂಟಿಗಳು ಬೆಳೆದು ನಿಂತಿದ್ದು, ಅನುಪಯುಕ್ತ ಗಿಡಗಳನ್ನು ತೆರವು ಮಾಡುವಂತೆ ಚೆಸ್ಕಾಂ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಸಹ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದರಿಂದ ಅನುಪಯುಕ್ತ ಗಿಡದ ಕಾಂಡದ ಮೂಲಕ ಮನೆಯಿಂದ ಹೊರ ಬಂದ ರೈತ ಮಹಿಳೆ ನೇತ್ರಾವತಿ ಅವರಿಗೆ ವಿದ್ಯುತ್ ಸ್ಪರ್ಶವಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಘಟನೆಯಿಂದ ಗ್ರಾಮದಲ್ಲಿ ಉದ್ರಿಕ್ತ ಪರಿಸ್ಥಿತಿ ನಿರ್ಮಾಣವಾಗಿತ್ತು. ಚೆಸ್ಕಾಂ ಅಧಿಕಾರಿಗಳ ವಿರುದ್ಧ ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿ ರಸ್ತೆಯಲ್ಲಿ ಕುಳಿತು ಪ್ರತಿಭಟನೆ ನಡೆಸಿ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮಕ್ಕೆ ಆಗ್ರಹಿಸಿದರು. ವಿಷಯ ತಿಳಿದ ಕೂಡಲೇ ಗ್ರಾಮಕ್ಕೆ ಆಗಮಿಸಿದ ಶಾಸಕ ಹೆಚ್.ಟಿ.ಮಂಜು ಗ್ರಾಮಸ್ಥರನ್ನು ಸಮಾಧಾನ ಪಡಿಸಿ, ಚೆಸ್ಕಾಂ ಅಧಿಕಾರಿಗಳಿಂದ ಸೂಕ್ತ ಪರಿಹಾರ ಕೊಡಿಸುವ ಭರವಸೆ ನೀಡಿದರು.

ಹಿಂದೆ ಮೂವರ ಸಾವು: ಚೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯದಿಂದ ಈ ಹಿಂದೆ ಕೂಡಾ ಇದೇ ಮುದುಗೆರೆ ಗ್ರಾಮದ ಇದೇ ಜಾಗದಲ್ಲಿ ವಿದ್ಯುತ್ ಕಂಬಕ್ಕೆ ಗಿಡಗಂಟಿಗಳು ಬೆಳೆದುಕೊಂಡಿದ್ದ ಕಾರಣ ವಿದ್ಯುತ್ ಸ್ಪರ್ಶದಿಂದ ಮುದುಗೆರೆ ಗ್ರಾಮದ ಸತೀಶ್, ಬಸವೇಗೌಡ, ರವಿ ಎಂಬ ಮೂವರು ಒಂದೇ ದಿನ ಮೃತಪಟ್ಟಿದ್ದರು. ಆದರೂ ಎಚ್ಚೆತ್ತುಕೊಳ್ಳದೇ ಇರುವ ಚೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯದಿಂದ ಮತ್ತೊಂದು ಜೀವಹಾನಿಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಚೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯ ಖಂಡಿಸಿ ಗ್ರಾಮಸ್ಥರು ಪ್ರತಿಭಟನೆ ನಡೆಸುತ್ತಿರುವುದು.

ಕೂಡಲೇ ಎಲ್ಲೆಲ್ಲಿ ವಿದ್ಯುತ್ ಕಂಬಗಳ ಮೇಲೆ ಗಿಡಗಂಟೆಗಳು ಬೆಳೆದುಕೊಂಡಿವೆಯೋ ಅದನ್ನೆಲ್ಲ ತೆಗೆದು ಸ್ವಚ್ಛಗೊಳಿಸಬೇಕು. ಮುಂದೆ ಜೀವಹಾನಿಯಾಗದಂತೆ ನೋಡಿಕೊಳ್ಳಬೇಕು. ಮೃತ ರೈತ ಮಹಿಳೆ ನೇತ್ರಾವತಿ ಮೋಹನ್ ಕುಟುಂಬಕ್ಕೆ ಕನಿಷ್ಠ 50ಲಕ್ಷ ರೂ. ಪರಿಹಾರ ನೀಡಬೇಕು ಹಾಗೂ ಮೃತ ಮಹಿಳೆಯ ಕುಟುಂಬಕ್ಕೆ ಚೆಸ್ಕಾಂನಲ್ಲಿ ಉದ್ಯೋಗ ನೀಡಬೇಕು ಎಂದು ಮುದುಗೆರೆ ಗ್ರಾಮಸ್ಥರು ಶಾಸಕರು ಮತ್ತು ಸ್ಥಳದಲ್ಲಿ ಹಾಜರಿದ್ದ ಚೆಸ್ಕಾಂ ಅಧಿಕಾರಿಗಳನ್ನು ಒತ್ತಾಯಿಸಿದರು. ಶಾಸಕರು ಮತ್ತು ಚೆಸ್ಕಾಂ ಅಧಿಕಾರಿಗಳ ಭರವಸೆ ಮೇರೆಗೆ ಗ್ರಾಮಸ್ಥರು ಪ್ರತಿಭಟನೆ ಕೈಬಿಟ್ಟರು.

ಮೃತ ಮಹಿಳೆಯ ವೈದ್ಯಕೀಯ ಪರೀಕ್ಷೆಗಾಗಿ ಮಂಡ್ಯ ಮಿಮ್ಸ್‌ಗೆ ಸಾಗಿಸಲಾಯಿತು. ಘಟನೆ ಕುರಿತು ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಾಸಕ ದರ್ಶನ್ ಹುಟ್ಟುಹಬ್ಬದ ಅಂಗವಾಗಿ ಕೆ.ಎಸ್.ಪುಟ್ಟಣ್ಣಯ್ಯ ಪ್ರಶಸ್ತಿ ಪ್ರದಾನ



ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ್, ತಹಸಿಲ್ದಾರ್‌ರಾದ ಶಿವಕುಮಾರ್ ಬಿರದಾರ್, ಸ್ಮಿತರಾಮು ಸೇರಿದಂತೆ ಹಲವರಿಗೆ ರೈತ ನಾಯಕ ಹಾಗೂ ಮಾಜಿ ಶಾಸಕ ಕೆ.ಎಸ್.ಪುಟ್ಟಣ್ಣಯ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮಂಡ್ಯ,ಅ.9– ತಾಲೂಕಿನ ಹೊಳಲು ಗ್ರಾಮದಲ್ಲಿ ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ ಜನ್ಮದಿನದ ಅಂಗವಾಗಿ ದರ್ಶನ್ ಪುಟ್ಟಣ್ಣಯ್ಯ ಅಭಿಮಾನಿಗಳು ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ್, ತಹಸಿಲ್ದಾರ್‌ರಾದ ಶಿವಕುಮಾರ್ ಬಿರದಾರ್, ಸ್ಮಿತರಾಮು ಸೇರಿದಂತೆ ಹಲವರಿಗೆ ರೈತ ನಾಯಕ ಹಾಗೂ ಮಾಜಿ ಶಾಸಕ ಕೆ.ಎಸ್.ಪುಟ್ಟಣ್ಣಯ್ಯ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಿತು.

ಸಮಾರಂಭದಲ್ಲಿ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಮಾತನಾಡಿ, ಪುಟ್ಟಣ್ಣಯ್ಯ ಅವರು ರೈತರ ಸಮಸ್ಯೆಗಳಾದ ಕಬ್ಬು, ನೀರು ಬೆಳೆಗಳಿಗೆ ವೈಜ್ಞಾನಿಕವಾಗಿ ಬೆಂಬಲ ಬೆಲೆ ನೀಡುವಂತೆ ಗಟ್ಟಿ ಧ್ವನಿಯಲ್ಲಿ ಸದನದಲ್ಲಿ ವಾದ ಮಂಡಿಸುತ್ತಿದ್ದರು. ಇವರಿಗೆ ರೈತರ ಬಗ್ಗೆ ಇದ್ದ ಕಾಳಜಿ ಅವರ ಮಾತಿನಲ್ಲಿ ವ್ಯಕ್ತವಾಗುತ್ತಿದ್ದವು. ಇಂತಹ ಧೀಮಂತ ನಾಯಕನ ಹೆಸರಿನಲ್ಲಿ ಪ್ರಶಸ್ತಿ ಪ್ರದಾನ ಮಾಡುತ್ತಿರುವುದು ಪ್ರಶಂಸನೀಯವಾದದ್ದು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರು ಕೂಡ ತಮ್ಮ ಕ್ಷೇತ್ರದ ಅಭಿವೃದ್ಧಿಗಾಗಿ ಹೊಸ ಹೊಸ ಯೋಜನೆಗಳ ಬಗ್ಗೆ ಮಾಹಿತಿ ಪಡೆದು ಮುಖ್ಯಮಂತ್ರಿಗಳು, ಸಚಿವರುಗಳ, ಸಹಕಾರದಿಂದ ದೂರದೃಷ್ಟಿ ಇಟ್ಟುಕೊಂಡು ಅಭಿವೃದ್ಧಿ ಕೆಲಸದಲ್ಲಿ ತೊಡಗಿದ್ದಾರೆ. ಮುಂದೆಯೂ ಸಹ ಇವರಿಗೆ ಹೆಚ್ಚಿನ ಯಶಸ್ಸು ಸಿಗಲಿ ಎಂದು ಶುಭ ಹಾರೈಸಿದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿ, ಹಿರಿಯರ ಮಾರ್ಗದರ್ಶನ ಪಡೆದು ಅಭಿವೃದ್ಧಿ ಕೆಲಸ ಮಾಡಲಿದ್ದೇನೆ. ದಿನನಿತ್ಯ ರೈತರು ಸಮಸ್ಯೆಗಳನ್ನು ಹೊತ್ತು ಕಚೇರಿಗಳಿಗೆ ಅಲೆಯುತ್ತಿದ್ದರು. ಇದನ್ನು ಮನಗಂಡು ಸರ್ಕಾರಿ ಸೇವೆ ಮನೆ ಬಾಗಿಲಿಗೆ ಕಾರ್ಯಕ್ರಮ ರೂಪಿಸಿ ಪಂಚಾಯಿತಿ ವ್ಯಾಪ್ತಿಯಲ್ಲಿ ರೈತರ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದೇನೆ. ಮುಂದೆಯೂ ಸಹ ಈ ಯೋಜನೆ ಮುಂದುವರಿಸಿಕೊಂಡು ಹೋಗುತ್ತೇನೆ. ಇದರಿಂದ ರೈತರ ಅಲೆದಾಟ ಸ್ವಲ್ಪ ಮಟ್ಟಿಗಾದರು ಕಡಿಮೆಯಾಗುತ್ತದೆ ಎಂಬ ಭಾವನೆ ವ್ಯಕ್ತಪಡಿಸಿದರು. ನನ್ನ ಹುಟ್ಟುಹಬ್ಬದಂದು ನಮ್ಮ ಕಾರ್ಯಕರ್ತರು ನಮ್ಮ ತಂದೆಯ ಹೆಸರಿನಲ್ಲಿ ಪ್ರಶಸ್ತಿ ಪ್ರದಾನ ಮಾಡುತ್ತಿದ್ದಾರೆ. ಇವರ ಸಾಮಾಜಿಕ ಸೇವೆಗೆ ಅಭಿನಂದನೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ಪಿ.ರವಿಕುಮಾರ್ ಗೌಡ, ಮಾಜಿ ಶಾಸಕ ಎಚ್.ಬಿ.ರಾಮು, ಅಪರ ಜಿಲ್ಲಾಧಿಕಾರಿ ಎಚ್.ಎಲ್.ನಾಗರಾಜು, ತಹಶೀಲ್ದಾರಗಳಾದ ಶಿವಕುಮಾರ್ ಬಿರಾದಾರ್, ಸ್ಮಿತಾ ರಾಮು, ಮುಡಾ ಅಧ್ಯಕ್ಷ ನಹೀಂ, ಮುಖಂಡರಾದ ಸುನಿತಾ ಪುಟ್ಟಣ್ಣಯ್ಯ, ನಾಗರಾಜು ಭಾಗವಹಿಸಿದ್ದರು.

ಶ್ರೀರಂಗಪಟ್ಟಣ ಬಳಿ ಹುಲ್ಲಿನ ಮೆದೆಗೆ ಬೆಂಕಿ



ಶ್ರೀರಂಗಪಟ್ಟಣ: ತಾಲೂಕಿನ ಹೊಸ ಉಂಡವಾಡಿ ಗ್ರಾಮದ ರೈಲ್ವೆ ನಿಲ್ದಾಣದ ಸಮೀಪದಲ್ಲಿರುವ ಶನಿಮಠದ ಹುಲ್ಲಿನ ಮೆದೆಗೆ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದು, ಗೋವುಗಳಿಗೆ ಸಂಗ್ರಹಿಸಿದ್ದ ಹುಲ್ಲಿನ ರಾಶಿ ಸಂಪೂರ್ಣವಾಗಿ ಬೆಂಕಿಗಾಹುತಿಯಾಗಿದೆ.

ಮಂಗಳವಾರ ಮಧ್ಯರಾತ್ರಿ ಈ ಘಟನೆ ನಡೆದಿದ್ದು, ಸ್ಥಳೀಯರು ಮಠದ ಗೋಶಾಲೆಯಲ್ಲಿದ್ದ ಗೋವುಗಳನ್ನು ರಕ್ಷಿಸಿದ್ದಾರೆ. ಸುದ್ದಿ ತಿಳಿದು ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಹೆಚ್ಚಿನ ಅನಾಹುತವನ್ನು ತಪ್ಪಿಸಿದ್ದಾರೆ. ಶನಿಮಠದ ವ್ಯವಸ್ಥಾಪಕಿ ಚಂದ್ರಕಲಾ ಕೆಆರ್‌ಎಸ್ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಸ್ಥಳ ಪರಿಶೀಲನೆ ನಡೆಸಿ ತನಿಖೆ ಕೈಗೊಂಡಿದ್ದಾರೆ.

ಮೇಲಾಧಿಕಾರಿ ಬೈದರೆಂದು ಕೈ ಕೊಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸಿದ ಶಿಕ್ಷಣ ಇಲಾಖೆ ನೌಕರ

ಪಾಂಡವಪುರ,ಅ.9– ಮೇಲಾಧಿಕಾರಿ ಬೈದರು ಎಂಬ ಕಾರಣಕ್ಕೆ ನೌಕರನೋರ್ವ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಯಲ್ಲಿ ಅಧಿಕಾರಿ ಎದುರೇ ಚಾಕುವಿನಿಂದ ಕೈ ಕೊಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಪಟ್ಟಣದಲ್ಲಿ ಬುಧವಾರ ಸಂಭವಿಸಿದೆ.

ಶಿಕ್ಷಣ ಇಲಾಖೆಯ ಪ್ರಥಮ ದರ್ಜೆ ಸಹಾಯಕ (ಎಫ್‌ಡಿಎ)ನಾಗಿ ಕರ್ತವ್ಯ ನಿರ್ವಹಿಸುತ್ತಿರುವ ನಾಗಮಂಗಲ ಮೂಲದ ತೇಜಸ್ ಎಂಬಾತನೆ ಕೈ ಕೊಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸಿದ ನೌಕರ.

ತೇಜಸ್ ಕಚೇರಿಯಲ್ಲಿ ಶಿಕ್ಷಕರ ಸಮಸ್ಯೆಗಳಿಗೆ ಸರಿಯಾಗಿ ಸ್ಪಂದಿಸುತ್ತಿಲ್ಲ ಎಂದು ಕೆಲವು ಶಿಕ್ಷಕರು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ದೂರು ನೀಡಿದ್ದರು ಎನ್ನಲಾಗಿದೆ. ಈ ವಿಚಾರವಾಗಿ ಬಿಇಓ ರವಿಕುಮಾರ್ ಬುಧವಾರ ನೌಕರ ತೇಜಸ್ ಅವರನ್ನು ಕಚೇರಿಗೆ ಕರೆಸಿ ವಿಚಾರಿಸಿದ್ದಾರೆ ಎನ್ನಲಾಗಿದೆ.

ಪಾಂಡವಪುರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಚಿಡುಗಡೆ

ಈ ವೇಳೆ ಬಿಇಓ ಹಾಗೂ ತೇಜಸ್ ನಡುವೆ ವಾಗ್ವಾದ ನಡೆದಿದೆ. ಇದರಿಂದ ಕೋಪಗೊಂಡ ನೌಕರ ತೇಜಸ್ ಮೊದಲೇ ತಾನು ತಂದಿದ್ದ ಚಾಕುವಿನಿಂದ ಬಿಇಓ ಕಚೇರಿಯಲ್ಲಿಯೇ ಕೈ ಕೊಯ್ದುಕೊಂಡು ಆತ್ಮಹತ್ಯೆಗೆ ಯತ್ನಿಸಿದರು ಎನ್ನಲಾಗಿದೆ. ತಕ್ಷಣ ಆತನನ್ನು ಪಾಂಡವಪುರ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಲಾಯಿತು.

ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಸರ್ಕಲ್ ಇನ್ಸ್‌ಪೆಕ್ಟರ್ ವಿವೇಕಾನಂದ ಹಾಗೂ ಸಬ್ ಇನ್ಸ್‌ಪೆಕ್ಟರ್ ಉಮೇಶ್ ಅವರು ಪರಿಶೀಲನೆ ನಡೆಸಿ, ಬಳಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ನೌಕರ ತೇಜಸ್ ಅವರನ್ನು ಭೇಟಿ ಮಾಡಿ ವಿಚಾರಣೆ ನಡೆಸಿದ್ದಾರೆ. ಈ ವೇಳೆ ನೌಕರ ತೇಜಸ್ ಇಲಾಖೆಯ ಕೆಲಸಕ್ಕೆ ಸಂಬಂಧಿಸಿದಂತೆ ಹಲವು ಸಮಸ್ಯೆಗಳಿದ್ದು, ಅವುಗಳನ್ನು ಬಗೆಹರಿಸಿಕೊಡುವಂತೆ ಪೊಲೀಸರ ಮುಂದೆ ಮನವಿ ಮಾಡಿದ್ದಾರೆ.

ಸ್ಥಳದಲ್ಲಿಯೇ ಇದ್ದ ಬಿಇಓ ರವಿಕುಮಾರ್ ಅವರು ಅವರ ಸಮಸ್ಯೆಗಳನ್ನು ಆಲಿಸಿ ಬಗೆಹರಿಸಿಕೊಡಲಾಗುವುದು ಎಂದು ಭರವಸೆ ನೀಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ಸಂಬಂಧ ಯಾವುದೇ ದೂರು ದಾಖಲಾಗಿಲ್ಲ. ಚಿಕಿತ್ಸೆ ಪಡೆದು ನೌಕರ ತೇಜಸ್ ಮನೆಗೆ ತೆರಳಿದ್ದಾರೆ ಎಂದು ತಿಳಿದುಬಂದಿದೆ.

ನಾಗಮಂಗಲ ಗಲಭೆ: ದೂರು ನೀಡಿದ್ದ ಪೊಲೀಸ್ ಅಧಿಕಾರಿಯೇ ಅಮಾನತು

ನಾಗಮಂಗಲ: ನಾಗಮಂಗಲ ಕೋಮು ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ದೂರು ನೀಡಿದ್ದ ನಾಗಮಂಗಲ ಟೌನ್ ಠಾಣೆ ಪಿಎಸ್‌ಐ ಬಿ.ಜೆ.ರವಿ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ. ನಾಗಮಂಗಲ ಗಲಭೆಗೆ ಸಂಬಂಧಿಸಿದಂತೆ ಗಲಭೆ ಬಳಿಕ ಪ್ರಕರಣದ ಬಗ್ಗೆ ದೂರು ನೀಡಿದ್ದ ರವಿ, ಗಣೇಶ ವಿಸರ್ಜನೆ ಮಾಡುತ್ತಿದ್ದವರ ಪ್ರಚೋದನೆಯಿಂದ ಗಲಭೆ ಸೃಷ್ಟಿ ಎಂದು ದೂರಿನಲ್ಲಿ ಉಲ್ಲೇಖಿಸಿದ್ದರು. ಇದೀಗ ಕರ್ತವ್ಯ ನಿರ್ಲಕ್ಷ್ಯದಡಿ ಪಿಎಸ್‌ಐ ರವಿ ಅವರನ್ನು ಅಮಾನತು ಮಾಡಿ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಆದೇಶ ಹೊರಡಿಸಿದ್ದಾರೆ.

ಪಿಎಸ್‌ಐ ರವಿ ಜೊತೆಗೆ ಠಾಣೆಯ ಗುಪ್ತ ಮಾಹಿತಿ ಸಂಗ್ರಹ ಪೇದೆ ರಮೇಶ್ ಕೂಡ ಅಮಾನತಾಗಿದ್ದು, ಒಟ್ಟಾರೆ ಕೋಮು ಗಲಭೆ ಪ್ರಕರಣದಲ್ಲಿ ಇದೀಗ ನಾಲ್ವರ ತಲೆದಂಡ ಆದಂತಾಗಿದೆ. ಈ ಮೊದಲೇ ಡಿವೈಎಸ್ಪಿ ಸುಮಿತ್, ಪಿಐ ಅಶೋಕ್ ಅಮಾನತಾಗಿದ್ದರು. ಇದೀಗ ಮತ್ತಿಬ್ಬರನ್ನು ಎಸ್ಪಿ ಅಮಾನತು ಮಾಡಿದ್ದಾರೆ.

ಅರ್ಜಿ ಆಹ್ವಾನ

ಮಂಡ್ಯ,ಅ.9– ಮಂಡ್ಯ ಜಿಲ್ಲಾ ಚರ್ಮ ಕುಶಲಕರ್ಮಿಗಳಿಗೆ 2024–25ನೇ ಸಾಲಿನ ಡಾ.ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ವತಿಯಿಂದ ವಿವಿಧ ಕ್ರಿಯಾ ಯೋಜನೆಗಳಾದ ಕೌಶಲ್ಯ ತರಬೇತಿ, ಸ್ವಯಂ ಉದ್ಯೋಗ ಸ್ವಾವಲಂಬಿ ಮಾರಾಟ ಮಳಿಗೆ, ಸಂಚಾರಿ ಮಳಿಗೆ ಕಿರು ನೇರಸಾಲ, ಪಾದುಕೆ ಕುಟೀರ ವಸತಿ ಯೋಜನೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಮಾಹಿತಿಗೆ ಸಂಪರ್ಕಿಸಿ ದೂ.ಸಂ: 7411223926.

ಕೇಂದ್ರದಿಂದ 2028ರ ಡಿಸೆಂಬರ್‌ವರೆಗೂ ಬಡವರಿಗೆ ಸಾರವರ್ಧಿತ ಉಚಿತ ಅಕ್ಕಿ

ನವದೆಹಲಿ, ಅ.9– ಪ್ರಧಾನಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ (ಪಿಎಂಜಿಕೆಎವೈ) ಮತ್ತು ಇತರ ಕಲ್ಯಾಣ ಸೇರಿದಂತೆ ಸರ್ಕಾರದ ಎಲ್ಲಾ ಯೋಜನೆಗಳ ಅಡಿಯಲ್ಲಿ ಸಾರ್ವತ್ರಿಕವಾಗಿ ಸಾರವರ್ಧಿತ ಅಕ್ಕಿಯ ಉಚಿತ ಪೂರೈಕೆಯನ್ನು ಮುಂದುವರಿಸಲು ಪ್ರಧಾನಿ ಮೋದಿ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.

ಜುಲೈ 2024ರಿಂದ, 2028ರ ಡಿಸೆಂಬರ್‌ವರೆಗೆ ಈ ಯೋಜನೆ ಮುಂದುವರಿಯಲಿದೆ ಎಂದು ತಿಳಿಸಲಾಗಿದೆ. ಕ್ಯಾಬಿನೆಟ್ ಪ್ರಕಾರ, ಅಕ್ಕಿ ಬಲವರ್ಧನೆ ಉಪಕ್ರಮವು ಆಹಾರ ಸಬ್ಸಿಡಿಯ ಭಾಗವಾಗಿ ಸರ್ಕಾರದಿಂದ ಶೇಕಡಾ 100 ರಷ್ಟು ನಿಧಿಯೊಂದಿಗೆ ಕೇಂದ್ರ ವಲಯದ ಉಪಕ್ರಮವಾಗಿ ಮುಂದುವರಿಯುತ್ತದೆ, ಹೀಗಾಗಿ ಅನುಷ್ಠಾನಕ್ಕೆ ಏಕೀಕೃತ ಸಾಂಸ್ಥಿಕ ಕಾರ್ಯವಿಧಾನವನ್ನು ಒದಗಿಸುತ್ತದೆ.

ದೇಶದ ಹೆಚ್ಚಿನ ಜನಸಂಖ್ಯೆಯಲ್ಲಿ ರಕ್ತಹೀನತೆ ಮತ್ತು ಸೂಕ್ಷ್ಮ ಪೋಷಕಾಂಶಗಳ ಅಪೌಷ್ಟಿಕತೆಯನ್ನು ಪರಿಹರಿಸಲು, ಆಹಾರ ಬಲ ವರ್ಧನೆಯು ಸುರಕ್ಷಿತ ಮತ್ತು ಪರಿಣಾಮಕಾರಿ ಕ್ರಮವಾಗಿ ಜಾಗತಿಕವಾಗಿ ಬಳಸಲ್ಪಟ್ಟಿದೆ. ಭಾರತದಲ್ಲಿ, ಅಕ್ಕಿಯು ಸೂಕ್ಷ್ಮ ಪೋಷಕಾಂಶಗಳನ್ನು ಪೂರೈಸಲು ಸೂಕ್ತವಾದ ಬೆಳೆಯಾಗಿದೆ. ಏಕೆಂದರೆ ಜನಸಂಖ್ಯೆಯ ಶೇಕಡಾ 65 ರಷ್ಟು ಜನರು ಅದನ್ನು ಪ್ರಧಾನ ಆಹಾರವಾಗಿ ಬಳಸುತ್ತಾರೆ.



ಸಾಮಾನ್ಯ ಅಕ್ಕಿಗೆ (ಕಸ್ಟಮ್ ಮಿಲ್ಡ್ ರೈಸ್) ಎಫ್‌ಎಸ್‌ಎಸ್‌ಎಐ ಸೂಚಿಸಿದ ಮಾನದಂಡಗಳ ಪ್ರಕಾರ ಸೂಕ್ಷ್ಮ ಪೋಷಕಾಂಶಗಳಿಂದ (ಕಬ್ಬಿಣ, ಫೋಲಿಕ್ ಆಮ್ಲ, ವಿಟಮಿನ್ ಬಿ 12) ಸಮೃದ್ಧವಾಗಿರುವ ಫೋರ್ಟಿಫೈಡ್ ರೈಸ್ ಕರ್ನಲ್‌ಗಳನ್ನು (ಎಫ್‌ಆರ್‌ಕೆ) ಸೇರಿಸುವುದನ್ನು ಅಕ್ಕಿಯ ಸಾರವರ್ಧನೆ ಒಳಗೊಂಡಿರುತ್ತದೆ.

ಏಪ್ರಿಲ್ 2022ರಲ್ಲಿ, ಆರ್ಥಿಕ ವ್ಯವಹಾರಗಳ ಕ್ಯಾಬಿನೆಟ್ ಸಮಿತಿ (CCEA) ಮಾರ್ಚ್ 2024 ರೊಳಗೆ ದೇಶಾದ್ಯಂತ ಭತ್ತದ ಬಲವರ್ಧನೆ ಉಪಕ್ರಮವನ್ನು ಹಂತಹಂತವಾಗಿ ಜಾರಿಗೆ ತರಲು ನಿರ್ಧರಿಸಿತು. ಎಲ್ಲಾ ಮೂರು ಹಂತಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಲಾಗಿದೆ ಮತ್ತು ಸರ್ಕಾರದ ಎಲ್ಲಾ ಯೋಜನೆಗಳಲ್ಲಿ ಸಾರವರ್ಧಿತ ಅಕ್ಕಿಯನ್ನು ಪೂರೈಸುವ ಸಾರ್ವತ್ರಿಕ ವ್ಯಾಪ್ತಿ ಗುರಿಯನ್ನು ಮಾರ್ಚ್ ವೇಳೆಗೆ ಸಾಧಿಸಲಾಗಿದೆ ಎಂದು ಸಚಿವ ಸಂಪುಟ ತಿಳಿಸಿದೆ.

ಒಂದನೇ ಪುಟದಿಂದ

ರತನ್ ಟಾಟಾ ಇನ್ನಿಲ್ಲ

ಆತಂಕಪಡುವ ಅವಶ್ಯಕತೆ ಇಲ್ಲ ಎಂದು ತಿಳಿಸಿದ್ದರು. ಬುಧವಾರ ಅವರ ಆರೋಗ್ಯ ಸ್ಥಿತಿ ಗಂಭೀರವಾಗಿದ್ದು ತುರ್ತು ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಆದರೆ ತಡರಾತ್ರಿ ವೇಳೆಗೆ ಚಿಕಿತ್ಸೆ ಫಲಕಾರಿಯಾಗದೇ ಅವರು ಮೃತಪಟ್ಟಿದ್ದಾರೆ. ರತನ್ ಟಾಟಾ ಅವರಿಗೆ 2000ನೇ ವರ್ಷದಲ್ಲಿ ಪದ್ಮಭೂಷಣ, 2008ರಲ್ಲಿ ಪದ್ಮವಿಭೂಷಣ ಪ್ರಶಸ್ತಿಗಳನ್ನು ನೀಡಿ ಕೇಂದ್ರ ಸರ್ಕಾರ ಗೌರವಿಸಿತ್ತು. ಭಾರತ ಬಿಕ್ಕಟ್ಟು ಎದುರಿಸುತ್ತಿದ್ದ ಸಂದರ್ಭಗಳಲ್ಲೆಲ್ಲಾ ಅವರು ಕೋಟ್ಯಾಂತರ ರೂ. ಆರ್ಥಿಕ ಸಹಾಯ ಮಾಡುತ್ತಿದ್ದರು. ದೇಶದ ಸಾಮಾನ್ಯ ವರ್ಗದವರಿಗೂ ಕೈಗೆಟಕುವ ದರದಲ್ಲಿ ಕಾರು ಕಲ್ಪಿಸಬೇಕೆಂಬ ಕನಸು ಹೊತ್ತಿದ್ದ ಅವರು 'ನ್ಯಾನೋ' ಮೂಲಕ ಅದನ್ನು ಈಡೇರಿಸಿಯೂ ಇದ್ದರು.

ಕಟ್ಟೆಚ್ಚರಕ್ಕೆ ಸೂಚನೆ

ಈ ಹಿನ್ನೆಲೆಯಲ್ಲಿ ಅಪರಿಚಿತರ ಚಲನ ವಲನಗಳ ಮೇಲೆ ತೀವ್ರ ನಿಗಾ ವಹಿಸುವಂತೆ ಗುಪ್ತದಳ ಸಂದೇಶದಲ್ಲಿ ತಿಳಿಸಿರುವುದಾಗಿ ಹೇಳಲಾಗಿದೆ. ಕೇಂದ್ರ ಗುಪ್ತದಳದ ಎಚ್ಚರಿಕೆ ಸಂದೇಶದ ಬೆನ್ನಲ್ಲೇ ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಅಲೋಕ್‌ಮೋಹನ್ ಅವರು, ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿ ವ್ಯಾಪಕ ಮುಂಜಾಗ್ರತೆ ವಹಿಸುವಂತೆ ಸೂಚನೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಐತಿಹಾಸಿಕ ಮೈಸೂರು ದಸರಾ ಜಂಬೂಸವಾರಿ ಸೇರಿದಂತೆ ವಿವಿಧ ಧಾರ್ಮಿಕ ಆಚರಣೆಗಳ ಮೇಲೆ ಪೊಲೀಸ್ ಇಲಾಖೆ ತೀವ್ರ ನಿಗಾ ವಹಿಸಿದೆ. ರಾಜ್ಯದ ಎಲ್ಲಾ ಹೋಟೆಲ್‌ಗಳಲ್ಲಿ ಕಳೆದ 15 ದಿನಗಳಿಂದ ಕೊಠಡಿ ಪಡೆದಿರುವವರ ವಿವರಗಳನ್ನು ನೀಡುವಂತೆ ಸೂಚಿಸಿದ್ದು, ಇಂದಿನಿಂದ ಮುಂದಿನ ಹದಿನೈದು ದಿನ ಹೋಟೆಲ್‌ಗಳಲ್ಲಿ ಕೊಠಡಿ ಪಡೆಯುವವರ ವಿವರಗಳನ್ನು ಕಡ್ಡಾಯವಾಗಿ ಸಮೀಪದ ಪೊಲೀಸ್ ಠಾಣೆಗೆ ನೀಡಬೇಕು ಎಂದು ತಾಕೀತು ಮಾಡಲಾಗಿದೆ. ವಿಮಾನ ನಿಲ್ದಾಣ, ಬಸ್ ಮತ್ತು ರೈಲು ನಿಲ್ದಾಣಗಳಲ್ಲಿ ಭದ್ರತೆ ಪ್ರಮಾಣ ಹೆಚ್ಚಳ ಮಾಡಲಾಗಿದೆ, ಐತಿಹಾಸಿಕ ಕಟ್ಟಡಗಳು, ಅಣೆಕಟ್ಟು ಮತ್ತು ಜನ ನಿಬಿಡ ಪ್ರದೇಶಗಳಲ್ಲಿ ಭದ್ರತೆ ಹೆಚ್ಚಿಸಲಾಗಿದೆ.

ಮುಡಾ ನಿವೇಶನ ಹಂಚಿಕೆ ಹಗರಣ: ಇಂದು ವಿಚಾರಣೆಗೆ ಹಾಜರಾಗಲು ಲೋಕಾಯುಕ್ತರಿಂದ ಎ3, ಎ4ಗೆ ಸಮನ್ಸ್

● ಪ್ರಶ್ನೆಗಳ ಪಟ್ಟಿ ಸಿದ್ಧ; ಏಕಕಾಲಕ್ಕೆ ವಿಚಾರಣೆ ● ತನಿಖಾ ವರದಿಯತ್ತ ಲೋಕಾಯುಕ್ತರ ಜಾಣ್ಮೆಯ ನಡೆ

ಮೈಸೂರು, ಅ.9(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪತ್ನಿ ಶ್ರೀಮತಿ ಬಿ.ಎಂ.ಪಾರ್ವತಿ ಸೇರಿದಂತೆ ನಾಲ್ವರ ವಿರುದ್ಧ ದಾಖಲಾಗಿರುವ ಮುಡಾ ನಿವೇಶನ ಹಂಚಿಕೆ ಹಗರಣ ಸಂಬಂಧ ಇಬ್ಬರು ಆರೋಪಿಗಳಿಗೆ ಲೋಕಾಯುಕ್ತ ಪೊಲೀಸರು ಸಮನ್ಸ್ ನೀಡಿದ್ದು, ನಾಳೆ (ಅಕ್ಟೋಬರ್ 10) ವಿಚಾರಣೆಗೆ ಹಾಜರಾಗಬೇಕಿದೆ.

ಲೋಕಾಯುಕ್ತರು ದಾಖಲಿಸಿರುವ ಎಫ್‌ಐಆರ್‌ನಲ್ಲಿ ಎ3 ಆರೋಪಿಯಾದ ಮಲ್ಲಿಕಾರ್ಜುನಸ್ವಾಮಿ ಹಾಗೂ ಎ4 ಆರೋಪಿ ದೇವರಾಜುಗೆ ಸಮನ್ಸ್ ಜಾರಿಯಾಗಿದೆ. ಮಲ್ಲಿಕಾರ್ಜುನ ಸ್ವಾಮಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾವಮೈದ. ಇನ್ನು ದೇವರಾಜು, ವಿವಾದಿತ ಮೈಸೂರಿನ ಕೆಸರೆಯ ಸರ್ವೆ ನಂಬರ್ 464 ರಲ್ಲಿ 3.16 ಎಕರೆ ಭೂಮಿಯ ಮೂಲ ಮಾಲೀಕರಾಗಿದ್ದಾರೆಂದು ದಾಖಲಾಗಿದೆ. ಈ ಇಬ್ಬರಿಗೂ ಲೋಕಾಯುಕ್ತ ಎಸ್ಪಿ ಉದೇಶ್, ವಿಚಾರಣೆಗೆ ಹಾಜರಾಗುವಂತೆ ಸೂಚನೆ ನೀಡಿದ್ದಾರೆ. ವಾಸ್ತವವಾಗಿ ಜಮೀನಿನ ಮೂಲ ಮಾಲೀಕರು ಯಾರು, ಈ ಭೂಮಿ ನಿಮಗೆ ಹೇಗೆ ಬಂತು ಎಂದು ದೇವರಾಜು ಅವರನ್ನು ಪ್ರಶ್ನಿಸಿದರೆ, ಈ ಭೂಮಿಯನ್ನು ನೀವು ಯಾವಾಗ ಖರೀದಿ ಮಾಡಿದ್ದೀರಾ, ಎಷ್ಟು ಹಣ ನೀಡಿ ಖರೀದಿ ಮಾಡಿದ್ದೀರಾ ಎಂಬಿವೇ ಸಾಂದರ್ಭಿಕ ಪ್ರಶ್ನೆಗಳನ್ನು ಕೇಳಲು ಲೋಕಾಯುಕ್ತರು ಸಿದ್ಧತೆ ಮಾಡಿಕೊಂಡಿದ್ದಾರೆ ಎಂದು ತಿಳಿದು ಬಂದಿದೆ. ಆರಂಭದಲ್ಲಿ ಇಬ್ಬರನ್ನು ಪ್ರತ್ಯೇಕವಾಗಿ, ತರುವಾಯ ಮುಖಾಮುಖಿ ಕೂರಿಸಿ ಏಕಕಾಲಕ್ಕೆ ವಿಚಾರಣೆ ಮಾಡುವ ಸಾಧ್ಯತೆ ಇದೆ. ತನಿಖಾ ವರದಿಯನ್ನು ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಸಲ್ಲಿಸಬೇಕಿರುವ ಕಾರಣ ಯಾವುದೇ ಲೋಪವಾಗದಂತೆ ನಿಯಮಾನುಸಾರ ಲೋಕಾಯುಕ್ತರು ವಿಚಾರಣೆ ಮಾಡಲು ನಿರ್ಧರಿಸಿದ್ದಾರೆ. ಸಾಮಾನ್ಯವಾಗಿ ಯಾವುದೇ ಪ್ರಕರಣದ ಎ1, ಎ2 ಆರೋಪಿಗಳನ್ನು ಮೊದಲು ತನಿಖೆಗೊಳಪಡಿಸಲಾಗುತ್ತದೆ. ಆದರೆ ಈ ಪ್ರಕರಣದಲ್ಲಿ ಮೊದಲ ಆರೋಪಿ ಸಿದ್ದರಾಮಯ್ಯ ಹಾಗೂ ಎರಡನೇ ಆರೋಪಿ ಮುಖ್ಯಮಂತ್ರಿ ಅವರ ಪತ್ನಿ ಪಾರ್ವತಿ. ಇವರಿಬ್ಬರನ್ನು ಮೊದಲು ತನಿಖೆ ಮಾಡುವುದು ಬಿಟ್ಟು ಉಳಿದ ಆರೋಪಿಗಳ ವಿಚಾರಣೆ ಮಾಡುತ್ತಿರುವ ಬಗ್ಗೆ ಗುಸುಗುಸು ಮಾತು ಕೇಳಿಬರುತ್ತಿದೆ.

ಯಾರನ್ನು ಯಾವಾಗ ವಿಚಾರಣೆಗೊಳಪಡಿಸಬೇಕು ಎಂಬುದು ತನಿಖಾಧಿಕಾರಿಯ ವಿವೇಚನಾಧಿಕಾರ. ಮೊದಲ ಆರೋಪಿ ಮುಖ್ಯಮಂತ್ರಿಯಾಗಿರುವುದರಿಂದ ವಿಚಾರಣೆಯಲ್ಲಿ ಕೆಲವು ವಿನಾಯ್ತಿಗಳಿರಬಹುದು ಎಂದೂ ಜನ ಮಾತನಾಡಿಕೊಳ್ಳಲಾರಂಭಿಸಿದ್ದಾರೆ. ತನಿಖಾ ವರದಿಯನ್ನು ಜನಪ್ರತಿನಿಧಿಗಳ ನ್ಯಾಯಾಲಯಕ್ಕೆ ಸಲ್ಲಿಸಬೇಕಿದೆ. ಒಂದು ವೇಳೆ ಮುಂದಿನ ದಿನದಲ್ಲಿ ಈ ಪ್ರಕರಣ ಬೇರೆ ತಿರುವು ಪಡೆದು ಮೇಲ್ಮನವಿ ಸಲ್ಲಿಕೆಯಾದ ಪಕ್ಷದಲ್ಲಿ ಹೈಕೋರ್ಟ್ ಇಲ್ಲವೇ ಸುಪ್ರೀಂ ಕೋರ್ಟ್‌ಗೂ ಸಲ್ಲಿಸಬೇಕಿದೆ.

ಲೋಕಾಯುಕ್ತ ಎಸ್ಪಿ ಉದೇಶ್ ಸೇರಿದಂತೆ ಇತರೆ ಅಧಿಕಾರಿಗಳು ಈಗ ನಿತ್ಯವೂ ಬೆಳಿಗ್ಗೆ 10 ಗಂಟೆಗೆ ಕಚೇರಿಗೆ ಬಂದು, ರಾತ್ರಿ ಬಹಳ ಹೊತ್ತಿನ ತನಕ ಕರ್ತವ್ಯ ನಿರ್ವಹಣೆಯಲ್ಲಿದ್ದಾರೆ.

ಲೋಕಾಯುಕ್ತ ಎಸ್ಪಿಗೆ ಸ್ನೇಹಮಯಿ ಕೃಷ್ಣ ಮನವಿ

ಮೈಸೂರಿನ ಕೆಸರೆ ಭೂಮಿಯನ್ನು ದೇವರಾಜು ಹೆಸರಿಗೆ ಮುಡಾ ಖಾತೆ ವರ್ಗಾವಣೆ ಮಾಡಿರುವುದು ಹಾಗೂ ಸದರಿ ಭೂಮಿಯನ್ನು ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಮೈದ ಮಲ್ಲಿಕಾರ್ಜುನ ಸ್ವಾಮಿ ಹೆಸರಿಗೆ ಕ್ರಯಪತ್ರ ನೋಂದಣಿ ಮಾಡಿರುವುದು ಊರ್ಜಿತವಲ್ಲ. ಹೀಗಾಗಿ ಭೂಮಿ ಮಾರಾಟ ಮಾಡಿರುವ ದೇವರಾಜು ಅವರನ್ನು ಇದೀಗ ತಾವು ಸಲ್ಲಿಸಿರುವ ದಾಖಲೆ ಆಧರಿಸಿ ವಿಚಾರಣೆಗೊಳಪಡಿಸಬೇಕು ಎಂದು ದೂರುದಾರ ಸ್ನೇಹಮಯಿ ಕೃಷ್ಣ ಅವರು ಮೈಸೂರು ಲೋಕಾಯುಕ್ತ ಎಸ್ಪಿ ಉದೇಶ್ ಅವರಿಗೆ ವಾಟ್ಸಾಪ್ ಮೂಲಕ ಮನವಿ ಮಾಡಿದ್ದಾರೆ.

ತಮ್ಮ ಮನವಿಯೊಂದಿಗೆ ನ್ಯಾಯಾಲಯದ ಆದೇಶದ ಪ್ರತಿಯನ್ನು ಲಗತ್ತಿಸಿರುವ ಅವರು, ನ್ಯಾಯಾಲಯದ ಈ ದಾಖಲೆ ನನಗೆ ಈಗ ದೊರೆತಿದೆ. ಈ ದಾಖಲೆಯಂತೆ ರಾಜೀ ಪತ್ರದಲ್ಲಿ ದೇವರಾಜು ಅವರು ಶ್ರೀಮತಿ ಪುಟ್ಟಮ್ಮ ಎಂಬುವರ ವಾರಸುದಾರರಾದ ಶ್ರೀಮತಿ ನಾಗರತ್ನಮ್ಮ ಇತರರೊಂದಿಗಿನ ರಾಜೀ ಪತ್ರದಲ್ಲಿ ಐಹೆಚ್‌ಆರ್ 8/92–93ರ ಆದೇಶ ತಪ್ಪಾಗಿರುತ್ತದೆ ಎಂದು ಒಪ್ಪಿಕೊಂಡು ಸಹಿ ಮಾಡಿದ್ದು, ಅದರ ಆಧಾರದ ಮೇರೆಗೆ ನ್ಯಾಯಾಲಯವು ಸದರಿ ಆದೇಶವನ್ನು ರದ್ದುಗೊಳಿಸಿದೆ. ಆದರೆ ನ್ಯಾಯಾಲಯ ರದ್ದುಗೊಳಿಸಿದ್ದ ಐಹೆಚ್‌ಆರ್ 8/92–93ರ ಆದೇಶವನ್ನು ಆಧರಿಸಿಯೇ ದೇವರಾಜು ಹೆಸರಿಗೆ ಮುಡಾ ಖಾತೆ ವರ್ಗಾವಣೆ ಮಾಡಿರುವುದು, ನಂತರ ದೇವರಾಜು ಅವರು ಮಲ್ಲಿಕಾರ್ಜುನಸ್ವಾಮಿ ಹೆಸರಿಗೆ ಕ್ರಯಪತ್ರ ನೋಂದಣಿ ಮಾಡಿರುವುದು ಊರ್ಜಿತವಲ್ಲದ ಕಾರಣ ಈ ದಾಖಲೆಯನ್ನು ಆಧರಿಸಿ ದೇವರಾಜು ಅವರನ್ನು ವಿಚಾರಣೆಗೊಳಪಡಿಸಬೇಕು ಎಂದು ಸ್ನೇಹಮಯಿ ಕೃಷ್ಣ ವಾಟ್ಸಾಪ್ ಮೂಲಕ ಮನವಿ ಸಲ್ಲಿಸಿದ್ದಾರೆ.

ಸರ್ಕಾರ V/s ರಾಜಭವನ

ಇಂದು ಸಂಪುಟ ಸಭೆ; ರಾಜ್ಯಪಾಲರ ಪ್ರಶ್ನೆಗೆ ಉತ್ತರಿಸುವ ವಿಚಾರ ಪ್ರಸ್ತಾಪ

● ರೀಡೂ ಮಾಹಿತಿ; ಮುಡಾದ ಹಣ ವರುಣಾ, ಶ್ರೀರಂಗಪಟ್ಟಣ ಕ್ಷೇತ್ರ ಅಭಿವೃದ್ಧಿಗೆ ಬಳಕೆಯೂ ಸೇರಿ 26 ವಿಷಯಗಳ ಮಾಹಿತಿ ಕೋರಿಕೆ ● ಕಳೆದ ಸಂಪುಟ ಸಭೆಯಲ್ಲಿ ಏಕಾಏಕಿ ಮಾಹಿತಿ ನೀಡದಂತೆ ಅಧಿಕಾರಿಗಳಿಗೆ ತಾಕೀತು

ಬೆಂಗಳೂರು, ಅ.9(ಕೆಎಂಶಿ)– ಸರ್ಕಾರ ಹಾಗೂ ರಾಜಭವನದ ನಡುವಿನ ಮುಸುಕಿನ ಗುದ್ದಾಟ ಮುಂದುವರೆದಿದ್ದು, ರಾಜ್ಯಪಾಲರು ಕೇಳಿರುವ ಪ್ರಶ್ನೆಗಳಿಗೆ ನಾಳೆ ಸಂಪುಟ ಸಭೆಯಲ್ಲಿ ಉತ್ತರ ನೀಡುವ ಕುರಿತು ತೀರ್ಮಾನವಾಗಲಿದೆ.

ಮುಡಾ ಹಗರಣದ ನಂತರ ರಾಜ್ಯಪಾಲರು, ಡಿ–ನೋಟಿಫೈ ಹೆಸರಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಡೆದ 520ಕ್ಕೂ ಹೆಚ್ಚು ರೀ–ಡೂ ಪ್ರಕರಣಗಳಿಗೆ ಸಂಬಂಧಿಸಿದಂತೆ ವರದಿ ಮತ್ತು ಮಾಹಿತಿಯನ್ನು ಈಗಾಗಲೇ ಕೇಳಿದ್ದಾರೆ. ತದನಂತರ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಹಣವನ್ನು ವರುಣಾ, ಶ್ರೀರಂಗಪಟ್ಟಣ ಕ್ಷೇತ್ರಗಳ ಅಭಿವೃದ್ಧಿಗೆ ಬಳಕೆ ಮಾಡಿರುವುದೂ ಸೇರಿದಂತೆ 26 ವಿಷಯಗಳ ಮೇಲೆ ಮಾಹಿತಿ ಹಾಗೂ ದಾಖಲೆಗಳನ್ನು ರಾಜಭವನದ ವಿಶೇಷ ಕಾರ್ಯದರ್ಶಿಗಳು ಸರ್ಕಾರ ಕೋರಿದ್ದಾರೆ. ಹದಿಮೂರು ಪ್ರಕರಣಗಳಿಗೆ ಸಂಬಂಧಿಸಿದಂತೆ ವಿವರಣೆ ಮತ್ತು ದಾಖಲೆ ನೀಡುವಂತೆ ಎರಡು ತಿಂಗಳ ಹಿಂದಿನಿಂದಲೇ ರಾಜ್ಯಪಾಲರು ಸರ್ಕಾರಕ್ಕೆ ವರದಿ ಕೇಳಿದ್ದರು. ರೀ–ಡೂ ವರದಿ ಮಾಹಿತಿ ಕೇಳುತ್ತಿದ್ದಂತೆ ಎಚ್ಚೆತ್ತ ಸರ್ಕಾರ, ಕಳೆದ ಸಂಪುಟ ಸಭೆಯಲ್ಲಿ ಮುಖ್ಯ ಕಾರ್ಯದರ್ಶಿ ಸೇರಿದಂತೆ ಯಾವುದೇ ಇಲಾಖಾ ಕಾರ್ಯದರ್ಶಿಗಳು ರಾಜ್ಯಪಾಲರು ಕೋರುವ ಮಾಹಿತಿಗೆ ಸ್ವತಂತ್ರವಾಗಿ ಉತ್ತರ ನೀಡಬಾರದು ಎಂಬ ತೀರ್ಮಾನ ಕೈಗೊಂಡಿತ್ತು.

ರಾಜಭವನ ಕೇಳುವ ಮಾಹಿತಿಗಳನ್ನು ಸಂಪುಟದ ಮುಂದಿಟ್ಟು ಅವುಗಳಿಗೆ ಅನುಮತಿ ನೀಡಿದರಷ್ಟೇ ಉತ್ತರಿಸುವಂತೆ ಕಟ್ಟಾದೇಶ ಮಾಡಿತ್ತು. ಸಂಪುಟ ಇಂತಹ ತೀರ್ಮಾನ ತೆಗೆದುಕೊಂಡ ನಂತರವೂ ರಾಜ್ಯಪಾಲರು ಮುಡಾ ಹಣ ದುರ್ಬಳಕೆ ಸೇರಿದಂತೆ ವಿವಿಧ ಸಚಿವರ ಮೇಲೆ ಬಂದಿರುವ ದೂರುಗಳಿಗೆ ಸರ್ಕಾರದ ಮುಖ್ಯಕಾರ್ಯದರ್ಶಿಗಳಿಂದ ವಿವರಣೆ ಕೇಳಿದ್ದಾರೆ.

ಇದರ ಹಿನ್ನೆಲೆಯಲ್ಲೇ ನಾಳೆ ಬೆಳಗ್ಗೆ ಸಂಪುಟ ಸಭೆ ಸೇರಲಿದ್ದು, ರಾಜ್ಯಪಾಲರು ಎತ್ತಿರುವ 26 ಪ್ರಸ್ತಾವಗಳಿಗೂ ಸಂಬಂಧಿಸಿದಂತೆ ಸುದೀರ್ಘ ಚರ್ಚೆ ನಡೆಸಿ ಉತ್ತರ ನೀಡಬೇಕೇ, ಬೇಡವೇ ಎಂಬ ಬಗ್ಗೆ ತೀರ್ಮಾನ ಕೈಗೊಳ್ಳಲಿದೆ. ರಾಜ್ಯಪಾಲರ ನಡೆಯ ಬಗ್ಗೆ ಅಸಮಾಧಾನಗೊಂಡಿರುವ ಮುಖ್ಯಮಂತ್ರಿ ಅವರು, ನಾಳಿನ ಈ ಸಭೆಯಲ್ಲಿ ಕಟು ನಿರ್ಣಯ ಕೈಗೊಳ್ಳಲು ಮುಂದಾಗಿದ್ದಾರಂತೆ.

ಸಂವಿಧಾನ ಬದ್ಧವಾಗಿ ಕೇಳುವ ಪ್ರಸ್ತಾವಗಳಿಗೆ ಸರ್ಕಾರದ ಉತ್ತರ ನೀಡೋಣ, ಅದನ್ನು ಬಿಟ್ಟು ರಾಜಕೀಯ ಕಾರಣಗಳಿಗಾಗಿ ಎತ್ತುವ ಪ್ರಸ್ತಾವಗಳಿಗೆ ಉತ್ತರ ನೀಡದೆ, ಅದರ ವಿರುದ್ಧ ಸಂಪುಟ ನಿರ್ಣಯ ಕೈಗೊಂಡು, ರಾಜಭವನ ಮತ್ತು ಕೇಂದ್ರಕ್ಕೆ ಅದರ ಪ್ರತಿ ಸಲ್ಲಿಸಲು ಮುಖ್ಯಮಂತ್ರಿ ಮುಂದಾಗಿದ್ದಾರೆಂದು ಉನ್ನತ ಮೂಲಗಳು ತಿಳಿಸಿವೆ.

ವಿದ್ಯಾರ್ಥಿಗಳಿಗೆ ಮಾತ್ರವಲ್ಲ, ಇನ್ನು ಪೋಷಕರಿಗೂ ಗಣಿತ ಪಾಠ

● ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮಾಸ್ಟರ್ ಪ್ಲಾನ್ ● ಇದಕ್ಕಾಗಿ ಸರ್ಕಾರಿ ಶಾಲಾ ಶಿಕ್ಷಕರಿಗೆ ತರಬೇತಿ



ಬೆಂಗಳೂರು, ಅ. 9(ಕೆಎಂಶಿ)–ಇನ್ನು ಮುಂದೆ ವಿದ್ಯಾರ್ಥಿಗಳಿಗಷ್ಟೇ ಅಲ್ಲ, ಪೋಷಕರಿಗೂ ಸರ್ಕಾರಿ ಶಾಲಾ ಶಿಕ್ಷಕರು ಗಣಿತ ಪಾಠ ಬೋಧಿಸಬೇಕು.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧುಬಂಗಾರಪ್ಪ, ಶೈಕ್ಷಣಿಕ ಗುಣಮಟ್ಟ ಕಡಿಮೆ ಇರುವವರಿಗೆ ಗಣಿತದ ಜ್ಞಾನ ಹೆಚ್ಚಿಸಿ ಮಕ್ಕಳಿಗೆ ಮನೆಯಲ್ಲಿ ಗಣಿತ ಜ್ಞಾನ ವೃದ್ಧಿಗೆ ಈ ಯೋಜನೆ ಅನುಕೂಲವಾಗಲಿದೆ ಎಂದರು.

ಗಣಿತ–ಗಣಕ ಕಾರ್ಯಕ್ರಮದಲ್ಲಿ ಶಿಕ್ಷಕರು, ಮಕ್ಕಳ ಪೋಷಕರ ಮೊಬೈಲ್‌ಗೆ ಕರೆ ಮಾಡಿ ಪ್ರತಿದಿನ 32ರಿಂದ 45 ನಿಮಿಷದವರೆಗೂ ಗಣಿತವನ್ನು ಹೇಳಿಕೊಡಲಿದ್ದಾರೆ, ಇದಕ್ಕಾಗಿ ಶಿಕ್ಷಕರಿಗೆ ವಿಶೇಷ ತರಬೇತಿ ನೀಡಲಾಗಿದೆ. ಶಿಕ್ಷಣದಲ್ಲಿ ತಂತ್ರಜ್ಞಾನ ಅಳವಡಿಸಿ ಕಲಿಕಾ ಗುಣಮಟ್ಟ ಹೆಚ್ಚಿಸಲು ಅಮೆರಿಕ ಮೂಲದ ಸಂಸ್ಥೆಯೊಂದಿಗೆ ರಾಜ್ಯ ಸರ್ಕಾರದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಒಡಂಬಡಿಕೆ ಮಾಡಿಕೊಂಡಿದೆ. ಶಿಕ್ಷಣದಲ್ಲಿ ಗುಣಮಟ್ಟ, ಹೊಸತನ ಮತ್ತು ತಂತ್ರಜ್ಞಾನ ಅಳವಡಿಕೆಗೆ ಜೆ–ಪಾಲ್ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಸರ್ಕಾರಿ ಶಾಲೆಗಳಲ್ಲಿ ಶುರುವಾಗಿರುವ ಎಲ್‌ಕೆಜಿ, ಯುಕೆಜಿ ಮಕ್ಕಳಿಗೆ ಚಿಲಿಪಿಲಿ ಪಠ್ಯ ಕ್ರಮವನ್ನು ಹೊಸದಾಗಿ ರೂಪಿಸಲಾಗುವುದು. ಪ್ರಾಯೋಗಿಕವಾಗಿ 6 ಸಾವಿರ ಮಕ್ಕಳಿಗೆ ಚಿಲಿಪಿಲಿ ಯೋಜನೆ ಅನ್ವಯವಾಗಲಿದೆ ಎಂದರು. ಮೂರರಿಂದ ಐದನೇ ತರಗತಿ ಮಕ್ಕಳಿಗೆ ಗಣಿತ–ಗಣಕ ಹಾಗೂ ಆರರಿಂದ ಹತ್ತನೇ ತರಗತಿ ಮಕ್ಕಳಿಗೆ ಮರುಸಿಂಚನ ಕಾರ್ಯಕ್ರಮ ರೂಪಿಸಲಾಗಿದೆ.

ಕಲಿಕಾ ಗುಣಮಟ್ಟ ಕಡಿಮೆ ಇರುವ ಮಕ್ಕಳಿಗಾಗಿ ಮರುಸಿಂಚನ ಕಾರ್ಯಕ್ರಮ ರೂಪಿಸಲಾಗಿದೆ. ಇಂತಹ ವಿದ್ಯಾರ್ಥಿಗಳಿಗೆ ಅವರ ಹಿಂದಿನ ಪಠ್ಯಕ್ರಮಗಳ ಪುನರ್ ಮನನ ಮಾಡಿಕೊಡಲಾಗುವುದು. ಇದರಿಂದ ಹಳೆಯ ಕಲಿಕೆ ಹಾಗೂ ಹೊಸ ಜ್ಞಾನದ ಜೊತೆ ಸುಧಾರಣೆ ಕಾಣುವ ನಿರೀಕ್ಷೆಯಿದೆ. ಪ್ರಾಯೋಗಿಕವಾಗಿ 9 ಸಾವಿರ ಶಾಲೆಗಳಲ್ಲಿ ಇದನ್ನು ಅನುಷ್ಠಾನಕ್ಕೆ ತರಲಾಗುತ್ತಿದೆ ಎಂದರು.

ಮೈಸೂರು ಮಿತ್ರ

ಸಮೃದ್ಧ ಕವಿಗೋಷ್ಠಿಯಲ್ಲಿ 29 ಕವಿಗಳಿಂದ ಕವನ ವಾಚನ



ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಬುಧವಾರ ನಡೆದ ದಸರಾ ಸಮೃದ್ಧ ಕವಿಗೋಷ್ಠಿಯನ್ನು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಡಾ.ಹೆಚ್.ಎಲ್.ಪುಷ್ಪ ಉದ್ಘಾಟಿಸಿದರು.

ಮೈಸೂರು,ಅ.9(ಎಂಟಿವೈ)– ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಜಗನ್ಮೋಹನ ಅರಮನೆಯಲ್ಲಿ ಬುಧವಾರ ನಡೆದ ಸಮೃದ್ಧ ಕವಿಗೋಷ್ಠಿಯಲ್ಲಿ 29 ಕವಿಗಳು ಕವನ ವಾಚನ ಮಾಡುವ ಮೂಲಕ ಗಮನ ಸೆಳೆದರು.

ದಸರಾ ಕವಿಗೋಷ್ಠಿ ಸಮಿತಿ ಆಯೋಜಿಸಿದ್ದ ಸಮೃದ್ಧ ಕವಿಗೋಷ್ಠಿಯಲ್ಲಿ ವಿವಿಧೆಡೆಯಿಂದ ಆಗಮಿಸಿದ್ದ ಕವಿಗಳು ವಿವಿಧ ಶೀರ್ಷಿಕೆಯಮ ವಿವಿಧ ಅಭಿರುಚಿಯ ಕವನ ವಾಚಿಸುವ ಮೂಲಕ ಕವಿಗೋಷ್ಠಿಗೆ ಮೆರುಗು ತುಂಬಿದರು.

ಸಾಂಸ್ಕೃತಿಕ ಇತಿಹಾಸವಿದೆ: ಕವಿಗೋಷ್ಠಿಯನ್ನು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಡಾ.ಹೆಚ್.ಎಲ್.ಪುಷ್ಪ ಉದ್ಘಾಟಿಸಿ ಮಾತನಾಡಿ, ನಾಡಹಬ್ಬ ದಸರಾ ಮಹೋತ್ಸವಕ್ಕೆ ತನ್ನದೇ ಆದ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಹಿನ್ನೆಲೆ ಇದೆ. ಯಾವುದೇ ಕವಿಗೋಷ್ಠಿಗೆ ಕವಿತೆಯೇ ಕೇಂದ್ರಬಿಂದು. ಜೇಡ ಬಲೆಯನ್ನು ನೇಯುವಂತೆ ಒಂದು ವಸ್ತುವನ್ನು ನೋಡಿ ಕವಿ ಕವಿತೆಯನ್ನು ರಚಿಸುತ್ತಾನೆ. ದಲಿತ ಕಾವ್ಯ, ಸಮಾಜವನ್ನು ಪ್ರಶ್ನಿಸುವಂಥ ಕಾವ್ಯಗಳು ಹಾಗೂ ಸಾರ್ವಕಾಲಿಕ ಕಾವ್ಯಗಳು ಜನರನ್ನು ಜಾಗೃತಗೊಳಿಸುತ್ತದೆ ಎಂದರು.

ಕವಿ ರನ್ನ, 9ನೇ ಕವಿರಾಜ ಮಾರ್ಗ ಕೃತಿಗಳು ನಾಡಿನ ಹೆಮ್ಮೆ ಹಾಗೂ ಸೌಹಾರ್ದತೆಗೆ ಸಾಕ್ಷಿಯಾಗಿದೆ. ಕುವೆಂಪು ಅವರ 'ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು' ಕಾವ್ಯ, ಒಂದು ದೇಶ ಒಂದು ಜನ ಒಂದು ಜಾತಿ ಒಂದು ಎಂಬ ಸಂದೇಶದ ಕಾವ್ಯಗಳು, ವಿಶೇಷವಾಗಿ ದಲಿತ ಕಾವ್ಯ, ಲೈಂಗಿಕ ಕಾವ್ಯಗಳು ಕವಿತೆಗಳು ನೈಜ್ಯ ಹಾಗೂ ಪ್ರಾಮಾಣಿಕತೆ ರೂಪವಾಗಿದೆ. ಸಿದ್ಧಲಿಂಗಯ್ಯನವರ, ಯಾರಿಗೆ ಬಂತು, ಎಲ್ಲಿಗೆ ಬಂತು ಸ್ವಾತಂತ್ರ್ಯ, ಹೋರಾಟದ ಕವಿತೆ, ನಮ್ಮ ಎಲುಬಿನ ಅಂದದೊಳಗೆ ಮಂದಿರ ಮಸೀದಿ ಎಂಬ ಸರ್ವಕಾಲಿಕ ಕವಿತೆಗಳು ಧರ್ಮ ಮುಖ್ಯವೋ ಮನುಷ್ಯತ್ವ ಮುಖ್ಯವೋ ಎಂಬ ಸಂದೇಶದ ಕವಿತೆಗಳನ್ನು ಸ್ಮರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಆಕಾಶವಾಣಿ ಕಾರ್ಯಕ್ರಮ ನಿರ್ವಾಹಕ ಅಬ್ದುಲ್ ರಶೀದ್ ಮಾತನಾಡಿ, ಒಂದೇ ವೇದಿಕೆಯಲ್ಲಿ ಎಲ್ಲಾ ರೀತಿಯ ಕವಿಗಳನ್ನು ಸೇರಿಸಿ ಕವಿತೆ ವಾಚನ ಗೊಳಿಸಿದ್ದು ಕವಿಗೋಷ್ಠಿ ವೇದಿಕೆಗೆ ಮೆರುಗು ತಂದಿದೆ. ಕವಿತೆಗಳು ಯಾವುದೇ ರೀತಿಯ ಗೊಂದಲಕ್ಕೆ ಒಳಗಾಗದೆ ಕೇಳುಗರಿಗೆ ಹಿತ ಎನಿಸುವಂತೆ ಸಮೃದ್ಧ ಕವಿಗೋಷ್ಠಿ ಯಶಸ್ವಿಗೊಂಡಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ವೇಳೆ ಶಾಸಕ ಟಿ.ಎಸ್.ಶ್ರೀವತ್ಸ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಪ್ರೊ. ಕವಿತಾ ರೈ ಮಾತನಾಡಿದರು. ಇದೇ ಸಂದರ್ಭದಲ್ಲಿ ಕವಿತೆ ವಾಚನ ಮಾಡಿದ ಎಲ್ಲಾ ಕವಿ ಹಾಗೂ ಕವಯತ್ರಿಯರನ್ನು ಸನ್ಮಾನಿಸಿ, ಕಿರು ಕಾಣಿಕೆಯನ್ನು ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಜಿ.ಪಂ. ಸಿಇಓ ಕೆ.ಎಂ ಗಾಯತ್ರಿ, ಡಿಸಿಪಿ ಮುತ್ತುರಾಜ್, ದಸರಾ ಕವಿಗೋಷ್ಠಿ ಉಪ ಸಮಿತಿಯ ಕಾರ್ಯಾಧ್ಯಕ್ಷೆ ಎನ್.ಕೆ. ಲೋಲಾಕ್ಷಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್ ಮಲ್ಲಿಕಾರ್ಜುನಸ್ವಾಮಿ ಹಾಗೂ ಕವಿಗೋಷ್ಠಿ ಸಮಿತಿಯ ಸದಸ್ಯರು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಯದುವೀರ್ ಅವರಿಂದ ಸರಸ್ವತಿ ಪೂಜೆ



ಅರಮನೆಯ ಕನ್ನಡಿ ತೊಟ್ಟಿಯಲ್ಲಿ ರಾಜವಂಶಸ್ಥ ಯದುವೀರ್ ಒಡೆಯರ್ ಅವರು ಸರಸ್ವತಿ ಪೂಜೆ ಮಾಡಿದರು.

ಮೈಸೂರು,ಅ.9(ಎಂಟಿವೈ)–ನವರಾತ್ರಿ ಅಂಗವಾಗಿ ಮೈಸೂರು ಅರಮನೆಯ ಕನ್ನಡಿ ತೊಟ್ಟಿಯಲ್ಲಿ ಸಂಪ್ರದಾಯದಂತೆ ರಾಜವಂಶಸ್ಥ, ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸರಸ್ವತಿ ಪೂಜೆ ನೆರವೇರಿಸಿದರು.

ದಸರಾ ಮಹೋತ್ಸವದ ಅಂಗವಾಗಿ ಅರಮನೆಯಲ್ಲಿ ರಾಜವಂಶಸ್ಥರಿಂದ ವಿವಿಧ ಪೂಜಾ ಕೈಂಕರ್ಯ ಜರುಗಲಿದ್ದು, ಬುಧವಾರ ಅರಮನೆಯ ಕನ್ನಡಿ ತೊಟ್ಟಿಯಲ್ಲಿ ಬೆಳಗ್ಗೆ 10.05ರಿಂದ 10.35ರವರೆಗೆ ಸಲ್ಲುವ ಶುಭ ಲಗ್ನದಲ್ಲಿ ಅರಮನೆಯಲ್ಲಿರುವ ತಾಳೆಗರಿ, ವಿವಿಧ ಗ್ರಂಥಗಳು, ವೀಣೆ, ತಬಲ ಸೇರಿದಂತೆ ಇನ್ನಿತರ ಪರಿಕರಗಳಿಗೆ ಶಾಸ್ತ್ರೋಕ್ತವಾಗಿ ಪೂಜೆ ಮಾಡಿದರು. ನವರಾತ್ರಿ ಸಂದರ್ಭದಲ್ಲಿ ಸರಸ್ವತಿ ಪೂಜೆ ಮಾಡುವುದು ಒಂದು ಸಂಪ್ರದಾಯವಾಗಿದ್ದು, ಅರಮನೆಯ ಪುರೋಹಿತರ ಸಮ್ಮುಖದಲ್ಲಿ, ವೇದ ಮಂತ್ರಗಳ ಉದ್ಘೋಷದೊಂದಿಗೆ ಪೂಜೆ ಮಾಡಲಾಯಿತು. ಈ ವೇಳೆ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಪುತ್ರ ಆದ್ಯವೀರ ಒಡೆಯರ್ ಉಪಸ್ಥಿತರಿದ್ದರು.

ಚಾಮುಂಡೇಶ್ವರಿ ದೇವಿಗೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ ದಂಪತಿ ವಿಶೇಷ ಪೂಜೆ

ಊಟ–ತಿಂಡಿಗೆ ಹೋದರೆ ರಾಜಕೀಯ ಲೇಪನ ಸರಿಯಲ್ಲ; ಸಂಸದ ಸುನೀಲ್ ಬೋಸ್ ಮನೆಯಲ್ಲಿನ ಸಚಿವರ ಸಭೆಗೆ ಪ್ರತಿಕ್ರಿಯೆ

ಮೈಸೂರು, ಅ. 9(ಆರ್‌ಕೆ)– ಪೊಲೀಸ್ ಬ್ಯಾಂಡ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಅವರು ಪತ್ನಿ ಶ್ರೀಮತಿ ಕನ್ನಿಕಾ ಪರಮೇಶ್ವರಿಯೊಂದಿಗೆ ಇಂದು ಬೆಳಗ್ಗೆ ಚಾಮುಂಡಿಬೆಟ್ಟಕ್ಕೆ ತೆರಳಿ ನಾಡಿನ ಅಧಿದೇವತೆ ತಾಯಿ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು.

ಮೆಟ್ರೊಪೋಲ್ ಹೋಟೆಲ್‌ನಿಂದ ಬೆಳಗ್ಗೆ 6.45 ಗಂಟೆಗೆ ಹೊರಟು, 7.10 ಗಂಟೆಗೆ ಚಾಮುಂಡಿಬೆಟ್ಟ ತಲುಪಿದ ಸಚಿವರನ್ನು ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಜೆ.ರೂಪಾ ಆತ್ಮೀಯವಾಗಿ ಬರಮಾಡಿಕೊಂಡು ದೇವಿ ದರ್ಶನ ಮಾಡಿಸಿದರು. ಈ ವೇಳೆ ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಉಪಸ್ಥಿತರಿದ್ದರು. ನಾಡಿನ ಜನತೆಗೆ ದಸರಾ ಸಂದರ್ಭ ಒಳಿತಾಗಲಿ ಎಂದು ತಾಯಿ ಚಾಮುಂಡೇಶ್ವರಿ ದೇವಿಯಲ್ಲಿ ಪ್ರಾರ್ಥಿಸಿಕೊಂಡಿದ್ದೇನೆ ಎಂದು ಡಾ.ಜಿ.ಪರಮೇಶ್ವರ್ ತಿಳಿಸಿದರು. ಬೆಳಗ್ಗೆ 8.15 ಗಂಟೆ ವೇಳೆಗೆ ಅವರು ಬೆಂಗಳೂರಿಗೆ ಪ್ರಯಾಣ ಬೆಳೆಸಿದರು.



ಗೃಹ ಸಚಿವ ಡಾ.ಜಿ.ಪರಮೇಶ್ವರ್, ಪತ್ನಿ ಶ್ರೀಮತಿ ಕನ್ನಿಕಾ ಪರಮೇಶ್ವರಿ ಅವರು ಬುಧವಾರ ಶ್ರೀ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆದರು.

ಊಟ–ತಿಂಡಿಗೆ ರಾಜಕೀಯ ಲೇಪನ: ಅದಕ್ಕೂ ಮುನ್ನ ಮೆಟ್ರೊಪೋಲ್ ಹೋಟೆಲ್‌ನಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಡಾ.ಜಿ.ಪರಮೇಶ್ವರ್, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಹಾಗೂ ಕಾಂಗ್ರೆಸ್ ಶಾಸಕರ ಮನೆಗೆ ಊಟ–ತಿಂಡಿಗೆ ಹೋಗಿದ್ದಕ್ಕೆ ರಾಜಕೀಯ ಲೇಪನ ಮಾಡುವುದು ಸರಿಯಲ್ಲ ಎಂದರು. ಬಿಜೆಪಿ–ಜೆಡಿಎಸ್‌ನವರು ಬೇರೆ ಕೆಲಸವಿಲ್ಲದೆ ಸಿಎಂ ರಾಜೀನಾಮೆ ಕೊಡಿ ಎಂದು ಕೇಳುತ್ತಿದ್ದಾರೆ. ಸಿದ್ದರಾಮಯ್ಯ ಏಕೆ ರಾಜೀನಾಮೆ ನೀಡಬೇಕು, ನಾವೆಲ್ಲಾ 136 ಕಾಂಗ್ರೆಸ್ ಶಾಸಕರು ಒಗ್ಗಟ್ಟಾಗಿದ್ದೇವೆ. ಸಿಎಂ ರಾಜೀನಾಮೆ ನೀಡುವ ಅಗತ್ಯವಿಲ್ಲ. ಅವರು ಪೂರ್ಣಾವಧಿ ಮುಖ್ಯಮಂತ್ರಿಯಾಗಿರುತ್ತಾರೆ ಎಂದು ನುಡಿದರು. ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಪಿಗಳಾದ ಎಂ.ಮುತ್ತುರಾಜ್, ಎಸ್.ಜಾಹ್ನವಿ ಸೇರಿದಂತೆ ಹಲವು ಪೊಲೀಸ್ ಅಧಿಕಾರಿಗಳು ಈ ಸಂದರ್ಭ ಹಾಜರಿದ್ದರು.

ಪಿಹೆಚ್.ಡಿ ಪದವಿ



ಮೈಸೂರು: ಡಾ.ಎಂ.ಎಸ್. ಚಂದ್ರಶೇಖರ ಅವರ ಮಾರ್ಗದರ್ಶನದಲ್ಲಿ ಎಸ್.ಎನ್.ನಮಿತಾ ಭೌತಶಾಸ್ತ್ರ ವಿಷಯದಲ್ಲಿ ಮಂಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಇಂದು ತಪಾಸಣಾ ಶಿಬಿರ

ಮೈಸೂರು,ಅ.9–ಮೈಸೂರಿನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಅ.10ರಂದು ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ದೂ.0821–4259259.

ದೇಶ - ವಿದೇಶ

ಬೈರುತ್ ದಾಳಿಯಲ್ಲಿ ಹಿಜ್ಬುಲ್ಲಾ ಹಿರಿಯ ಕಮಾಂಡರ್ ಹತ್ಯೆ



ಜೆರುಸಲೇಂ: ಅ.7ರ ದಾಳಿ ವರ್ಷಾಚರಣೆಯ ಮಾರನೇ ದಿನ ಬೈರುತ್‌ನಲ್ಲಿ ನಡೆದ ವೈಮಾನಿಕ ದಾಳಿಯಲ್ಲಿ ಹಿಜ್ಬುಲ್ಲಾ ಸಂಘಟನೆಯ ಹಿರಿಯ ಕಮಾಂಡರ್ ಹತ್ಯೆಯಾಗಿರುವುದಾಗಿ ಇಸ್ರೇಲ್ ಮಿಲಿಟರಿ ಹೇಳಿದೆ. ದಾಳಿಯಲ್ಲಿ ಹಿಜ್ಬುಲ್ಲಾ ಬಂಡುಕೋರ ಸಂಘಟನೆಯ ಲಾಜಿಸ್ಟಿಕ್ಸ್, ಬಜೆಟ್ ಮತ್ತು ನಿರ್ವಹಣೆ ಜವಾಬ್ದಾರಿ ಹೊಂದಿದ್ದ ಸುಹೇಲ್ ಹುಸೇನಿ ಹತ್ಯೆಯಾಗಿದ್ದು, ಹುಸೇನಿ ಇರಾನ್‌ನಿಂದ ಸುಧಾರಿತ ಶಸ್ತ್ರಾಸ್ತ್ರಗಳನ್ನು ವರ್ಗಾಯಿಸುವಲ್ಲಿ ಮತ್ತು ಅವುಗಳನ್ನು ವಿವಿಧ ಹಿಜ್ಬುಲ್ಲಾ ಘಟಕಗಳಲ್ಲಿ ವಿತರಿಸುವಲ್ಲಿ ತೊಡಗಿಸಿಕೊಂಡಿದ್ದರು. ಅಲ್ಲದೇ ಅವರ ಗುಂಪಿನ ಮಿಲಿಟರಿ ಕೌನ್ಸಿಲ್‌ನ ಸದಸ್ಯರಾಗಿದ್ದರು. ಇತ್ತೀಚಿನ ದಿನಗಳಲ್ಲಿ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಹಿಜ್ಬುಲ್ಲಾದ ನಾಯಕ ಹಸನ್ ನಸ್ರಲ್ಲಾ ಸೇರಿದಂತೆ ಹಲವಾರು ಉನ್ನತ ಮಟ್ಟದ ಕಮಾಂಡರ್‌ಗಳನ್ನು ಹತ್ಯೆ ಮಾಡಲಾಗಿದೆ. ಕಳೆದ ವಾರ ಇಸ್ರೇಲ್ ದಕ್ಷಿಣ ಲೆಬನಾನ್‌ಗೆ ಸೀಮಿತ ಎಂದು ಹೇಳಿ ದಾಳಿಯನ್ನು ಆರಂಭಿಸಿತ್ತು.

ಮನೆ ತೆರವಿಗೆ ಇಡಿ ಗಡುವು: ನೋಟಿಸ್ ಪ್ರಶ್ನಿಸಿ ಶಿಲ್ಪಾ, ಕುಂದ್ರಾ ದಂಪತಿ ಹೈಕೋರ್ಟ್ ಮೊರೆ

ಮುಂಬೈ: ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂಬೈನ ಜುಹುವಿನಲ್ಲಿರುವ ಮನೆಯನ್ನು ತೆರವುಗೊಳಿಸುವಂತೆ ನೋಟಿಸ್ ನೀಡಿರುವ ಜಾರಿ ನಿರ್ದೇಶನಾಲಯ ಕ್ರಮದ ವಿರುದ್ಧ ಬಹುಭಾಷಾ ನಟಿ ಶಿಲ್ಪಾ ಶೆಟ್ಟಿ ಹಾಗೂ ರಾಜ್ ಕುಂದ್ರಾ ದಂಪತಿ ಬಾಂಬೆ ಹೈಕೋರ್ಟ್ ಮೊರೆ ಹೋಗಿದ್ದಾರೆ. ಪ್ರಕರಣದ ಅರ್ಜಿಯ ವಿಚಾರಣೆಯನ್ನು ನ್ಯಾ.ರೇವತಿ ಮೋಹಿತೆ ಡೇರೆ ಹಾಗೂ ನ್ಯಾ. ಪೃಥ್ವಿರಾಜ್ ಚವಾಣ್ ಅವರಿದ್ದ ವಿಭಾಗೀಯ ಪೀಠವು ನಡೆಸಿತು. ಅರ್ಜಿಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯಕ್ಕೆ ನೋಟಿಸ್ ಜಾರಿ ಮಾಡಿ, ಪ್ರಕರಣದ ಮುಂದಿನ ವಿಚಾರಣೆಯನ್ನು ಗುರುವಾರಕ್ಕೆ ಮುಂದೂಡಲಾಯಿತು. ಬಿಟ್ ಕಾಯಿನ್ ವಂಚನೆ ಪ್ರಕರಣದಲ್ಲಿ ಹಣದ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯವು ಸೆ. 27ರಂದು ಶಿಲ್ಪಾ ಶೆಟ್ಟಿ ಹಾಗೂ ರಾಜ್ ಕುಂದ್ರಾಗೆ ನೋಟಿಸ್ ನೀಡಿದ್ದು, ಜುಹು ಮನೆಯನ್ನು ಹಾಗೂ ಪುಣೆಯಲ್ಲಿರುವ ತೋಟದ ಮನೆಯನ್ನು ಹತ್ತು ದಿನಗಳ ಒಳಗಾಗಿ ತೆರವುಗೊಳಿಸುವಂತೆ ಸೂಚಿಸಿತ್ತು.



ಕಾಣೆಯಾಗಿದ್ದ ಮಹಿಳೆಯ ಅವಶೇಷಗಳು ಶಾರ್ಕ್ ಹೊಟ್ಟೆಯಲ್ಲಿ ಪತ್ತೆ



ಇಂಡೋನೇಷ್ಯಾ: ಕುಟುಂಬದೊಂದಿಗೆ ಬೀಚ್‌ನಲ್ಲಿ ವಾರಾಂತ್ಯ ಕಳೆಯಲು ಹೋಗಿದ್ದ ಮಹಿಳೆಯೊಬ್ಬಳು ಏಕಾಏಕಿ ನಾಪತ್ತೆಯಾಗಿದ್ದು, ಇದೀಗ ಮೀನುಗಾರರ ಬಲೆಗೆ ಬೃಹತ್ ಶಾರ್ಕ್ ಸಿಕ್ಕಿಬಿದ್ದಿದ್ದು, ಶಾರ್ಕ್ ಹೊಟ್ಟೆಯಲ್ಲಿ ಮಹಿಳೆ ತೊಟ್ಟಿದ್ದ ಈಜುಡುಗೆ ಜೊತೆಗೆ ಆಕೆಯ ಅವಶೇಷಗಳು ಪತ್ತೆಯಾಗಿವೆ. ಈ ಘಟನೆ ಇಂಡೋನೇಷ್ಯಾದಲ್ಲಿ ನಡೆದಿದೆ. ಕಳೆದ ಸೆ.26ರಂದು 68 ವರ್ಷದ ಅಮೆರಿಕದ ಮಹಿಳೆ ಕೊಲೀನ್ ಮೊನ್‌ಫೋರ್ ತನ್ನ ಸ್ನೇಹಿತರೊಂದಿಗೆ ಇಂಡೋನೇಷ್ಯಾದ ಬೀಚ್‌ಗೆ ಹೋಗಿದ್ದರು. ಮಹಿಳೆ ನೀರಿಗೆ ಧುಮುಕುವ ವೇಳೆ ಜೋರಾದ ಅಲೆಗಳ ರಭಸಕ್ಕೆ ನೀರಿನಲ್ಲಿ ಕೊಚ್ಚಿ ಹೋಗಿದ್ದಾರೆ. ಸ್ನೇಹಿತರು ತಕ್ಷಣ ಪೊಲೀಸರಿಗೆ ಮಾಹಿತಿ ನೀಡಿದ್ದು, ಬಳಿಕ ರಕ್ಷಣಾ ತಂಡ ಕೊಲೀನ್ ಮಾನ್‌ಫೋರ್‌ಗಾಗಿ ಹುಡುಕಾಟ ಆರಂಭಿಸಿತ್ತು. ಅಂತಿಮವಾಗಿ ಶಾರ್ಕ್ ಹೊಟ್ಟೆಯಲ್ಲಿ ಅವಳ ಅವಶೇಷಗಳು ಪತ್ತೆಯಾಗಿದ್ದು, ಕುಟುಂಬಸ್ಥರು ಹಾಗೂ ಸ್ನೇಹಿತರನ್ನು ಬೆಚ್ಚಿ ಬೀಳಿಸಿದೆ. ಟಿಮೋರ್–ಲೆಸ್ಟೆಯಲ್ಲಿ ಮೀನುಗಾರರ ಬಲೆಗೆ ಬೃಹತ್ ಶಾರ್ಕ್ ಸಿಕ್ಕಿಬಿದ್ದಿದ್ದು, ಸೆರೆಹಿಡಿದ ಶಾರ್ಕ್‌ನ ಹೊಟ್ಟೆಯೊಳಗೆ ಮಾನವ ಅವಶೇಷಗಳು ಕಂಡುಬಂದಿತ್ತು.

ಜಮ್ಮು–ಕಾಶ್ಮೀರದಲ್ಲಿ ಯೋಧನ ಮೃತದೇಹ ಪತ್ತೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಅನಂತನಾಗ್ ಜಿಲ್ಲೆಯಲ್ಲಿ ಬುಧವಾರ ಉಗ್ರರಿಂದ ಅಪಹರಿಸಲ್ಪಟ್ಟಿದ್ದ ಯೋಧನ ಮೃತದೇಹವನ್ನು ಭದ್ರತಾ ಪಡೆಗಳು ಪತ್ತೆ ಹಚ್ಚಿವೆ. ಟೆರಿಟೋರಿಯಲ್ ಆರ್ಮಿ ಜವಾನ್ ಹಿಲಾಲ್ ಅಹ್ಮದ್ ಭಟ್ ಅವರ ಮೃತದೇಹವನ್ನು ಅನಂತನಾಗ್‌ನ ಉತ್ರಾಸೂ ಪ್ರದೇಶದ ಸಾಂಗ್ಲಾನ್ ಅರಣ್ಯ ಪ್ರದೇಶದಿಂದ ವಶಪಡಿಸಿಕೊಳ್ಳಲಾಗಿದೆ ಎಂದು ಸೇನೆ ತಿಳಿಸಿದೆ. ದಕ್ಷಿಣ ಕಾಶ್ಮೀರದ ಕೋಕರ್‌ನಾಗ್ ಅರಣ್ಯದಲ್ಲಿ ರಾತ್ರೋರಾತ್ರಿ ನಡೆದ ಉಗ್ರ ನಿಗ್ರಹ ಕಾರ್ಯಾಚರಣೆ ವೇಳೆ 26 ವರ್ಷದ ಪ್ರಾದೇಶಿಕ ಸೇನಾ ಸಿಬ್ಬಂದಿಯನ್ನು ಉಗ್ರರು ಅಪಹರಿಸಿದ್ದರು ಎಂದು ಸೇನೆ ಬುಧವಾರ ದೃಢಪಡಿಸಿದೆ.

ಗುಪ್ತಚರ ಮಾಹಿತಿಯ ಆಧಾರದ ಮೇರೆಗೆ ಅ.8ರಂದು ಕಜ್ವಾನ್ ಅರಣ್ಯದಲ್ಲಿ ಜಮ್ಮು ಮತ್ತು ಕಾಶ್ಮೀರ ಪೊಲೀಸರು ಮತ್ತು ಇತರ ಏಜೆನ್ಸಿಗಳೊಂದಿಗೆ ಭಾರತೀಯ ಸೇನೆಯು ಜಂಟಿ ಕಾರ್ಯಾಚರಣೆಯನ್ನು ಪ್ರಾರಂಭಿಸಿತು. ಕಾರ್ಯಾಚರಣೆಯು ರಾತ್ರಿಯಿಡೀ ಮುಂದುವರೆಯಿತು ಎಂದು ಸೇನೆಯ ಚಿನಾರ್ ಕಾರ್ಪ್ಸ್ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದೆ. ಬೃಹತ್ ಶೋಧ ಕಾರ್ಯಾಚರಣೆ ಪ್ರಗತಿಯಲ್ಲಿದೆ ಎಂದು ತಿಳಿಸಿದೆ. ಅಪಹರಣಕ್ಕೊಳಗಾದ ವ್ಯಕ್ತಿ ಅನಂತನಾಗ್ ಜಿಲ್ಲೆಯ ನಿವಾಸಿ ಎಂದು ಭದ್ರತಾ ಸಂಸ್ಥೆಯ ಮೂಲಗಳು ಬಹಿರಂಗಪಡಿಸಿವೆ.

1000 ಬಸ್ಕಿ ಹೊಡಿಸಿದ ಶಿಕ್ಷಕ, ಕಾಲಿನ ಸ್ವಾಧೀನ ಕಳೆದುಕೊಂಡ ವಿದ್ಯಾರ್ಥಿ



ಚೀನಾ: ಇಲ್ಲೊಬ್ಬ ಶಿಕ್ಷಕ ವಿದ್ಯಾರ್ಥಿಗೆ 1000 ಬಸ್ಕಿ ಹೊಡಿಯುವ ಶಿಕ್ಷೆ ನೀಡಿದ್ದು, ಪರಿಣಾಮ 13 ವರ್ಷದ ಬಾಲಕ ಕಾಲಿನ ಸ್ವಾಧೀನ ಕಳೆದುಕೊಂಡಿದ್ದಾನೆ. ಈ ಘಟನೆ ಚೀನಾದ ಶಾನ್‌ಡಾಂಗ್ ಪ್ರಾಂತ್ಯದ ಮಿಡ್ಲ್ ಸ್ಕೂಲ್‌ನಲ್ಲಿ ನಡೆದಿದೆ. ತೀವ್ರ ಕಾಲು ನೋವಿನಿಂದ ಬಳಲುತ್ತಿದ್ದ ಬಾಲಕನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಆದರೆ ಪ್ರಾರಂಭದಲ್ಲಿ ಸ್ನಾಯು ನೋವು ಎಂದು ಭಾವಿಸಿ ಔಷಧಿ ನೀಡಲಾಗಿದೆ. ಆದರೆ ಬಾಲಕನಿಗೆ ನೋವು ಜಾಸ್ತಿಯಾಗಿದ್ದು, ವೈದ್ಯಕೀಯ ಪರೀಕ್ಷೆಯ ವೇಳೆ ಬಾಲಕ ರಾಬ್ಡೋಮಿಯೊಲಿಸಿಸ್ ಎಂಬ ಗಂಭೀರ ವೈದ್ಯಕೀಯ ಸ್ಥಿತಿಯಿಂದ ಬಳಲುತ್ತಿದ್ದಾನೆ ಎಂದು ತಿಳಿದುಬಂದಿದೆ.

1000 ಬಸ್ಕಿ ಹೊಡೆದ ಪರಿಣಾಮ ಬಾಲಕನ ಸ್ನಾಯುಗಳಿಗೆ ಗಂಭೀರ ಹಾನಿಯನ್ನುಂಟು ಮಾಡಿದೆ. ಇನ್ನು ಜೀವನ ಪರ್ಯಂತ ಕಾಲ ಮೇಲೆ ನಿಲ್ಲುವಂತಿಲ್ಲ. ಈ ಘಟನೆಯು ಮಗುವಿಗೆ ದೈಹಿಕ ಹಾಗೂ ಮಾನಸಿಕವಾಗಿ ಆಳವಾದ ಪ್ರಭಾವವನ್ನು ಬೀರಿದೆ ಎಂದು ಬಾಲಕನ ಪೋಷಕರು ಶಿಕ್ಷಕನ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಸದ್ಯ ಪ್ರಕರಣ ನ್ಯಾಯಾಲಯದಲ್ಲಿದೆ.

ಸಾಧಕರಿಗೆ ದಸರಾ ಸವಿಗನ್ನಡ ಪ್ರಶಸ್ತಿ ಪ್ರದಾನ



ಮೈಸೂರಿನ ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗದ ವತಿಯಿಂದ ವಿವಿಧ ಕ್ಷೇತ್ರದ ಸಾಧಕರಿಗೆ ದಸರಾ ಸವಿಗನ್ನಡ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಅ.9(ಜಿಎ)–ಮೈಸೂರಿನ ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗದ ವತಿಯಿಂದ ನಗರದ ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ದಸರಾ ಸವಿಗನ್ನಡ ಪ್ರಶಸ್ತಿ ಪ್ರದಾನ ಮಾಡಿ, ಭಾಗ್ಯಲಕ್ಷ್ಮಿ ನಾರಾಯಣ್ ಅವರ ಕಲ್ಲೋಲಿನಿ ಕಥಾ ಸಂಕಲನ ಲೋಕಾರ್ಪಣೆ ಮಾಡಲಾಯಿತು.

ಪುಸ್ತಕ ಬಿಡುಗಡೆಗೊಳಿಸಿದ ಕೃಷಿ ವಿಜ್ಞಾನಿ ಡಾ.ವಸಂತಕುಮಾರ್ ತಿಮಕಾಪುರ ಮಾತನಾಡಿ, ಲೇಖಕಿ ಭಾಗ್ಯಲಕ್ಷ್ಮಿ ನಾರಾಯಣ್ ಬಹುಮುಖಿ ಪ್ರತಿಭೆ. ಶಿಕ್ಷಕಿಯಾಗಿ ಮಕ್ಕಳ ಭವಿಷ್ಯ ರೂಪಿಸುತ್ತಿರುವ ಅವರು, ಪ್ರವೃತ್ತಿಯಲ್ಲಿ ಕಥೆ, ಕವನ ಬರೆದು, ಸಂಗೀತ ಸಂಯೋಜನೆ, ಹಾಡುಗಾರಿಕೆ ಮೂಲಕ ಬಹುಮುಖಿಯಾಗಿದ್ದಾರೆ ಎಂದು ಶ್ಲಾಘಿಸಿ, ಭಾಗ್ಯಲಕ್ಷ್ಮಿ ಅವರು ಅನೇಕ ಹೊಸ ಪದಗಳನ್ನು ತಮ್ಮ ಕಥೆಗಳಲ್ಲಿ ಸೃಷ್ಟಿಸುವ ಮೂಲಕ ಕನ್ನಡ ಸಾಹಿತ್ಯ ಲೋಕಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡುತ್ತಿದ್ದಾರೆ. ಸಾಹಿತ್ಯದಲ್ಲಿ ಜೀವನದ ಕಥೆಗಳನ್ನು ಹೇಳುವ ಮೂಲಕ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಾಹಿತಿ ಸುಜಾತಾ ರವೀಶ್ ಅವರಿಗೆ ದಸರೆಯ ಕವಿ ಪ್ರಶಸ್ತಿ, ವಿವಿಧ ಕ್ಷೇತ್ರದ ಜ್ಞಾನಮೂರ್ತಿ, ಹುಸೇನಪ್ಪ, ಎಸ್.ಎಲ್. ಶ್ರೀರಮಣ, ಕೆ.ಆರ್.ಕೃಷ್ಣ, ಉದಯ್ ಹೆಜ್ಜೆಗೆಜ್ಜೆ, ಮೈಸೂರು ಆನಂದ್, ಸುಮತಿ ಸುಬ್ರಹ್ಮಣ್ಯ, ಭಾಗ್ಯಲಕ್ಷ್ಮಿ ನಾರಾಯಣ್, ಚಿಕ್ಕಳ್ಳಿ ಪಿ.ದೇವರಾಜ್, ಪಳನಿಸ್ವಾಮಿ ಮತ್ತು ಸ್ವರಾಜ್ ಜೈನ್ ಬಾಬು ಅವರಿಗೆ ಸವಿಗನ್ನಡ ಸಾಂಸ್ಕೃತಿಕ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ಈ ವೇಳೆ ಕವಿಯತ್ರಿ ಡಾ.ಲತಾ ರಾಜಶೇಖರ್, ವಂಗೀಪುರ ನಂಬಿಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕವಿ ಶಿವಬಸಪ್ಪ ಹೊರೆಯಾಲ, ಎಂ.ಚಿನ್ನಸ್ವಾಮಿ, ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಲೇಖಕ ಡಿ.ಪದ್ಮನಾಭ, ರಂಗನಾಥ್ ಮೈಸೂರು ಮತ್ತಿತರರು ಉಪಸ್ಥಿತರಿದ್ದರು.

ಅತ್ಯಂತ ಶ್ರೀಮಂತಿಕೆ ಭಾಷೆ ಕನ್ನಡ

• ಜಿಲ್ಲಾಧಿಕಾರಿ ವೆಂಕಟ್ ರಾಜಾ ಮೆಚ್ಚುಗೆ • ಮಡಿಕೇರಿ ದಸರಾದಲ್ಲಿ ಬಹುಭಾಷಾ ಕವಿಗೋಷ್ಠಿ



ಮಡಿಕೇರಿ ದಸರಾ ಬಹುಭಾಷಾ ಕವಿಗೋಷ್ಠಿ ಸಮಿತಿ ಹೊರತಂದಿರುವ 'ಕಾವ್ಯೋದ್ಯಾನ' ಪುಸ್ತಕ ಬಿಡುಗಡೆಗೊಳಿಸಲಾಯಿತು.

> ಕವನ ರಚನೆ ಆರಂಭಿಸಿದ ನಂತರವೂ ಭಾವನೆಗಳು ಅರಳುವಂತೆ ಇರಬೇಕು. ಒಂದು ಮಾತು ನೋಡಿ ಉದ್ಭವ ಆದರೆ ಅದು ಸಹಜ ಭಾವ. ಭಾವನೆಗಳ ಸಹಜತೆಯೊಂದಿಗೆ ಬದುಕಬೇಕು. ಪಕ್ವತೆ ಬೆಳೆಸಿಕೊಂಡುವಾದಷ್ಟು ಪರಿಪೂರ್ಣ ಆಗಿರಲು ಪ್ರಯತ್ನಿಸಬೇಕು.
> -ಬಿ.ಜಿ.ಅನಂತಶಯನ,
> ಜಾನಪದ ಪರಿಷತ್ ಜಿಲ್ಲಾಧ್ಯಕ್ಷ

ಮಡಿಕೇರಿ, ಅ.9–ಎಂಟು ಜ್ಞಾನಪೀಠ ಪ್ರಶಸ್ತಿ ಪಡೆದಿರುವ ಕನ್ನಡ ಭಾಷೆ ಅತ್ಯಂತ ಶ್ರೀಮಂತಿಕೆ ಹೊಂದಿದೆ ಎಂದು ಜಿಲ್ಲಾಧಿಕಾರಿ ವೆಂಕಟ್ ರಾಜಾ ಹೇಳಿದರು.

ನಗರದ ಗಾಂಧಿ ಮೈದಾನದ ಕಲಾಸಂಭ್ರಮ ವೇದಿಕೆಯಲ್ಲಿ ಬುಧವಾರ ನಡೆದ ಮಡಿಕೇರಿ ದಸರಾ ಬಹುಭಾಷಾ ಕವಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕತೆ, ಕವನ, ಕಾದಂಬರಿ, ಹಾಸ್ಯ ಲೇಖನ, ವಿಡಂಬಣೆ ಹೀಗೆ ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಅವಕಾಶಗಳು ಹೆಚ್ಚು ಲಭಿಸಲಿವೆ. ಆ ನಿಟ್ಟಿನಲ್ಲಿ ಎಲ್ಲರಿಗೂ ಪ್ರೋತ್ಸಾಹಿಸುವಂತಾಗಬೇಕು ಎಂದು ಹೇಳಿದರು.

ದಸರಾ ಬಹುಭಾಷಾ ಕವಿಗೋಷ್ಠಿಯಲ್ಲಿ ಕನ್ನಡ ಸೇರಿದಂತೆ ಇತರೆ ಭಾಷೆಗಳಿಗೂ ಅವಕಾಶ ಕಲ್ಪಿಸಿರುವುದು ಉತ್ತಮ ಬೆಳವಣಿಗೆ. ಜೊತೆಗೆ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೂ ಕವಿಗೋಷ್ಠಿಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಬೇಕು ಎಂದು ಸಲಹೆ ನೀಡಿದರು.

ಸಂಗೀತ ನಿರ್ದೇಶಕ ಎಂ.ಆರ್.ಚರಣ್ ರಾಜ್ ಮಾತನಾಡಿ, ಸಾಹಿತ್ಯ ಮತ್ತು ಸಂಗೀತಕ್ಕೆ ಅವಿನಾಭಾವ ಸಂಬಂಧವಿದೆ. ಸಾಹಿತ್ಯ ಮತ್ತು ಸಂಗೀತ ಕ್ಷೇತ್ರ ಪ್ರತಿ ಯೊಬ್ಬರ ಮನಸ್ಸಿನ ಮೇಲೆ ಹೆಚ್ಚಿನ ಪ್ರಭಾವ ಬೀರುತ್ತವೆ. ಕಲೆ, ಸಾಹಿತ್ಯ, ಸಂಗೀತ ವಿಚಾರ, ಆಲೋಚನೆಗಳು ಪ್ರಬುದ್ಧತೆ ಹೆಚ್ಚಿಸುತ್ತವೆ ಎಂದರು.

ಸೋಮವಾರಪೇಟೆ ತಾಲೂಕು ಅಭಿವೃದ್ಧಿ ಹೋರಾಟ ಸಮಿತಿ ಅಧ್ಯಕ್ಷ ಅರುಣ್ ಕೊತ್ನಳ್ಳಿ ಮಾತನಾಡಿ, ಮೈಸೂರು ಮತ್ತು ಮಡಿಕೇರಿ ದಸರಾಕ್ಕೆ ವಿಶೇಷತೆ ಇದೆ. ಇದೊಂದು ಪ್ರಜಾಪ್ರಭುತ್ವ ಹಬ್ಬವಾಗಿದೆ ಎಂದು ತಿಳಿಸಿದರು.

ಸಾಹಿತಿ ಕಟ್ರತನ ಲಲಿತಾ ಅಯ್ಯಣ್ಣ ಮಾತನಾಡಿ, ಎಲೆಮರೆಯ ಕಾಯಿಯಂತಿರುವ ಪ್ರತಿಭೆಗಳಿಗೆ ದಸರಾ ಕವಿಗೋಷ್ಠಿಯಲ್ಲಿ ಅವಕಾಶ ನೀಡಲಾಗಿದೆ. ಕವಿಗೋಷ್ಠಿಗಳು ಕವಿಗಳ ಪ್ರತಿಭೆ ಅನಾವರಣಕ್ಕೆ ವೇದಿಕೆ ಮಾತ್ರವಲ್ಲ. ಭಾಷೆ ಬೆಳವಣಿಗೆಗೆ ಸಹಕಾರಿಯೂ ಹೌದು ಎಂದು ಹೇಳಿದರು.

ಹಿರಿಯ ಸಾಹಿತಿ ಹಂಚೆಟ್ಟಿರ ಫ್ಯಾನ್ಸಿ ಮುತ್ತಣ್ಣ ಮಾತನಾಡಿ, ಕವನ ಎಲ್ಲಿ ಬೇಕಾದರೂ ಹುಟ್ಟಬಹುದು. ದುಃಖದಲ್ಲಿ ಅರಳುವ ಕವನಗಳು ಮನೋಜ್ಞವಾಗಿರುತ್ತದೆ ಎಂದರು.

ಇದೇ ವೇಳೆ ದಸರಾ ಬಹುಭಾಷಾ ಕವಿಗೋಷ್ಠಿ ಸಮಿತಿ ಹೊರತಂದಿರುವ 'ಕಾವ್ಯೋದ್ಯಾನ' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಸಭಾ ಕಾರ್ಯಕ್ರಮಕ್ಕೂ ಮುನ್ನ ನಗರದ ರಾಷ್ಟ್ರಕವಿ ಕುವೆಂಪು ಅವರ ಪುತ್ಥಳಿಗೆ ಕವಿಗೋಷ್ಠಿ ಅಧ್ಯಕ್ಷ ಫ್ಯಾನ್ಸಿ ಮುತ್ತಣ್ಣ ಮಾಲಾರ್ಪಣೆ ಮಾಡಿದರು. ಕವಿಗೋಷ್ಠಿಯಲ್ಲಿ ಉಜ್ವಲ್ ರಂಜಿತ್, ನಗರ ದಸರಾ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಎಚ್.ಟಿ.ಅನಿಲ್ ಉಪಸ್ಥಿತರಿದ್ದರು.

ಮರಗೋಡುವಿನಲ್ಲಿ ದುರ್ಗಾ, ಗೋ ಪೂಜೆ



ಮರಗೋಡು ಶಿವ ಪಾರ್ವತಿ ದೇವಾಲಯದಲ್ಲಿ ಕರುವಿಗೆ ಪೂಜೆ ಸಲ್ಲಿಸಲಾಯಿತು.

ಮಡಿಕೇರಿ, ಅ.9–ವಿಶ್ವ ಹಿಂದೂ ಪರಿಷತ್, ಭಜರಂಗದಳ, ಮಾತೃಶಕ್ತಿ, ದುರ್ಗಾವಾಹಿನಿ ಮಡಿಕೇರಿ ತಾಲೂಕು ಮತ್ತು ಗ್ರಾಮಾಂತರ ಪ್ರಖಂಡ ವತಿಯಿಂದ ಮರಗೋಡು ಶಿವ ಪಾರ್ವತಿ ದೇವಾಲಯದಲ್ಲಿ ದುರ್ಗಾ ಹಾಗೂ ಗೋ ಪೂಜೆ ಜರುಗಿತು.

ದೇವಾಲಯದಲ್ಲಿ ಪೂಜೆ ಸಲ್ಲಿಸುವ ಮೂಲಕ ನಾಡಿನ ಒಳಿತಿಗಾಗಿ ದುರ್ಗೆ ಪ್ರಾರ್ಥಿಸಲಾಯಿತು. ಗೋವು ಮತ್ತು ಕರುವಿಗೆ ವಿಶೇಷ ಪೂಜೆ ಸಲ್ಲಿಸಿ ಬೆಲ್ಲ, ಕಡಲೆ, ಬಾಳೆಹಣ್ಣು, ಅವಲಕ್ಕಿ ಫಲಹಾರ ನೀಡಲಾಯಿತು. ನಂತರ ದೇವಾಲಯ ಸಭಾಂಗಣದಲ್ಲಿ ದುರ್ಗಾ ಸ್ತೋತ್ರದೊಂದಿಗೆ ಭಾರತ ಮಾತೆಗೆ ಪುಷ್ಪಾರ್ಚನೆ ಮಾಡಿ, ಸಭಾ ಕಾರ್ಯಕ್ರಮ ಆರಂಭಿಸಲಾಯಿತು. ಜಿಲ್ಲಾ ಮಠ ಮಂದಿರಗಳ ಪ್ರಮುಖ್ ಡಾ.ಮಹಾಭಲೇಶ್ವರ ಭಟ್, ಹಿಂದೂ ಧರ್ಮ, ಧಾರ್ಮಿಕ ಆಚರಣೆ, ದುರ್ಗಾ ಮತ್ತು ಗೋ ಪೂಜೆ ಮಹತ್ವ ತಿಳಿಸಿದರು.

ಮಾತೃಶಕ್ತಿಯ ಮಡಿಕೇರಿ ತಾಲೂಕು ಸಂಯೋಜಕಿ ಮಮತಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಹಪ್ರಮುಖ್ ಪೂರ್ಣಿಮಾ ಸುರೇಶ್, ಸಂಯೋಜಕಿ ಉಮಾವತಿ, ರೋಹಿಣಿ ಚಂದ್ರಶೇಖರ್, ವಿಶ್ವ ಹಿಂದೂ ಪರಿಷತ್ ಕಾರ್ಯಾಧ್ಯಕ್ಷ ಸುರೇಶ್ ಮುತ್ತಪ್ಪ, ಜಿಲ್ಲಾ ಪ್ರಸಾರ ಪ್ರಮುಖ್ ಶಾನ್ ಸೋಮಣ್ಣ, ಕಾರ್ಯದರ್ಶಿ ರಮೇಶ್ ಪುದಿಯೊಕ್ಕಡ, ಚಂದ್ರಶೇಖರ್, ಶಿವಪಾರ್ವತಿ ದೇವಾಲಯ ಮುಖ್ಯಸ್ಥರು, ಗ್ರಾಮಸ್ಥರು, ಸಂಘ–ಸಂಸ್ಥೆಗಳ ಪ್ರಮುಖರು ಪಾಲ್ಗೊಂಡಿದ್ದರು.

ಕಾಡಾನೆ ದಾಳಿ: ಬೆಳೆ ನಾಶ

ನಾಪೋಕ್ಲು, ಅ.9–ಸಮೀಪದ ನೆಲಜಿ ಗ್ರಾಮದಲ್ಲಿ ಕಾಡಾನೆಗಳು ಮಂಗಳವಾರ ರಾತ್ರಿ ದಾಳಿ ನಡೆಸಿ ಭತ್ತದ ಪೈರು, ಕಾಫಿ ಹಾಗೂ ಅಡಕೆ ಗಿಡಗಳನ್ನು ನಾಶಗೊಳಿಸಿವೆ.

ಬಲ್ಲಮಾವಟ್ಟಿ ಗ್ರಾಮ ಪಂಚಾಯಿತಿಯ ನೆಲಜಿ ಗ್ರಾಮದ ಅಪ್ಪುಮಣಿಯಂಡ ರಘು ಸುಬ್ಬಯ್ಯ ಅವರ ಗದ್ದೆಗಳಲ್ಲಿ ಭತ್ತದ ಪೈರುಗಳನ್ನು ತಿಂದು, ತುಳಿದು ನಾಶಗೊಳಿಸಿವೆ. ತೋಟದಲ್ಲಿದ್ದ ಕಾಫಿ, ಅಡಕೆ ಇನ್ನಿತರ ಫಸಲನ್ನು ತುಳಿದು ಹಾಕಿವೆ.



ನೆಲಜಿ ಗ್ರಾಮದಲ್ಲಿ ಕಾಡಾನೆಗಳು ಭತ್ತದ ಪೈರುಗಳನ್ನು ನಾಶಗೊಳಿಸಿರುವುದು.

ಯಂತ್ರಕ್ಕೆ ಸಿಲುಕಿ ಯುವಕನ ಕೈ ತುಂಡು



ಕಾಂಕ್ರೀಟ್ ಮಿಕ್ಸಿಂಗ್ ಯಂತ್ರಕ್ಕೆ ಸಿಲುಕಿರುವ ಯುವಕನ ಕೈ.

ಮಡಿಕೇರಿ, ಅ.9–ಕಾಂಕ್ರೀಟ್ ಮಿಕ್ಸಿಂಗ್ ಯಂತ್ರಕ್ಕೆ ಯುವಕನ ಕೈ ಸಿಲುಕಿ ತುಂಡಾದ ಘಟನೆ ನಗರದ ಟಿ.ಜಾನ್ ಲೇಔಟ್‌ನಲ್ಲಿ ಬುಧವಾರ ನಡೆದಿದೆ.

ಟಿ.ಜಾನ್ ಲೇಔಟ್‌ನ ಮನೆಯೊಂದರ ಕಾಮಗಾರಿ ನಡೆಸುತ್ತಿದ್ದ ಸಂದರ್ಭ ಕನ್ನಂಡ ಬಾಣೆ ನಿವಾಸಿ ಹರೀಶ್(28) ಎಂಬಾತನ ಕೈ ಮಿಕ್ಸಿಂಗ್ ಯಂತ್ರಕ್ಕೆ ಸಿಲುಕಿಕೊಂಡಿದೆ. ಜೊತೆಯಲ್ಲಿದ್ದ ಇತರ ಕಾರ್ಮಿಕರು ತಕ್ಷಣ ಯಂತ್ರವನ್ನು ಬಂದ್ ಮಾಡಿದರೂ ಕೈ ಬಿಡಿಸಲಾಗಲಿಲ್ಲ. ನಂತರ ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಹರಸಾಹಸ ಪಟ್ಟು ಯುವಕನ ಕೈಯನ್ನು ಯಂತ್ರದಿಂದ ಬಿಡಿಸಿದರು. ಗಂಭೀರ ಗಾಯಗೊಂಡ ಯುವಕನನ್ನು ನಗರದ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಕೊಡವರನ್ನು ಸಂಕಷ್ಟಕ್ಕೆ ಸಿಲುಕಿಸುವ ಪ್ರಯತ್ನ

ಜನಜಾಗೃತಿ ಕಾರ್ಯಕ್ರಮದಲ್ಲಿ ಸಿಎನ್‌ಸಿ ಸಂಘಟನೆ ಅಧ್ಯಕ್ಷ ನಾಚಪ್ಪ ಆರೋಪ

ಮಡಿಕೇರಿ, ಅ.9–ಕೊಡವರಿಗೆ ಭೂಮಿ ಸಿಗದಂತೆ ಮಾಡಿ ಸಂಕಷ್ಟಕ್ಕೆ ಸಿಲುಕಿಸಿ ಆತಂಕಕ್ಕೆ ತಳ್ಳುವ ಪ್ರಯತ್ನ ನಡೆಯುತ್ತಿದೆ ಎಂದು ಸಿಎನ್‌ಸಿ ಸಂಘಟನೆ ಅಧ್ಯಕ್ಷ ಎನ್.ಯು. ನಾಚಪ್ಪ ಆರೋಪಿಸಿದರು.



ಸಿಎನ್‌ಸಿ ಸಂಘಟನೆ ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದಲ್ಲಿ ಅಮ್ಮತ್ತಿಯಲ್ಲಿ ಮಾನವ ಸರಪಳಿ ನಡೆಸಲಾಯಿತು.

ಕೊಡಗಿನ ವಿವಿಧೆಡೆ ನಡೆಯುತ್ತಿರುವ ಬೃಹತ್ ಭೂ ಪರಿವರ್ತನೆ ಮತ್ತು ಭೂ ವಿಲೇವಾರಿ ಸ್ಥಗಿತಗೊಳಿಸಬೇಕೆಂದು ಒತ್ತಾಯಿಸಿ ಸಿಎನ್‌ಸಿ ವತಿಯಿಂದ ಅಮ್ಮತ್ತಿಯಲ್ಲಿ ನಡೆದ ಮಾನವ ಸರಪಳಿ ಜನಜಾಗೃತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕೊಡಗಿನಲ್ಲಿ ಬೃಹತ್ ಭೂ ಪರಿವರ್ತನೆ ಮತ್ತು ವಿಲೇವಾರಿಯಲ್ಲಿ ತೊಡಗಿರುವ ಬಂಡವಾಳಶಾಹಿಗಳು ಹಾಗೂ ಅವರನ್ನು ಕರೆ ತಂದಿರುವರಿಂದ ಇಲ್ಲಿನ ಪರಿಸರ, ಪ್ರಕೃತಿ, ಸಂಸ್ಕೃತಿ, ಜಲಮೂಲ, ಸಾಮಾಜಿಕ ಭದ್ರತೆ ಮತ್ತು ಜನಾಂಗೀಯ ಶಾಸ್ತ್ರ ಸಂಪೂರ್ಣ ಬುಡಮೇಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕರ್ನಾಟಕ ಭೂ ಸುಧಾರಣಾ ಕಾಯ್ದೆ ತಿದ್ದುಪಡಿ 79ಎ, 79ಬಿ ದುರುಪಯೋಗವಾಗುತ್ತಿದ್ದು, ಇವರು ಬೃಹತ್ ಭೂ ಪರಿವರ್ತನೆ ಮತ್ತು ವಿಲೇವಾರಿ ಮೂಲಕ ಭೂ ಮಾಫಿಯಾ, ರೆಸಾರ್ಟ್ ಮಾಫಿಯಾ, ಆರ್ಥಿಕ ಅಪರಾಧಿಗಳು ಹಾಗೂ ಉದ್ಯಮಪತಿಗಳು ಕೊಡವ ಲ್ಯಾಂಡ್‌ನ ಪರಿಸರವನ್ನು ಸಂಪೂರ್ಣ ನಾಶಗೊಳಿಸುತ್ತಿದ್ದಾರೆ ಎಂದು ದೂರಿದರು.

ಹೊರ ರಾಜ್ಯ, ಹೊರ ದೇಶದ ಉದ್ಯಮಪತಿಗಳು ಎಗ್ಗಿಲ್ಲದೆ ಕೊಡವ ಲ್ಯಾಂಡ್ ಭೂ ಖರೀದಿಯಲ್ಲಿ ತೊಡಗಿದ್ದಾರೆ. ಬಂಡವಾಳಶಾಹಿಗಳು ಕರೆದು ತಂದ ಹೊರ ರಾಜ್ಯ ಮತ್ತು ಶತ್ರು ರಾಷ್ಟ್ರದ ಕಾರ್ಮಿಕರು ಇಲ್ಲಿ ಆಧಾರ್ ಮತ್ತು ವೋಟರ್ ಐಡಿ ಪಡೆದು ಭೂರಹಿತ ಶೋಷಿತರೆಂದು ಬಿಂಬಿಸುವ ಮೂಲಕ ಅಕ್ರಮ–ಸಕ್ರಮ ಮತ್ತು ಆಶ್ರಯ ಯೋಜನೆ ಫಲಾನುಭವಿಗಳಾಗಿ ಇಲ್ಲಿನ ಜನಸಂಖ್ಯಾ ಶಾಸ್ತ್ರದ ಪಲ್ಲಟಕ್ಕೆ ಕಾರಣವಾಗಿದ್ದಾರೆ. ಜೊತೆಗೆ ಇಲ್ಲಿ ಕಾನೂನು ಸುವ್ಯವಸ್ಥೆಗೆ ಭಂಗ ತರುವ ಮೂಲಕ ಸಾಮಾಜಿಕ ಸ್ವಾಸ್ಥ್ಯ ಹಾಳುಗೆಡುವುತ್ತಿದ್ದಾರೆ. ಇವರಿಗೆ ಭ್ರಷ್ಟ ಅಧಿಕಾರ ಶಾಯಿ ಮತ್ತು ರಾಜಕೀಯ ಸಂಕುಲಗಳ ಬೆಂಬಲವಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ ಸಿಎನ್‌ಸಿ ಪ್ರಮುಖರು ಹಾಗೂ ಗ್ರಾಮಸ್ಥರು ಭೂ ಪರಿವರ್ತನೆ ಮತ್ತು ಭೂ ವಿಲೇವಾರಿ ವಿರುದ್ಧ ನಿರ್ಣಯ ಕೈಗೊಂಡು ಪ್ರತಿಜ್ಞಾವಿಧಿ ಸ್ವೀಕರಿಸಿದರು. ಮುದ್ದಿಯಡ ಲೀಲಾವತಿ, ಮಂಡೇಪಂಡ ಲಾಲಾ ಮಾಚಯ್ಯ, ಕುಂಞಂಡ ನಿರು ನಾಣಯ್ಯ, ನೆಲ್ಲಮಕ್ಕಡ ವಿವೇಕ್, ಪಟ್ಟಡ ಅರುಣ್, ನೆಲ್ಲಮಕ್ಕಡ ಸಾಗರ್, ಐನಂಡ ಮೊಣ್ಣಪ್ಪ ನಾಯಡ ಪವಿ ಪೂವಯ್ಯ, ಪುದಿಯೊಕ್ಕಡ ಬೋಪಣ್ಣ, ಮಚ್ಚರಂಡ ಗಣೇಶ್, ಮಗ್ಗೇರ ರಾಜೇಶ್, ಕಿರಿಯಮಡ ಶರೀನ್, ಕಾಮಡಿಚಂಡ ಕುಟ್ಟಪ್ಪ ಉದ್ದಪಂಡ ಐಯಣ್ಣ ಮತ್ತಿತರರು ಹಾಜರಿದ್ದರು.

ನಾಳೆ ಖಾಸಗಿ ಬಸ್ ಕಾರ್ಮಿಕರ ಸಂಘದಿಂದ ಸಾಂಸ್ಕೃತಿಕ ಕಾರ್ಯಕ್ರಮ



ಸುದ್ದಿಗೋಷ್ಠಿಯಲ್ಲಿ ಖಾಸಗಿ ಬಸ್ ಕಾರ್ಮಿಕರ ಸಂಘದ ಅಧ್ಯಕ್ಷ ಕುಂಬೇಯಂಡ ಸುರೇಶ್ ಮಾನನಾಡಿದರು.

ವಿರಾಜಪೇಟೆ, ಅ.9–ಕೊಡಗು ಖಾಸಗಿ ಬಸ್ ಕಾರ್ಮಿಕರ ಸಂಘದ 17ನೇ ವರ್ಷದ ಆಯುಧ ಪೂಜೆ ಕಾರ್ಯಕ್ರಮವನ್ನು ಅ.11ರಂದು ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಕುಂಬೇಯಂಡ ಸುರೇಶ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾನನಾಡಿದ ಅವರು. ಅದ್ಧೂರಿಯಾಗಿ ನಡೆಯುವ ಆಯುಧ ಪೂಜೆಯಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಅಂದು ಬೆಳಗ್ಗೆ 10.30ಕ್ಕೆ ಸಂಘದ ಕಚೇರಿಯಲ್ಲಿ ಪೂಜೆ ನಂತರ ಸ್ಥಳೀಯ ಕಲಾವಿದರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಮಧ್ಯಾಹ್ನ 1 ಗಂಟೆಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿದೆ ಎಂದರು.

ಸಮೀಪದ ತೋರ ಗ್ರಾಮದ ಗೋಪಮ್ಮ ತಂಡದಿಂದ ಕೊಡಗಿನ ಜನಪದ ಕಲೆ ಉರುಟ್ಟಿ ಕೊಟ್ಟ್ ಪಾಟ್, ಕಾಲೇಜು ವಿದ್ಯಾರ್ಥಿಗಳಿಂದ ಚೆಂಡೇವೋಳ ಮತ್ತು ನೃತ್ಯ ಕಾರ್ಯಕ್ರಮ ನಡೆಯಲಿದೆ ಎಂದು ಹೇಳಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಜ್ಯೂಡಿವಾಜ್ ಮಾತನಾಡಿ, ಕೊಡಗು ಮತ್ತು ಮೈಸೂರು ವಿಭಾಗದ ನುರಿತ ಬೈಕ್ ಸವಾರರಿಂದ ಮಧ್ಯಾಹ್ನ 3 ಗಂಟೆಗೆ ಬೈಕ್ ಶೋ, ಸಂಜೆ 6.30ಕ್ಕೆ ಶಾರದೆ ಮ್ಯೂಸಿಕಲ್ ನೈಟ್ಸ್ ತಂಡದಿಂದ ರಸಮಂಜರಿ, ರಾತ್ರಿ 7.30ಕ್ಕೆ ವೇದಿಕೆ ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ಖಾಸಗಿ ಬಸ್ ಕಾರ್ಮಿಕರ ಮಕ್ಕಳು ಮತ್ತು ವಿವಿಧ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವವರನ್ನು ಸನ್ಮಾನಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಕೋಶಾಧಿಕಾರಿ ವಿ.ಎ.ದಿನೇಶ್, ನಿರ್ದೇಶಕರಾದ ದಿನೇಶ್ ನಾಯರ್, ಎಂ.ಕೆ.ಮಹೇಶ್ ಉಪಸ್ಥಿತರಿದ್ದರು.

ಸಾವಯವ ಗೊಬ್ಬರ ಮೂಲಕ ಸಹಜ ಕೃಷಿ ಅಳವಡಿಸಿಕೊಳ್ಳಿ

• ರೈತರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಸಲಹೆ • ರೈತ ದಸರಾಗೆ ಚಾಲನೆ



ಚಾಮರಾಜನಗರದ ಅಂಬೇಡ್ಕರ್ ಭವನದಲ್ಲಿ ರೈತ ದಸರಾಗೆ ಸಿರಿಧಾನ್ಯಗಳ ಅಲಂಕಾರ ರಾಗಿ ಕಣಕ್ಕೆ ಪೂಜೆ ಸಲ್ಲಿಸಿ ಚಾಲನೆ ನೀಡಲಾಯಿತು.

> ಸರ್ವರೋಗಕ್ಕೂ ಆಹಾರ ಕ್ರಮವೇ ಕಾರಣವಾಗಿದೆ. ಹವಾಮಾನ ವೈಪರೀತ್ಯದಿಂದ ಭೂಮಿಯ ಆಯಸ್ಸು ಕ್ಷೀಣಿಸುತ್ತಿದ್ದು, ಭೂಮಿಯಲ್ಲಿ ಅಂತರ್ಜಲ ಹೆಚ್ಚಿಸಿ ನೀರು ಉಳಿವಿಗೆ ರೈತರು ಮುಂದಾಗಬೇಕಿದೆ. ಸಾವಯವ ಇಂಗಾಲವನ್ನು ವೃದ್ಧಿಸಬೇಕಿದೆ. ಗರಿಕೆಯಿಂದ ಹಿಡಿದು ಎಲ್ಲವೂ ಸಿರಿಧಾನ್ಯಗಳೇ ಆಗಿವೆ. ನಾವು ಆಹಾರವನ್ನು ನಮಗೋಸ್ಕರ ಬೆಳೆಯಬೇಕಾಗಿದ್ದು, ಮಾರುಕಟ್ಟೆಯನ್ನು ನಾವೇ ಹುಡುಕಿಕೊಳ್ಳಬೇಕಾಗಿದೆ. ಮಾರುಕಟ್ಟೆ ಕ್ರಾಂತಿಯೂ ಆಗಬೇಕಾಗಿದೆ. ಕೃಷಿ ವ್ಯವಸ್ಥೆ ಉದ್ದಿಮೆಯಾಗಿ ಪರಿವರ್ತನೆಯಾಗಬೇಕು.
> -ಹೊನ್ನೂರು ಪ್ರಕಾಶ್,
> ರೈತ ಮುಖಂಡ

ಚಾಮರಾಜನಗರ, ಅ.9–ರಾಸಾಯನಿಕ ಗೊಬ್ಬರ ಬಳಕೆಯಿಂದ ಕೃಷಿ ಭೂಮಿ ವಿಷಕಾರಿಯಾಗುತ್ತಿದೆ. ಆದ್ದರಿಂದ ಸಾವಯವ (ಕೊಟ್ಟಿಗೆ) ಗೊಬ್ಬರವನ್ನು ಬಳಸುವ ಮೂಲಕ ಸಹಜ ಕೃಷಿ ಪದ್ಧತಿ ಅಳವಡಿಸಿಕೊಳ್ಳಬೇಕು ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಸಲಹೆ ನೀಡಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಬುಧವಾರ ನಡೆದ ರೈತ ದಸರಾಗೆ ಸಿರಿಧಾನ್ಯಗಳ ಅಲಂಕಾರ ರಾಗಿ ಕಣಕ್ಕೆ ಪೂಜೆ ನೆರವೇರಿಸಿ ಮಾತನಾಡಿದ ಅವರು, ಕೃಷಿ ಭೂಮಿಗೆ ಯತೇಚ್ಛವಾಗಿ ರಾಸಾಯನಿಕ ಗೊಬ್ಬರ ಬಳಸುವುದಲ್ಲದೆ, ಬೆಳೆಗಳಿಗೆ ಸಿಂಪಡಿಸುವ ಔಷಧ ವಿಷಕಾರಿಯಾಗಿದೆ. ಇದು ಆರೋಗ್ಯಕ್ಕೆ ಹಾನಿಕರ. ಹೆಚ್ಚು ವಿಷ ಉಣಿಸಿದಷ್ಟು ಭೂಮಿ ನಮಗೂ ವಿಷ ಉಣಿಸಲಿದೆ. ಈ ನಿಟ್ಟಿನಲ್ಲಿ ರೈತರು ಸಾವಯವ ಕೃಷಿ ಪದ್ಧತಿ ಅಳವಡಿಸಿಕೊಳ್ಳಬೇಕು. ಆಧುನಿಕ ಯಂತ್ರೋಪಕರಣ ಬಳಕೆ ಕುರಿತು ಅಧಿಕಾರಿಗಳು ಹೋಬಳಿ ಮಟ್ಟದಲ್ಲಿ ಕಾರ್ಯಾಗಾರ ಏರ್ಪಡಿಸಿ, ರೈತರಿಗೆ ಅರಿವು ಮೂಡಿಸಬೇಕು ಎಂದು ತಿಳಿಸಿದರು.

ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ರೈತ ದಸರಾ ಇದೊಂದು ಸುಂದರ ಕಾರ್ಯಕ್ರಮ. ಮೈಸೂರಿನಿಂದ ಪ್ರತ್ಯೇಕ ಜಿಲ್ಲೆಯಾದ ಬಳಿಕ ಚಾಮರಾಜೇಂದ್ರ ಒಡೆಯರ್ ಜನ್ಮತಳೆದ ಚಾಮರಾಜನಗರದಲ್ಲೂ ದಸರಾ ನಡೆಸುವ ಸದುದ್ದೇಶ ಔಚಿತ್ಯಪೂರ್ಣವಾಗಿದೆ. ರೈತರೊಂದಿಗೆ ನಾವೆಲ್ಲರೂ ಬೆರೆಯುವ ಅವಕಾಶವನ್ನು ರೈತ ದಸರಾ ಒದಗಿಸಿದೆ. ಆಧುನಿಕ ಕೃಷಿ ಪದ್ಧತಿಯಲ್ಲಿ ಡ್ರೋಣ್ ಮೂಲಕ ಔಷಧ ಸಿಂಪಡಣೆ ಬಗ್ಗೆ ಹೋಬಳಿ ಮಟ್ಟದಲ್ಲಿ ರೈತರಿಗೆ ಹೆಚ್ಚಿನ ಅರಿವು ಮೂಡಿಸುವುದು ಅಗತ್ಯವಾಗಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಜಿಲ್ಲಾಧಿಕಾರಿ ಶಿಲ್ಪನಾಗ್ ಮಾತನಾಡಿ, ರೈತ ದಸರಾ ಚೆಲುವ ಚಾಮರಾಜನಗರ ದಸರಾ ಮಹೋತ್ಸವದ ಒಂದು ಭಾಗವಾಗಿದೆ. ರೈತರು ಮತ್ತು ಅಧಿಕಾರಿಗಳ ನಡುವೆ ಉತ್ತಮ ಬಾಂಧವ್ಯ ಗಟ್ಟಿಗೊಳಿಸಲು ರೈತ ದಸರಾ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಜೈ ಜವಾನ್, ಜೈ ಕಿಸಾನ್, ರೈತರು ದೇಶದ ಬೆನ್ನೆಲುಬು. ನಾವು ಸಹ ರೈತ ಕುಟುಂಬದಿಂದ ಬಂದವರು. ಅನ್ನ ನೀಡುವ ರೈತರಿಂದಲೇ ನಾವೆಲ್ಲರೂ ಬದುಕ ಬೇಕಾಗಿದೆ. ರೈತರಿಗೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಜಿಲ್ಲೆಯಲ್ಲಿ ಸಮಗ್ರ ಹಾಗೂ ಸಾವಯವ ಕೃಷಿ ಪದ್ಧತಿಗೆ ಒತ್ತು ನೀಡಲಾಗಿದೆ. ರೈತ ದಸರಾ ಪ್ರಯುಕ್ತ ಏರ್ಪಡಿಸಲಾಗಿರುವ ತಾಂತ್ರಿಕ ಕಾರ್ಯಾಗಾರವನ್ನು ರೈತರು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ. ಕವಿತಾ ಮಾತನಾಡಿ, ಕಾಯಕ ಗುಣ, ಶ್ರದ್ಧೆ ರೈತರಿಗೆ ತಂತಾನೆ ಬಂದಿದೆ. ತಾವು ಬೆಳೆದು ಇತರರ ಹೊಟ್ಟೆ ತುಂಬಿಸುವ ರೈತರ ಕಾಯಕ ಸಂಸ್ಕೃತಿ ಶ್ರೇಷ್ಠವಾದದ್ದು. ಇತ್ತೀಚೆಗೆ ಪ್ರತಿಯೊಂದು ಆಹಾರ ಕಲಬೆರಕೆಯಾಗುತ್ತಿದ್ದು, ಇದನ್ನು ತಡೆಯಲು ರೈತರು ಬೆಳೆದ ಆಹಾರ ಪದಾರ್ಥಗಳನ್ನು ನೇರವಾಗಿ ರೈತರಿಂದಲೇ ಖರೀದಿಸುವುದು ಉತ್ತಮ ಎಂದರು.

ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ನಗರಸಭೆ ಉಪಾಧ್ಯಕ್ಷೆ ಮಮತಾ, ರೈತ ಮುಖಂಡರಾದ ಅಣಗಳ್ಳಿ ಬಸವರಾಜು, ನಾಗಪ್ಪ ಕಾರ್ಯಕ್ರಮದಲ್ಲಿ ರೈತ ದಸರಾ ಉದ್ದೇಶದ ಮಾತನಾಡಿದರು. ಕೃಷಿ ಇಲಾಖೆ ಜಂಟಿ ನಿರ್ದೇಶಕ ಅಬೀದ್, ಉಪನಿರ್ದೇಶಕಿ ಸುಷ್ಮಾ, ಕೃಷಿಕ ಸಮಾಜದ ತಾಲೂಕು ಅಧ್ಯಕ್ಷ ರಾಘವೇಂದ್ರ ನಾಯ್ಡು, ರೈತ ಮುಖಂಡರಾದ ಗುಂಡ್ಲುಪೇಟೆಯ ಸಂಪತ್, ಶಿವಪುರ ಮಹದೇವಪ್ಪ, ಹೊನ್ನೂರು ಬಸವಣ್ಣ, ಸಿದ್ದರಾಜು, ಬಸವರಾಜು, ರಾಮಕೃಷ್ಣ, ಅಮ್ಜದ್ ಖಾನ್, ಕೃಷಿ ಯಂತ್ರೋಪಕರಣ ಮಾರಾಟ ಸಂಘದ ಅಧ್ಯಕ್ಷರು ಉಪಸ್ಥಿತರಿದ್ದರು.

ಕಾರ್ಯಕ್ರಮಕ್ಕೂ ಮೊದಲು ಹೊರ ಆವರಣದಲ್ಲಿ ಕೃಷಿ ಸಂಬಂಧಿತ ವಿವಿಧ ಇಲಾಖೆಗಳು ತೆರೆದಿದ್ದ ಮಳಿಗೆಗಳು ಹಾಗೂ ಕೃಷಿ ಯಂತ್ರೋಪಕರಣಗಳನ್ನು ಶಾಸಕರು ಹಾಗೂ ಗಣ್ಯರು ವೀಕ್ಷಿಸಿದರು.

ಕಲಾತಂಡ, ಸ್ತಬ್ಧಚಿತ್ರಗಳ ಅದ್ಧೂರಿ ಮೆರವಣಿಗೆ



ತಳಿರು ತೋರಣಗಳ ಅಲಂಕೃತಗೊಂಡ ಎತ್ತಿನಗಾಡಿಗಳು ಮೆರವಣಿಗೆಯಲ್ಲಿ ಗಮನ ಸೆಳೆದವು.

ದಸರಾ ಮಹೋತ್ಸವದ 'ರೈತ ದಸರಾ' ಪ್ರಯುಕ್ತ ಆಕರ್ಷಕ ಜಾನಪದ ಕಲಾತಂಡ, ಅಲಂಕೃತ ಎತ್ತಿನ ಗಾಡಿಗಳು, ಕೃಷಿ ಸಂಬಂಧಿತ ಸ್ತಬ್ಧಚಿತ್ರಗಳ ಮೆರವಣಿಗೆ ಅದ್ಧೂರಿಯಾಗಿ ನಡೆದವು.

ಚಾಮರಾಜೇಶ್ವರ ದೇವಾಲಯದಿಂದ ಆರಂಭವಾದ ಮೆರವಣಿಗೆಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಸ್ವತಹ ಎತ್ತಿನ ಗಾಡಿ ಚಾಲಿಸುವ ಮೂಲಕ ಚಾಲನೆ ನೀಡಿದರು. ಬಳಿಕ ಡೊಳ್ಳು ಕುಣಿತ, ಬ್ಯಾಂಡ್‌ಸೆಟ್, ವೀರಗಾಸೆ, ಗೊರವರ ಕುಣಿತ, ಹುಲಿವೇಷ, ಕಂಸಾಳೆ ಕಲಾವಿದರ ತಂಡಗಳು ಮೆರವಣಿಗೆಗೆ ಆಕರ್ಷಕ ಮೆರುಗು ನೀಡಿದವು. ಕಬ್ಬು, ಬಾಳೆ, ತಳಿರು, ತೋರಣಗಳಿಂದ ಅಲಂಕೃತಗೊಂಡಿದ್ದ ಎತ್ತಿನ ಗಾಡಿಗಳು ಮೆರವಣಿಗೆಯಲ್ಲಿ ಗಮನ ಸೆಳೆದವು. ಅಲ್ಲದೆ, ಕೃಷಿ, ತೋಟಗಾರಿಕೆ, ಮೀನುಗಾರಿಕೆ, ಪಶುಸಂಗೋಪನೆ ಇಲಾಖೆಗಳ ಸಂಬಂಧಿತ ಸ್ತಬ್ಧಚಿತ್ರಗಳು ಮೆರವಣಿಗೆಯ ಅಂದ ಹೆಚ್ಚಿಸಿದ್ದವು.

ಜಿಪಂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಉದಯ್ ಕುಮಾರ್, ಅಧಿಕಾರಿಗಳು, ರೈತ ಮುಖಂಡರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಚಾ.ನಗರ ದಸರಾ ಮಹೋತ್ಸವಕ್ಕೆ ವರ್ಣರಂಜಿತ ತೆರೆ

• ಸ್ಯಾಂಡಲ್‌ವುಡ್ ಡಾಲಿ ಧನಂಜಯ ಮೋಡಿ • ಹೇಮಂತ್, ಜಸ್ ಕರಣ್ ಸಿಂಗ್ ಗಾಯನಕ್ಕೆ ಜನತೆ ಜೋಶ್





ಚಾಮರಾಜನಗರ, ಅ.9–ಮೂರು ದಿನಗಳಿಂದ ಅದ್ಧೂರಿಯಾಗಿ ನಡೆದ ಚಾಮರಾಜನಗರ ದಸರಾ ಮಹೋತ್ಸವಕ್ಕೆ ಬುಧವಾರ ವರ್ಣರಂಜಿತ ತೆರೆ ಕಂಡಿತು.

ಸ್ಯಾಂಡಲ್‌ವುಡ್ ನಾಯಕ ಬಡವ ರಾಸ್ಕಲ್ ಚಿತ್ರದ ನಟ ಡಾಲಿ ಧನಂಜಯ ಹಾಗೂ ಬಿಗ್‌ಬಾಸ್ ವಿನ್ನರ್ ಕಾರ್ತಿಕ್ ಮಹೇಶ್ ಸಮಾರೋಪದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಮೊದಲಿಗೆ ವೇದಿಕೆಗೆ ಡಾಲಿ ಧನಂಜಯ ಆಗಮಿಸುತ್ತಿದ್ದಂತೆ ನೆರೆದಿದ್ದ ಜನಸ್ತೋಮ ಹುಚ್ಚೆದ್ದು ಕುಣಿದು ಶಿಳ್ಳೆ ಹೊಡೆದರು.

ಡಾಲಿ ಧನಂಜಯ ಮಾತನಾಡಿ, ಚಾಮರಾಜನಗರ ಜನತೆ ಕಲಾವಿದರನ್ನು ತುಂಬಾ ಪ್ರೀತಿಯಿಂದ ಕಾಣುತ್ತಾರೆ. ನಾನು ಮೊದಲ ಬಾರಿಗೆ ಬಡವ ರಾಸ್ಕಲ್ ಚಿತ್ರ ಬಿಡುಗಡೆ ಸಂದರ್ಭದಲ್ಲಿ ನಗರದಕ್ಕೆ ಆಗಮಿಸಿದ್ದಾಗ ಚಿತ್ರಮಂದಿರದ ಬಳಿ ನನ್ನನ್ನು ಕಾರಿನಿಂದ ಇಳಿಯುವುದಕ್ಕೆ ಬಿಡಲಿಲ್ಲ. ಅಷ್ಟೊಂದು ಪ್ರೀತಿ ವಿಶ್ವಾಸ ತೋರಿಸಿದರು ಎಂದರು.

ನಂತರ ಸ್ಯಾಂಡಲ್‌ವುಡ್ ಗಾಯಕರಿಂದ ಗಾಯನ ಮೋಡಿ ಆರಂಭವಾಯಿತು. ಮೊದಲಿಗೆ ಗಾಯಕಿ ದಿವ್ಯಾ ಗಿಲ್ ಗಿಲ್ ಗಿಲಕ್... ಕೋ ಕೋ ಕೋಳಿಕೆ ರಂಗ.. ಹಾಡು ಹಾಡುವ ಮೂಲಕ ನೆರೆದಿದ್ದ ಜನತೆ ಕೇಕೆ ಹಾಕಿ ಕುಣಿಯುವಂತೆ ಮಾಡಿದರು. ಗಾಯಕಿ ಚೈತ್ರಾ, ರೆಡ್‌ಡ್ರೆಸ್ ತೊಟ್ಟು ಜನರ ಆಕರ್ಷಣೀಯ ಕೇಂದ್ರವಾಗಿ ನೃತ್ಯ ಕಲಾವಿದರೊಂದಿಗೆ ಆಗಮಿಸಿ ಅಮೃತಧಾರೆ ಚಿತ್ರದಲ್ಲಿ ತಾವೇ ಹಾಡಿರುವ ಹುಡುಗ ಹುಡುಗ ಹಾಡಿನ ಮೂಲಕ ಜನತೆಗೆ ಜೋಶ್ ತುಂಬಿದರು.

ಮತ್ತೊಬ್ಬ ಗಾಯಕ ಪ್ರೀತ್ಸೆ ಪ್ರೀತ್ಸೆ, ಸುವ್ವಿ ಸುವ್ವಿ ಸುವ್ವಾಲೆ ಖ್ಯಾತಿಯ ಜೀ ಕನ್ನಡ ವಾಹಿನಿಯ ಹೇಮಿ ಜೀ ಹಾಗೂ ಪ್ರೇಮಿ ಜೀ ಅವರು ಗಾಯಕಿ ದಿವ್ಯಾ ಜೊತೆಗೂಡಿ ಬೃಂದಾವನ ಚಿತ್ರದ ನಾನು ಕನ್ನಡಿಗ ಕನ್ನಡದ ಕಾವಲಿಗ ಹಾಡಿನ ಮೂಲಕ ವೇದಿಕೆಗೆ ಆಗಮಿಸಿದರು. ಸೋಲಿಲ್ಲದ ಸರದಾರ ಚಿತ್ರದ ಕನ್ನಡ ಮಣ್ಣನ್ನು ಮರಿಬೇಡ ಓ ಅಭಿಮಾನಿ... ಈ ಮಣ್ಣಿನ ಹೆಣ್ಣನ್ನು ಮರಿಬೇಡ ಓ ಅಭಿಮಾನಿ... ಹಾಡಿನ ಮೂಲಕ ಕನ್ನಡದ ಪರಂಪರೆಯನ್ನು ಸಾರಿದರು.

ಕಾರ್ಯಕ್ರಮದ ಕೊನೆಯದಾಗಿ ಸರಿಗಮಪ ಖ್ಯಾತಿಯ ಗಾಯಕ ಜಸ್ ಕರಣ್ ಸಿಂಗ್ ಹಸಿರು ಟೋಪಿ, ಬೂದಿ ಬಣ್ಣದ ಧರಿಸಿ ವೇದಿಕೆಗೆಬರುತ್ತಿದ್ದಂತೆ ಜನರು ಹುಚ್ಚೆದ್ದು ಕುಣಿದರು. ದೇಶದೆಲ್ಲೆಡೆ ಹೆಸರು ಮಾಡಿರುವ ದ್ವಾಪರ ದಾಟುತಾ ಹಾಡು ಹಾಡುತ್ತಿದ್ದಂತೆ ಜನತೆ ಉತ್ಸುಕರಾಗಿ ಕುಣಿದು ಕುಪ್ಪಳಿಸಿದರು.

ಗಮನ ಸೆಳೆದ ಪಾರಂಪರಿಕ ನಡಿಗೆ

ಚಾಮರಾಜನಗರ, ಅ.9–ನಗರದಲ್ಲಿ ಬುಧವಾರ ಆಯೋಜಿಸಿದ್ದ ದಸರಾ ಪಾರಂಪರಿಕ ನಡಿಗೆ ನಾಗರಿಕರ ಗಮನ ಸೆಳೆಯಿತು.

ಚಾಮರಾಜೇಶ್ವರ ದೇವಾಲಯ ಮುಂಭಾಗ ಪಾರಂಪರಿಕ ನಡಿಗೆಗೆ ಹಸಿರು ನಿಶಾನೆ ಮೂಲಕ ಚಾಲನೆ ನೀಡಿದ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ ಮಾತನಾಡಿ, ಚಾಮರಾಜನಗರ ಜಿಲ್ಲಾ ದಸರಾ ಮಹೋತ್ಸವ ಅಂಗವಾಗಿ ಮೂರು ದಿನ ಏರ್ಪಡಿಸಿದ್ದ ಹಲವು ವಿಶೇಷ, ವಿಭಿನ್ನ ಕಾರ್ಯಕ್ರಮಗಳ ಪೈಕಿ ದಸರಾ ಪಾರಂಪರಿಕ ನಡಿಗೆ ಸಹ ಒಂದಾಗಿದೆ. ಜಿಲ್ಲೆಯ ಪಾರಂಪರಿಕ ಕಟ್ಟಡ, ದೇವಾಲಯಗಳ ಬಗ್ಗೆ ಜಾಗೃತಿ ಮೂಡಿಸುವುದೇ ಪಾರಂಪರಿಕ ನಡಿಗೆಯ ಉದ್ದೇಶವಾಗಿದೆ. ಇದರಿಂದ ಸಂಸ್ಕೃತಿ ಪಸರಿಸುವಿಕೆ ಸಾಧ್ಯವಾಗಲಿದೆ ಎಂದರು.



ಪಾರಂಪರಿಕ ನಡಿಗೆಗೆ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ ಚಾಲನೆ ನೀಡಿದರು.

ಚಾಮರಾಜನಗರದಲ್ಲಿ ಹಲವಾರು ಪಾರಂಪರಿಕ ಕಟ್ಟಡ, ದೇವಾಲಯಗಳಿವೆ. ನಗರದ ಹೃದಯ ಭಾಗದ ಮಹಾರಾಜರು ಹುಟ್ಟಿದ ಜನನ ಮಂಟಪ, ಚಾಮರಾಜೇಶ್ವರ ದೇವಾಲಯ, ಹರಳುಕೋಟೆ ಆಂಜನೇಯ ದೇವಸ್ಥಾನ ಇನ್ನಿತರೆ ಪ್ರಮುಖ ಸ್ಥಳಗಳಿವೆ. ಚಾಮರಾಜನಗರವನ್ನು ಮೊದಲು ಅರಿಕುಠಾರ ಎಂದು ಕರೆಯಲಾಗುತ್ತಿತ್ತು. ಚಾಮರಾಜ ಒಡೆಯರ್ ಇಲ್ಲಿ ಜನಿಸಿದ ಬಳಿಕ ಅವರದೇ ಹೆಸರಿನಿಂದ ಚಾಮರಾಜನಗರವೆಂದು ನಾಮಕರಣ ಮಾಡಲಾಯಿತು. ಪಾರಂಪರಿಕ ನಡಿಗೆಗೆ ಮಹತ್ವ ನೀಡಿ ನಮ್ಮ ಪೂರ್ವಜರ ಹಾದಿಯಲ್ಲಿ ಮುನ್ನಡೆಯೋಣ ಎಂದು ತಿಳಿಸಿದರು.

ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಂಜುನಾಥ ಪ್ರಸನ್ನ, ಜಿಲ್ಲಾ ಪರಿಸರ ಅಧಿಕಾರಿ ಉಮಾಶಂಕರ್, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಶಂಕರ್, ನಗರಸಭೆ ಹಿರಿಯ ಆರೋಗ್ಯ ನಿರೀಕ್ಷಕರಾದ ಮಂಜುನಾಥ್, ನಾರಾಯಣ್, ದೈಹಿಕ ಶಿಕ್ಷಣ ಶಿಕ್ಷಕರಾದ ಚಿಕ್ಕಬಸವಯ್ಯ, ಶಿವಮಲ್ಲು ಇತರರು ಇದ್ದರು.

ಪಾರಂಪರಿಕ ನಡಿಗೆ ಚಾಮರಾಜೇಶ್ವರ ದೇವಾಲಯದಿಂದ ಆರಂಭವಾಗಿ ನಗರದ ಜನನ ಮಂಟಪ, ವೀರಭದ್ರೇಶ್ವರ ದೇವಸ್ಥಾನ, ಜೈನರ ಬೀದಿ, ಕೊಳದ ಗಣಪತಿ, ಕೆಎಸ್‌ಆರ್ ಟಿಸಿ ಬಸ್ ನಿಲ್ದಾಣ, ಪಚ್ಚಪ್ಪ ವೃತ್ತದ ಮೂಲಕ ಮತ್ತೆ ಚಾಮರಾಜೇಶ್ವರ ದೇವಾಲಯದಲ್ಲಿ ಅಂತ್ಯಗೊಂಡಿತು.

ಅ.11, 12ರಂದು ದಸರಾ ಡ್ರೋನ್ ಶೋ: ಮೈಸೂರಲ್ಲಿ ಅನಧಿಕೃತವಾಗಿ ಡ್ರೋನ್ ವಿಡಿಯೋ ನಿಷೇಧ

● ಮೈಸೂರು ನಗರದ ವಿದ್ಯುತ್ ದೀಪಾಲಂಕಾರದ ಡ್ರೋನ್ ಶೂಟಿಂಗ್‌ಗೂ ನಿರ್ಬಂಧ ● ನಿಯಮ ಉಲ್ಲಂಘಿಸುವವರ ವಿರುದ್ಧ ಸೆಸ್ಕ್‌ನಿಂದ ಸೈಬರ್ ಕ್ರೈಂ ಪ್ರಕರಣ ದಾಖಲಿಸುವ ಎಚ್ಚರಿಕೆ



ಮೈಸೂರು, ಅ. 9(ಆರ್‌ಕೆ)- ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ನಡೆದ ಡ್ರೋನ್ ಪ್ರದರ್ಶನ ಖಾಸಗಿ ವ್ಯಕ್ತಿಗಳು ವಿಡಿಯೋ ಮಾಡಿ ಅದನ್ನು ತಮ್ಮ ಖಾಸಗಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವುದಕ್ಕೆ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಚೆಸ್ಕಾಂ) ಆಕ್ಷೇಪ ವ್ಯಕ್ತಪಡಿಸಿದೆ.

ಈ ರೀತಿಯ ಡ್ರೋನ್ ಪ್ರದರ್ಶನದ ಚಿತ್ರ ಸೆರೆ ಹಿಡಿದು ತಮ್ಮ ಖಾಸಗಿ ಫೇಸ್ ಬುಕ್ ಅಕೌಂಟ್‌ನಲ್ಲಿ ಪ್ರದರ್ಶಿಸುವುದನ್ನು ನಿಷೇಧಿಸಿರುವ ನಿಗಮವು, ಅಕ್ಟೋಬರ್ 6 ಮತ್ತು 7ರಂದು ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಡ್ರೋನ್ ಚಿತ್ತಾರ ಪ್ರದರ್ಶನವನ್ನು ವಿಡಿಯೋ ಚಿತ್ರೀಕರಣ ಮಾಡಿ ತಮ್ಮ ಫೇಸ್‌ಬುಕ್ ಅಕೌಂಟ್‌ನಲ್ಲಿ ಹರಿಬಿಟ್ಟಿರುವುದು ಕಾಪಿ ರೈಟಿಂಗ್ ಕಾಯ್ದೆ ಉಲ್ಲಂಘನೆಯಾಗಿದೆ ಎಂದು ಸೆಸ್ಕ್ ಅಧಿಕಾರಿಗಳು ತಿಳಿಸಿದ್ದಾರೆ.

ವಿಶ್ವ ವಿಖ್ಯಾತ ದಸರಾ ಮಹೋತ್ಸವದ ಅಂಗವಾಗಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ವತಿಯಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಬೃಹತ್ ಡ್ರೋನ್ ಪ್ರದರ್ಶನ ಯಶಸ್ವಿಯಾಗಿದ್ದು, ಅಪಾರ ನೋಡುಗರ ಮೆಚ್ಚುಗೆಗೆ ಪಾತ್ರವಾಗಿದೆ. ಆದರೆ, ಆ ವೇಳೆ ಕೆಲವು ಖಾಸಗಿ ವ್ಯಕ್ತಿಗಳು ಹಾಗೂ ಸಂಸ್ಥೆಗಳು ಡ್ರೋನ್‌ಗಳನ್ನು ಹಾರಿಸಿ ಡ್ರೋನ್ ಪ್ರದರ್ಶನದ ದೃಶ್ಯಾವಳಿಗಳನ್ನು ಸೆರೆ ಹಿಡಿದಿರುವುದು ಹಾಗೂ ಹೀಗೆ ಸೆರೆ ಹಿಡಿದ ದೃಶ್ಯಗಳ ತುಣುಕುಗಳನ್ನು ಸಾಮಾಜಿಕ ಜಾಲತಾಣಗಳ ಮೂಲಕ ಹರಿಬಿಡುತ್ತಿರುವುದು ಕಂಡುಬಂದಿದೆ ಎಂದು ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.

ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯದೇ ಡ್ರೋನ್ ಹಾರಿಸಿ ಅಕ್ಟೋಬರ್ 11 ಮತ್ತು 12ರಂದು ಸೆಸ್ಕ್ ನಡೆಸಿದ ಡ್ರೋನ್ ಪ್ರದರ್ಶನದ ದೃಶ್ಯಗಳನ್ನು ಚಿತ್ರೀಕರಿಸಿ ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟರುವವರ ವಿರುದ್ಧ ಪ್ರಕರಣ ದಾಖಲಿಸಿ ಅಗತ್ಯ ಕಾನೂನು ಕ್ರಮ ಕೈಗೊಳ್ಳಲು ಸೆಸ್ಕ್ ನಿರ್ಧರಿಸಿದೆ.

ಈಗಾಗಲೇ ಯಾರೆಲ್ಲಾ ಅನಧಿಕೃತವಾಗಿ ಡ್ರೋನ್ ಪ್ರದರ್ಶನ ಚಿತ್ರೀಕರಿಸಿದ್ದಾರೋ ಅವರ ವಿರುದ್ಧ ಪ್ರಕರಣ ದಾಖಲಿಸಲಾಗುವುದು. ಕೇವಲ ಡ್ರೋನ್ ಪ್ರದರ್ಶನ ಮಾತ್ರವಲ್ಲದೇ, ದಸರಾ ಅಂಗವಾಗಿ ಮೈಸೂರು ನಗರದಾದ್ಯಂತ ಸೆಸ್ಕ್ ವತಿಯಿಂದ ಮಾಡಲಾಗಿರುವ ವಿದ್ಯುತ್ ದೀಪಾಲಂಕಾರದ ದೃಶ್ಯಗಳನ್ನು ಸಹ ಡ್ರೋನ್ ಮೂಲಕ ಅನಧಿಕೃತವಾಗಿ ಚಿತ್ರೀಕರಿಸಿರುವುದೂ ಅಪರಾಧವಾಗಿರುವುದರಿಂದ ಮುಂದೆ ಇಂತಹ ಚಿತ್ರೀಕರಣ ಮಾಡದಂತೆ ಸೆಸ್ಕ್ ಎಚ್ಚರಿಕೆ ನೀಡಿದೆ.

ನವರಾತ್ರಿ ಸಂಭ್ರಮ



ನವರಾತ್ರಿಯ ಆರನೇ ದಿನವಾದ ಮಂಗಳವಾರ ಕಾತ್ಯಾಯನಿ ದೇವಿಗೆ ಭಕ್ತಿ ಸಮರ್ಪಣೆ ಸೂಚ್ಯಕವಾಗಿ ಹಿರಿಯ ಸಹಕಾರಿ ಸುಶೀಲಾ ನಂಜಪ್ಪ ಹಾಗೂ ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್‌ನ ಸಿಬ್ಬಂದಿ ಕೆಂಪು ಉಡುಪು ಧರಿಸಿ, ದೇವಿಯನ್ನು ಸ್ಮರಿಸಿಕೊಂಡರು.

ಪುಸ್ತಕ ಮೇಳ ದಸರಾ ಉತ್ಸವಕ್ಕೆ ಆತ್ಮವಿದ್ದಂತೆ

ಲೇಖಕಿಯರ ಸಂಘದ ರಾಜ್ಯಾಧ್ಯಕ್ಷೆ ಡಾ.ಎಚ್.ಎಲ್.ಪುಷ್ಪ ಅಭಿಮತ



'ಸೆಲ್ಫಿ ವಿತ್ ಸಾಹಿತಿ' ದಸರಾ ಪುಸ್ತಕ ಮೇಳದಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರದ ಮಳಿಗೆಗೆ ಲೇಖಕಿ ಡಾ.ಎಚ್.ಎಲ್.ಪುಷ್ಪ ಸೇರಿದಂತೆ ಇತರೆ ಸದಸ್ಯರು ಭೇಟಿ ನೀಡಿ, ಸೆಲ್ಫಿಗೆ ಪೋಸ್ ನೀಡಿದ ದೃಶ್ಯ.

ಮೈಸೂರು, ಅ.9(ಎಸ್‌ಪಿಎನ್)- ದಸರಾ ಪುಸ್ತಕ ಮೇಳ ಮೈಸೂರು ದಸರಾ ಉತ್ಸವಕ್ಕೆ ಆತ್ಮವಿದ್ದಂತೆ ಎಂದು ಕರ್ನಾಟಕ ಲೇಖಕಿಯರ ಸಂಘದ ರಾಜ್ಯಾಧ್ಯಕ್ಷೆ ಡಾ.ಎಚ್.ಎಲ್.ಪುಷ್ಪ ಅಭಿಪ್ರಾಯಪಟ್ಟರು. ಮೈಸೂರು ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ದಸರಾ ಪುಸ್ತಕ ಮೇಳ ಉಪಸಮಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಸಹಯೋಗದೊಂದಿಗೆ ಆಯೋಜಿಸಿದ್ದ 'ಸೆಲ್ಫಿ ವಿತ್ ಸಾಹಿತಿ' ದಸರಾ ಪುಸ್ತಕ ಮೇಳದ ರಿಯಾಯಿತಿ ಮಾರಾಟ ಮೇಳದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಕಲೆ, ಸಾಹಿತ್ಯ, ನಾಟಕಕ್ಕೆ ಪುಸ್ತಕಗಳು ಸೇತುವೆ ಇದ್ದಂತೆ. ಒಂದಕ್ಕೊಂದು ಸಂಬಂಧವಿದೆ. ಇತ್ತೀಚಿನ ದಿನಗಳಲ್ಲಿ ಆನ್‌ಲೈನ್ ಓದು, ಇ-ಬುಕ್, ಇ-ಬ್ಲಾಗ್ ಸೇರಿದಂತೆ ಇತರೆ ತಂತ್ರಜ್ಞಾನ ವ್ಯವಸ್ಥೆಯಿಂದ ಓದಿನ ಸ್ವರೂಪ ಬದಲಾಗಿದೆ. ಇದರ ನಡುವೆ ಪ್ರಕಾಶಕರ ಸ್ಥಿತಿ-ಗತಿಗಳೇನು ಎಂಬುದರ ಬಗ್ಗೆ ಚರ್ಚೆಯ ಅಗತ್ಯವಿದೆ ಎಂದರು. ದಸರಾ ಪುಸ್ತಕ ಮೇಳದಲ್ಲಿ ಎಲ್ಲಾ ಪ್ರಕಾಶಕರ ಮಳಿಗೆಗಳಿವೆ. ಇಲ್ಲಿ ಎಲ್ಲಾ ರೀತಿಯ ಪುಸ್ತಕಗಳು ಓದುಗನಿಗೆ ಸಿಗುತ್ತಿವೆ. ದಸರಾ ಉತ್ಸವಕ್ಕೆ ದಸರಾ ಪುಸ್ತಕ ಮೇಳ ಆತ್ಮವಿದ್ದಂತೆ ಎಂದ ಅವರು, ದಸರಾ ಪುಸ್ತಕ ಮೇಳಕ್ಕೆ ಎಲ್ಲಾ ಜನರು ಬಂದು ಇಲ್ಲಿನ ಪುಸ್ತಕಗಳ ಜ್ಞಾನವನ್ನು ತಮ್ಮದಾಗಿಸಿಕೊಳ್ಳುವಂತೆ ಮನವಿ ಮಾಡಿದರು. ಸಮಾಜದಲ್ಲಿ ಅಂತರ್‌ಮುಖಿ, ಬಹಿರ್ಮುಖಿ ವ್ಯಕ್ತಿತ್ವದವರಿದ್ದಾರೆ.



ಚಿತ್ರಕಲಾವಿದರಿಂದ ಚಿತ್ರ ಪ್ರಾತ್ಯಕ್ಷಿಕೆ

ಬಹಿರ್ಮುಖಿ ವ್ಯಕ್ತಿತ್ವದವರು ಹೆಚ್ಚು ಸಮಾಜದ ನಡುವೆ ಬೆರೆಯುತ್ತಾರೆ. ಅಂತರ್ಮುಖಿ ವ್ಯಕ್ತಿತ್ವದವರು, ಒಂಟಿತನ ಬಯಸಿ ಪುಸ್ತಕಗಳ ಓದಿಗೆ ಮೊರೆ ಹೋಗುತ್ತಾರೆ ಎಂದರು. ನಂತರ ಸೆಲ್ಫಿ ವಿತ್ ಸಾಹಿತಿ' ದಸರಾ ಪುಸ್ತಕ ಮೇಳದಲ್ಲಿ ಹಿರಿಯ ಸಾಹಿತಿ ಡಾ.ಎಚ್.ಎಲ್. ಪುಷ್ಪ ಅವರು ವಿವಿಧ ಮಳಿಗೆಗಳಿಗೆ ಭೇಟಿ ನೀಡಿ, ತಮಗಿಷ್ಟದ ಕೆಲ ಪುಸ್ತಕಗಳನ್ನು ಖರೀದಿಸಿದರು. ಇವರೊಂದಿಗೆ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ಸದಸ್ಯರಾದ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಎಂ.ಚಂದ್ರಶೇಖರ್, ಯು.ಎಸ್.ಮಹೇಶ್, ಡಾ.ಸಿ.ಡಿ.ಪರಶುರಾಮ್, ಸಾತನೂರು ದೇವರಾಜ್, ಅಭಿರುಚಿ ಗಣೇಶ್, ಸುಚಿತ್ರ ಹೆಗಡೆ, ಬೆಟ್ಟಸ್ವಾಮಿ, ಪ್ರಕಾಶಕ ನಿಂಗರಾಜು ಚಿತ್ತಣ್ಣವರ್ ಸೇರಿದಂತೆ ಇತರರಿದ್ದರು. ನಂತರ ಚಿತ್ರಕಲಾವಿದರಿಂದ ಚಿತ್ರ ರಚನೆಯ ಪ್ರಾತ್ಯಕ್ಷಿಕೆ ನಡೆಯಿತು.

ಉರ್ದು ಕವಿ ಇಮ್ರಾನ್ ಪ್ರತಾಪ್‌ಗರ್ಹಿಗೆ ಅಭಿನಂದನೆ



ಮೈಸೂರಿನ ದಸರಾ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಮಂಗಳವಾರ ನಡೆದ ಉರ್ದು ಕವಿಗೋಷ್ಠಿಯಲ್ಲಿ ಭಾಗವಹಿಸಿದ್ದ ಖ್ಯಾತ ಅಂತರರಾಷ್ಟ್ರೀಯ ಉರ್ದು ಕವಿ ಹಾಗೂ ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯ ಇಮ್ರಾನ್, ಪ್ರತಾಪ್‌ಗರ್ಹಿ ಅವರು ಬುಧವಾರ ಮಾಜಿ ಕಾರ್ಪೋರೇಟರ್ ಸುಹೇಲ್ ಬೇಗ್ ಅವರ ನಿವಾಸಕ್ಕೆ ಬಂದಾಗ ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಜಿಲ್ಲಾ ವಕ್ಫ್ ಸಲಹಾ ಸಮಿತಿ ಅಧ್ಯಕ್ಷ ಗಯಾಜ್ ಅಹಮದ್ ಅಕ್ರಂ, ಮಾಜಿ ಕಾರ್ಪೋರೇಟರ್ ನಜೀರುದ್ದೀನ್ ಬಾಬು, ಕೆಪಿಸಿಸಿ ಅಲ್ಪಸಂಖ್ಯಾತ ವಿಭಾಗದ ಸಹಕಾರ್ಯದರ್ಶಿ ಸಯ್ಯದ್ ಫಾರೂಖ್, ಜುಬೀರ್ ಅಹಮದ್ ಇನ್ನಿತರರಿದ್ದರು.

ಕೋಟ್ಯಾಂತರ ರೂ. ಬಾಕಿ ಉಳಿಸಿಕೊಂಡಿರುವ ಪುರಸಭಾ ಮಳಿಗೆಗಳಿಗೆ ಬೀಗ

● ತಿ.ನರಸೀಪುರ ಸಾಮಾನ್ಯ ಸಭೆಯಲ್ಲಿ ನಿರ್ಧಾರ ● ಆಸ್ತಿ, ನೀರಿನ ತೆರಿಗೆ ಪರಿಷ್ಕರಣೆಗೆ ವಿರೋಧ ● ಹೆಚ್ಚುವರಿ ವಕೀಲರ ನೇಮಕಕ್ಕೆ ಸಮ್ಮತಿ

ತಿ.ನರಸೀಪುರ, ಅ.9– ಕೋಟ್ಯಾಂತರ ರೂ. ಬಾಡಿಗೆಯನ್ನು ಬಾಕಿ ಉಳಿಸಿಕೊಂಡಿರುವ ಪುರಸಭಾ ಮಳಿಗೆಗಳಿಗೆ ಬೀಗ ಜಡಿದು, ಬಾಡಿಗೆ ವಸೂಲಿ ಮಾಡಲು ಇಂದು ನಡೆದ ಪುರಸಭಾ ಸಾಮಾನ್ಯ ಸಭೆಯಲ್ಲಿ ನಿರ್ಧರಿಸಲಾಯಿತು.

ಅಧ್ಯಕ್ಷೆ ವಸಂತ ಶ್ರೀಕಂಠ ಅವರ ಅಧ್ಯಕ್ಷತೆಯಲ್ಲಿ ಬುಧವಾರ ಪುರಸಭೆ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಪುರಸಭೆಯಿಂದ ನಿರ್ಮಿಸಲಾಗಿರುವ ಮಳಿಗೆ ಬಾಡಿಗೆ ವಸೂಲಾತಿ ಕುರಿತ ವಿಷಯ ಚರ್ಚೆಗೆ ಬಂತು. ಮುಖ್ಯಾಧಿಕಾರಿ ಬಿ.ಕೆ.ವಸಂತ ಕುಮಾರಿ ಈ ಬಗ್ಗೆ ವಿವರ ನೀಡಿ ಬಾಡಿಗೆ ಪಾವತಿ ಮಾಡದ ಮಳಿಗೆಗಳ ವಿದ್ಯುತ್ ಕಡಿತ ಗೊಳಿಸಿದ್ದರೂ ಬಾಡಿಗೆ ಕಟ್ಟುತ್ತಿಲ್ಲ, ಸುಮಾರು 2 ರಿಂದ 3 ಕೋಟಿ ರೂ.ಗಳ ಪೈಕಿ 3 ಲಕ್ಷ ರೂ. ಮಾತ್ರ ಬಾಡಿಗೆ ವಸೂಲಾತಿಯಾಗಿದೆ ಎಂದು ತಿಳಿಸಿದರು.

ಈ ವೇಳೆ ಪುರಸಭಾ ಮಳಿಗೆಗಳು ಬೀಗ ಹಾಕಿ ವಿಶೇಷ ಸಭೆ ಕರೆದು ಮುಂದಿನ ಕ್ರಮ ಕೈಗೊಳ್ಳುವಂತೆ ನಿಕಟಪೂರ್ವ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ ಸಲಹೆ ನೀಡಲಾಗಿ ಸರ್ವ ಸದಸ್ಯರು ಸಮ್ಮತಿ ಸೂಚಿಸಿದರು.

ನಂತರ ಜನನ– ಮರಣ ನೋಂದಣಿಗೆ ಸಂಬಂಧಿಸಿದ ವಿಷಯ ಮಂಡಿಸಿದ ಆರೋಗ್ಯಾಧಿಕಾರಿ ಮಧು, ಪ್ರಸಕ್ತ ಸಾಲಿನಲ್ಲಿ 52 ಪ್ರಕರಣ ನೋಂದಣಿಯಾಗಿವೆ ಎಂದು ಮುಖ್ಯಾಧಿಕಾರಿ ತಿಳಿಸಿದರು.

ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿ ಲೇಔಟ್ ನಿರ್ಮಾಣ ಮಾಡಲು ಟೌನ್ ಪ್ಲಾನಿಂಗ್ ಕಡ್ಡಾಯವಾಗಿ ಇರಬೇಕೆಂದು ಸರ್ಕಾರದಿಂದ ಸುತ್ತೋಲೆ ಬಂದಿದ್ದು, ಅದರ ನಿಯಮ ಪಾಲಿಸಬೇಕಾಗುತ್ತದೆ. ಕಳೆದ ತಿಂಗಳು ಲೇಔಟ್ ನಿರ್ಮಾಣ ಮಾಡಲು ಬಂದಿರುವ ಅರ್ಜಿಗಳನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಸದಸ್ಯರು ಮನವಿ ಮಾಡಿದರು.

ಆ ನಂತರ ತಾಲೂಕು ಮತ್ತು ಜಿಲ್ಲಾ ಹಂತದ ನ್ಯಾಯಾಲಯಗಳ ಪ್ರಕರಣಗಳನ್ನು ನಿರ್ವಹಿಸಲು ಹೆಚ್ಚುವರಿಯಾಗಿ ವಕೀಲರನ್ನು ನೇಮಿಸಿಕೊಳ್ಳುವ ವಿಚಾರಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಯಿತು. ತಿ.ನರಸೀಪುರ ನ್ಯಾಯಾಲಯದಲ್ಲಿ 23 ಹಾಗೂ ಬೆಂಗಳೂರಿನಲ್ಲಿ 8 ಕೇಸ್‌ಗಳಿವೆ. ಹಾಗಾಗಿ ಹೆಚ್ಚುವರಿ ವಕೀಲರ ಅವಶ್ಯಕತೆ ಇದೆ ಎಂಬ ಅಭಿಪ್ರಾಯ ಕೇಳಿ ಬಂದ ಹಿನ್ನೆಲೆಯಲ್ಲಿ ಅವಶ್ಯಕತೆ ಇದ್ದರೆ ಪತ್ರಿಕೆಯಲ್ಲಿ ನೋಟಿಫಿಕೇಷನ್ ನೀಡಿ ನೇಮಕ ಮಾಡಿಕೊಳ್ಳುವಂತೆ ಸದಸ್ಯರು ಸೂಚಿಸಿದರು. ಈ ಮಧ್ಯೆ ಸದಸ್ಯ ಅರ್ಜುನ್ ರಮೇಶ್ ಮಾತನಾಡಿ, ಸದಸ್ಯರ ಸಂಬಂಧಿಕರನ್ನು ನೇಮಕ ಮಾಡಿಕೊಳ್ಳುವುದು ಬೇಡ ಎಂದು ಸಲಹೆ ನೀಡಿದರು.

ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆಯಂತೆ ಆಸ್ತಿ ತೆರಿಗೆ ಮತ್ತು ನೀರಿನ ಶುಲ್ಕವನ್ನು ಪರಿಷ್ಕರಿಸಲಾಗಿದ್ದು ಅನುಮೋದನೆ ನೀಡುವ ಬಗ್ಗೆ ಚರ್ಚೆ ನಡೆಯಿತು. ಆದರೆ ಬಹುತೇಕ ಎಲ್ಲ ಸದಸ್ಯರು ಸಾರ್ವಜನಿಕರಿಗೆ ಹೊರೆಯಾಗಿರುವ ಆಸ್ತಿ ತೆರಿಗೆ ಪರಿಷ್ಕರಣೆಗೆ ಅನುಮೋದನೆ ನೀಡುವ ನಿರ್ಧಾರದಿಂದ ಹಿಂದೆ ಸರಿದರು.

ಸದಸ್ಯ ಸಿ.ಪ್ರಕಾಶ್, ನಂಜುಂಡಸ್ವಾಮಿ, ಸೋಮು ಈ ಹಿಂದೆ ಇದ್ದ ಆಸ್ತಿ ತೆರಿಗೆಗಿಂತ ಮೂರು ಪಟ್ಟು ಹೆಚ್ಚಳ ಮಾಡಲಾಗಿದೆ. ಇದರಿಂದ ಸಾರ್ವಜನಿಕರಿಗೆ ತೀವ್ರ ಹೊರೆಯಾಗಿದೆ. ಪುರಸಭೆ ಅಧಿಕಾರಿಗಳು 2 ಕೋಟಿ ತೆರಿಗೆ ಸಂಗ್ರಹ ಮಾಡುವ ಗುರಿ ಹೊಂದಿದ್ದಾರೆ. ಹಾಗೆಂದ ಮಾತ್ರಕ್ಕೆ ಅದನ್ನು ಸಾರ್ವಜನಿಕರ ಮೇಲೆ ಹೊರಿಸುವುದು ಸೂಕ್ತವಲ್ಲ. ಹಾಗಾಗಿ ಇದಕ್ಕೆ ನಮ್ಮ ಸಂಪೂರ್ಣ ವಿರೋಧವಿದೆ ಎಂದು ತಿಳಿಸಿದರು. ಸದಸ್ಯರ ವಿರೋಧಕ್ಕೆ ಮನ್ನಣೆ ನೀಡಿದ ಮುಖ್ಯಾಧಿಕಾರಿ ಬಿ.ಕೆ.ವಸಂತ ಕುಮಾರಿ ಈ ಸಂಬಂಧ ಸರ್ಕಾರಕ್ಕೆ ಪತ್ರ ಬರೆಯಲಾಗುತ್ತದೆ ಎಂದರು.

ಬೀದಿ ಬದಿ ವ್ಯಾಪಾರಿಗಳ ತೆರವೇಕೆ: ಪುರಸಭೆ ಸದಸ್ಯರೊಂದಿಗೆ ಚರ್ಚಿಸದೇ ಬೀದಿ ಬದಿ ವ್ಯಾಪಾರಿಗಳನ್ನು ಪೊಲೀಸರೊಂದಿಗೆ ಸೇರಿ ತೆರವುಗೊಳಿಸಿದ್ದೇಕೆ ಎಂದು ಮಾಜಿ ಅಧ್ಯಕ್ಷ ಮದನ್ ರಾಜ್ ಅಧಿಕಾರಿಗಳ ನಡೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಬೀದಿ ಬದಿ ವ್ಯಾಪಾರ ಎಲ್ಲ ಕಡೆಯೂ ಇದೆ. ಜನಪ್ರತಿನಿಧಿಗಳಾದ ನಮ್ಮ ಮಾತಿಗೂ ಮನ್ನಣೆ ನೀಡಿಲ್ಲ ಎಂದು ಆರೋಪಿಸಿದರು. ಆದರೆ ಮದನ್ ರಾಜ್ ಅವರ ಆರೋಪಕ್ಕೆ ಯಾರೂ ಉತ್ತರಿಸದೇ ಮೌನ ವಹಿಸಿದ್ದು ಯಾಕೆಂದು ಗೊತ್ತಾಗಲಿಲ್ಲ.

ಸದಸ್ಯರ ಗಮನಕ್ಕೆ ತಂದು ಬಿಲ್ ಮಾಡಿ: ಸರ್ಕಾರಿ ಬಿಲ್ ಮಾಡುವ ವೇಳೆ ಅಧಿಕಾರಿಗಳು ಸದಸ್ಯರ ಗಮನಕ್ಕೆ ತರುತ್ತಿಲ್ಲ ಎಂದು ಸದಸ್ಯ ಅರ್ಜುನ್ ಆರೋಪಿಸಿದರು. ಪುರಸಭೆಯಲ್ಲಿ ಯಾವುದೇ ಬಿಲ್ ಆಗಬೇಕಾದರೆ ಆಯಾಯ ವಾರ್ಡ್ ಸದಸ್ಯರ ಗಮನಕ್ಕೆ ತರಬೇಕಾಗುತ್ತದೆ. ಆದರೆ ಇಲ್ಲಿ ಅಧಿಕಾರಿಗಳು ತಮಗಿಷ್ಟ ಬಂದಂತೆ ಬಿಲ್ ಮಾಡಿಕೊಳ್ಳುತ್ತಿದ್ದಾರೆ ಎಂದು ಕಿಡಿಕಾರಿದರು.ಇದಕ್ಕುತ್ತರಿಸಿದ ಇಂಜಿನಿಯರ್ ಸಿದ್ದಪ್ಪ ಮುಂದೆ ಸದಸ್ಯರ ಗಮನಕ್ಕೆ ತರಲಾಗುತ್ತದೆ ಎಂದರು.

ಮಾಜಿ ಅಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ, ಎನ್ ಸೋಮು, ಎಸ್. ಮದನ್ ರಾಜ್, ಸದಸ್ಯರಾದ ಸಿ. ಪ್ರಕಾಶ್, ಅರ್ಜುನ್, ಎಲ್. ಮಂಜುನಾಥ್, ಬಾದಾಮಿ ಮಂಜು, ಸೈಯದ್ ಅಹಮದ್, ಮೆಡಿಕಲ್ ನಾಗರಾಜು, ಎಸ್.ಕೆ.ಕಿರಣ್, ಸಿಸ್ಟಮ್ ಸಿದ್ದು, ಪ್ರೇಮ ಮರಯ್ಯ, ರೂಪಾ ಕರಿಯಪ್ಪ, ಮಹದೇವಮ್ಮ, ಶೋಭ ರಾಣಿ, ಬೇಬಿ ಹೇಮಂತ್, ಮಹದೇವಿ, ರೂಪಾ ಪರಮೇಶ್, ಮುಖ್ಯಾಧಿಕಾರಿ ಬಿ.ಕೆ.ವಸಂತ ಕುಮಾರಿ, ಕಛೇರಿ ವ್ಯವಸ್ಥಾಪಕ ಮಹೇಂದ್ರ, ಕಿರಿಯ ಅಭಿಯಂತರ ನಾಗರಾಜು, ಕಿರಿಯ ಆರೋಗ್ಯ ನಿರೀಕ್ಷಕ ಮಧು, ಸಮುದಾಯ ಸಂಘಟಕ ಕೆ.ಮಹದೇವ, ದ್ವಿತೀಯ ದರ್ಜೆ ಸಹಾಯಕ ರಾಜೇಂದ್ರ, ಕಿರಿಯ ಅಭಿಯಂತರ ಸಿದ್ದಪ್ಪ,ಪ್ರಥಮ ದರ್ಜೆ ಸಹಾಯಕರು ತ್ರಿವೇಣಿ, ಜೂನಿಯರ್ ಪ್ರೋಗ್ರಾಮರ್ ಹರೀಶ್, ಸಿಬ್ಬಂದಿಗಳು ಹಾಜರಿದ್ದರು.



ತಿ.ನರಸೀಪುರ ಪಟ್ಟಣ ಪುರಸಭೆ ಸಭಾಂಗಣದಲ್ಲಿ ಬುಧವಾರ ಪುರಸಭೆ ಅಧ್ಯಕ್ಷೆ ಬಿ.ವಸಂತ ಶ್ರೀಕಂಠರವರ ಅಧ್ಯಕ್ಷತೆಯಲ್ಲಿ ಸಾಮಾನ್ಯ ಸಭೆ ನಡೆಯಿತು.

ಸಭೆ ಬಹಿಷ್ಕರಿಸಿದ ಉಪಾಧ್ಯಕ್ಷೆ ರಾಜೇಶ್ವರಿ ರಾಘವೇಂದ್ರ

ಪುರಸಭೆ ಸಾಮಾನ್ಯ ಸಭೆ ಆರಂಭವಾಗುತ್ತಿದ್ದಂತೆ ಉಪಾಧ್ಯಕ್ಷೆ ರಾಜೇಶ್ವರಿ ರಾಘವೇಂದ್ರ ಆಗಮಿಸಿ ನನ್ನ ಗಮನಕ್ಕೆ ತಾರದೇ ಸಭೆ ನಡೆಸಲಾಗುತ್ತಿದೆ. ಉಪಾಧ್ಯಕ್ಷರಿಗೆ ಬೆಲೆ ಇಲ್ಲವೇ. ಹಾಗಾಗಿ ಇಂದು ನಡೆಯುತ್ತಿರುವ ಸಾಮಾನ್ಯ ಸಭೆಗೆ ನನ್ನ ವಿರೋಧವಿದೆ ಎಂದು ಆರೋಪಿಸಿ ಸಭೆ ಬಹಿಷ್ಕರಿಸಿ, ಸಭಾಂಗಣದಿಂದ ಹೊರ ನಡೆದರು. ಉಪಾಧ್ಯಕ್ಷರ ಸಭೆ ಬಹಿಷ್ಕಾರದ ಬಗ್ಗೆ ಪ್ರತಿಕ್ರಿಯಿಸಿದ ಅಧ್ಯಕ್ಷೆ ವಸಂತ ಶ್ರೀಕಂಠ ಹಾಗೂ ಮುಖ್ಯಾಧಿಕಾರಿ ಬಿ.ಕೆ.ವಸಂತಕುಮಾರಿ, ಇಂದು ಸಭೆ ಇರುವ ಬಗ್ಗೆ ಉಪಾಧ್ಯಕ್ಷರ ಮನೆಗೆ ತೆರಳಿ ನೋಟೀಸ್ ಮೂಲಕ ಮಾಹಿತಿ ನೀಡಲಾಗಿದೆ. ಅವರು ನೋಟೀಸ್ ಪಡೆದು ಸಹಿ ಕೂಡ ಮಾಡಿದ್ದಾರೆ ಆದರೆ ಅವರು ಯಾಕೆ ಸಭೆ ಬಹಿಷ್ಕಾರ ಮಾಡಿದರೋ ಎಂಬುದು ನಮಗೆ ಗೊತ್ತಿಲ್ಲ ಎಂದು ತಿಳಿಸಿದರು.

ಸೆಂಟ್ ಮೇರಿಸ್ ಕಾನ್ವೆಂಟ್ ರಸ್ತೆ ದುರಸ್ತಿ ಮಾಡಿ

ಸೆಂಟ್ ಮೇರಿಸ್ ಆಂಗ್ಲ ಶಾಲೆಗೆ ಸಂಪರ್ಕ ಕಲ್ಪಿಸುವ ರಸ್ತೆ ತೀವ್ರ ಹದಗೆಟ್ಟಿದೆ. ಕಳೆದ 5 ವರ್ಷಗಳಿಂದಲೂ ದುರಸ್ತಿ ಮಾಡಿಸುವಂತೆ ತಾವೂ ಸೇರಿದಂತೆ ಶಾಲೆಯ ಮುಖ್ಯಸ್ಥರು ಹಾಗೂ ಸಾರ್ವಜನಿಕರು ಒತ್ತಾಯಿಸುತ್ತಿದ್ದಾರೆ. ಆದರೆ ಈ ಬಗ್ಗೆ ಯಾರೂ ಗಮನಹರಿಸುತ್ತಿಲ್ಲ. ರಸ್ತೆ ದುರಸ್ತಿಯಾಗಬೇಕಾದರೆ ಯಾವುದಾದರೂ ಅವಘಡ ಸಂಭವಿಸಬೇಕೆ ಎಂದು ಸದಸ್ಯೆ ರೂಪಾ ಪರಮೇಶ್ ಆಕ್ರೋಶಭರಿತರಾಗಿ ಇಂಜಿನಿಯರ್ ನಾಗರಾಜು ಅವರನ್ನು ತರಾಟೆಗೆ ತೆಗೆದುಕೊಂಡರು. ಇದಕ್ಕೆ ಸದಸ್ಯ ಅರ್ಜುನ್, ಕಿರಣ್, ಮದನ್ ರಾಜ್ ದನಿಗೂಡಿಸಿದರು.ರೂಪಾ ಪರಮೇಶ್ ಆರೋಪಕ್ಕೆ ಪ್ರತಿಕ್ರಿಯಿಸಿದ ಇಂಜಿನಿಯರ್ ನಾಗರಾಜು ಸಂಬಂಧಿಸಿದ ಕಾಮಗಾರಿಗೆ ಟೆಂಡರ್ ಕರೆದು 4 ಕೋಟಿ ರೂ.ಗಳ ಅನುದಾನ ಸಹ ಬಿಡುಗಡೆಯಾಗಿತ್ತು. ಆದರೆ ಗುತ್ತಿಗೆದಾರ ಸಮರ್ಪಕ ಕೆಲಸ ಮಾಡದ ಕಾರಣ ಬಂದ ಅನುದಾನ ವಾಪಸ್ ಆಗಿದೆ. ಈಗ ಪುರಸಭೆ ಅಭಿವೃದ್ಧಿಗೆ 11 ಕೋಟಿ ರೂ.ಬಿಡುಗಡೆಯಾಗಿದ್ದು,ಅದರಲ್ಲಿ 50 ಲಕ್ಷ ರೂ.ಗಳನ್ನು ಸದರಿ ಕಾಮಗಾರಿಗೆ ಬಳಸಿ 2 ತಿಂಗಳಲ್ಲಿ ಕೆಲಸ ಮುಗಿಸಿಕೊಡುತ್ತೇನೆ ಎಂದು ಭರವಸೆ ನೀಡಿದರು.

ಶ್ರೀಕಂಠೇಶ್ವರ ಮುಡಿಕಟ್ಟೆಯಲ್ಲಿ ಅವಕಾಶ ನೀಡದೆ ವಂಚನೆ ಆರೋಪ: ಪ್ರತಿಭಟನೆ

ನಂಜನಗೂಡು, ಅ.9– ನಗರದ ಶ್ರೀಕಂಠೇಶ್ವರ ಸ್ವಾಮಿ ದೇವಾಲಯದಲ್ಲಿ ಭಕ್ತರ ಹರಕೆ ಮುಡಿ ತೆಗೆಯುವ ಮುಡಿಕಟ್ಟೆಯಲ್ಲಿ ಬುಧವಾರ ನನಗೆ ಮುಡಿ ತೆಗೆಯುವ ಕೆಲಸಕ್ಕೆ ಅವಕಾಶ ನೀಡದೆ ವಂಚಿಸಲಾಗುತ್ತಿದೆ ಎಂದು ಆರೋಪಿಸಿ ನಯನಜ ಕ್ಷತ್ರೀಯ ಸಮಾಜದ ತಾಲೂಕು ಅಧ್ಯಕ್ಷ ಕೃಷ್ಣರಾಜು ಪ್ರತಿಭಟನೆ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಕೃಷ್ಣರಾಜು ನನ್ನ ತಂದೆ ಮುಡಿಕಟ್ಟೆಯಲ್ಲಿ ಭಕ್ತರ ಹರಕೆ ಮುಡಿ ತೆಗೆಯುವ ಕೆಲಸ ಮಾಡುತ್ತಿದ್ದರು. 2009 ರಲ್ಲಿ ನಿಧನರಾದರು, ಅವರ ನಂತರ ನಿಯಮದಂತೆ ಅವರ ಬದಲಾಗಿ ನನಗೆ ಮುಡಿಕಟ್ಟೆಯಲ್ಲಿ ಮುಡಿ ತೆಗೆಯುವ ಕೆಲಸ ನೀಡಬೇಕಾಗಿದ್ದ ಮುಡಿಕಟ್ಟೆ ಸಮಿತಿ ನನಗೆ ಸಲ್ಲದ ನೆಪ ಹೇಳಿ ಕೆಲಸ ನೀಡದೆ ವಂಚನೆ ಮಾಡುತ್ತಿದ್ದಾರೆ. ಈ ಬಗ್ಗೆ ಹಲವಾರು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ ಎಂದು ಆಪಾದಿಸಿದರು.

ಶ್ರೀಕಂಠೇಶ್ವರ ದೇವಾಲಯದ ಭಕ್ತರ ಮುಡಿ ತೆಗೆಯುವ ಹಕ್ಕಿನ ಬಗ್ಗೆ ಮುಡಿಕಟ್ಟೆ ಸಮಿತಿ ಹಾಗೂ ದೇವಾಲಯದ ಮಧ್ಯೆ ನ್ಯಾಯಾಲಯದಲ್ಲಿ ವಾಜ್ಯ ನಡೆಯುತ್ತಿದ್ದು, ನ್ಯಾಯಾಲಯದಲ್ಲಿ 150 ಕುಟುಂಬಗಳು ಮುಡಿ ತೆಗೆಯುವ ಕೆಲಸದಿಂದ ಜೀವನ ಸಾಗಿಸುತ್ತಿದ್ದೇವೆ ಎಂದು ಮನವಿ ಮಾಡಿರುವ ಸಮಿತಿಯವರು ಕೇವಲ 85 ಮಂದಿಗೆ ಮಾತ್ರ ಅವಕಾಶ ನೀಡಿ, ಉಳಿದ 50ಕ್ಕೂ ಹೆಚ್ಚಿನವರಿಗೆ ಅವಕಾಶ ನೀಡುತ್ತಿಲ್ಲ, ಸಮಿತಿಯ ವಿರುದ್ಧ ಪ್ರತಿಭಟನೆ ನಡೆಸುತ್ತಿರುವ ನನ್ನ ಮೇಲೆ ಸಮಾಜದಿಂದ ಸಾಮಾಜಿಕ ಬಹಿಷ್ಕಾರ ಹಾಕಲಾಗಿದೆ, ನನ್ನ ಕುಟುಂಬದವರ ಜೊತೆಗೆ ನನ್ನ ಸಮಾಜದ ಯಾರೂ ಮಾತನಾಡಿಸುವಂತಿಲ್ಲ, ದಯಮಾಡಿ ನನಗೆ ಮಾನ್ಯ ತಹಶೀಲ್ದಾರ್ ಅವರು ನ್ಯಾಯ ಕೊಡಿಸಬೇಕು, ನಿಯಮದಂತೆ ನನಗೆ ಮುಡಿ ತೆಗೆಯುವ ಕೆಲಸ ಕೊಡಿಸಬೇಕಾಗಿ ಮನವಿ ಮಾಡುತ್ತೇನೆ. ನನಗೆ ನ್ಯಾಯ ದೊರಕುವವರೆಗೂ ಪ್ರತಿಭಟನೆ ಹಿಂಪಡೆಯುವ ಮಾತೇ ಇಲ್ಲ, ನಾನು ಇಲ್ಲಿಂದ ಕದಲುವುದಿಲ್ಲ ಎಂದು ಹೇಳಿದರು.



ಅಹೋರಾತ್ರಿ ಪ್ರತಿಭಟನೆ ನಿರತರಾಗಿರುವ ಕೃಷ್ಣರಾಜು.

ಸರಗೂರಲ್ಲಿ ಸಂಸದ ಸುನೀಲ್ ಬೋಸ್, ಅನಿಲ್‌ಗೆ ಸನ್ಮಾನ



ಸರಗೂರು, ಅ.9– ಸಂಸದರಾದ ಬಳಿಕ ಪ್ರಥಮ ಬಾರಿಗೆ ಸರಗೂರು ಪಟ್ಟಣಕ್ಕೆ ಆಗಮಿಸಿದ ಸಂಸದ ಸುನೀಲ್ ಬೋಸ್ ಅವರನ್ನು ತಾಲೂಕಿನ ದೇವಲಾಪುರ ಗ್ರಾಮದ ಆದಿ ಕರ್ನಾಟಕ ಸಮಾಜದ ವತಿಯಿಂದ ಅಭಿನಂದಿಸಲಾಯಿತು. ಇದೇ ವೇಳೆ ಶಾಸಕ ಅನಿಲ್ ಚಿಕ್ಕಮಾದು ಅವರನ್ನು ಸಹ ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ದೇವಲಾಪುರ ಗ್ರಾಮದಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ರವರ ಪುತ್ಥಳಿ ಅನಾವರಣಕ್ಕೆ ಬರುವಂತೆ ಸಂಸದರಲ್ಲಿ ಗ್ರಾಮದ ಮುಖಂಡರು ಮನವಿ ಮಾಡಿಕೊಂಡರು.

ಎಪಿಎಂಸಿ ಮಾಜಿ ಅಧ್ಯಕ್ಷ ದೇವಲಾಪುರ ಸಿದ್ದರಾಜು, ದೇವಲಾಪುರ ಗ್ರಾಮದ ಆದಿ ಕರ್ನಾಟಕ ಸಮಾಜದ ಯಜಮಾನರಾದ ಶಿವಣ್ಣ, ಡಾ.ಬಿ.ಆರ್.ಅಂಬೇಡ್ಕರ್ ಟ್ರಸ್ಟ್ ಅಧ್ಯಕ್ಷ ದೊಡ್ಡಪ್ಪಾಜಿ, ಗ್ರಾಮ ಪಂಚಾಯಿತಿ ಸದಸ್ಯ ಶಿವಶಂಕರ್, ಡಿ.ಎಸ್. ನಾಗೇಂದ್ರ ಮಾಜಿ ಸದಸ್ಯ ಪ್ರಭಾಕರ್, ಡಿಎಸ್‌ಎಸ್ ಸಂಚಾಲಕ ಮಹೇಶ್, ಮುಖಂಡರಾದ ಮಹೇಶ್, ಮಲ್ಲಯ್ಯ, ಪುಟ್ಟರಾಜು, ನಿಂಗರಾಜು, ಗೋಪಯ್ಯ, ವಂಸತ್, ಅಣ್ಣಯ್ಯಸ್ವಾಮಿ, ಲೋಕೇಶ್ ಗ್ರಾಮಸ್ಥರು ಇದ್ದರು.

ಹುಣಸೂರಲ್ಲಿ ಕಾನ್ಷಿರಾಮ್ ಪುಣ್ಯಸ್ಮರಣೆ



ಹುಣಸೂರು ಬಳಿಯ ಹಳ್ಳಿಮನೆಯಲ್ಲಿ ನಡೆದ ಕಾನ್ಷಿರಾಮ್ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಹಲವರನ್ನು ಸನ್ಮಾನಿಸಲಾಯಿತು.

ಹುಣಸೂರು, ಅ.9– ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಬಿಎಸ್‌ಪಿ ಸಂಸ್ಥಾಪಕರಾದ ದಾದಾ ಸಾಹೇಬ್ ಪ್ರಶಸ್ತಿ ಪುರಸ್ಕೃತರಾದ ಕಾನ್ಷಿರಾಮ್ ಸಾಹೇಬರ 18 ನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮವನ್ನು ಹುಣಸೂರು ತಾಲೋಕಿನ ಹಳ್ಳಿಮನೆ ಹೋಟೆಲ್‌ನಲ್ಲಿ ಆಚರಿಸಿ ಪಕ್ಷವನ್ನು ಅಧಿಕಾರಕ್ಕೆ ತರುವ ಸಂಕಲ್ಪ ಮಾಡಲಾಯಿತು.

ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿಗಳಾದ ಭರತ್ ಗೌಡ, ಜಿಲ್ಲಾ ಉಸ್ತುವಾರಿಗಳಾದ ಚಂದ್ರಶೇಖರ್, ಜಿಲ್ಲಾ ಖಜಾಂಚಿ ಮಹದೇವಸ್ವಾಮಿ, ಜಿಲ್ಲಾ ಸಂಯೋಜಕರು ಬಸವಣ್ಣ, ಹುಣಸೂರು ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಪ್ರಸನ್ನ ಸೋಮನಹಳ್ಳಿ, ಅನಂತ್ ನಾಗು, ಕೋಟೆ ತಾಲೂಕಿನ ಮುಖಂಡರು ಹಾಗೂ ವರುಣ ಕ್ಷೇತ್ರದ ರಂಗದಾಶಿ ಮುಂತಾದವರು ಹಾಜರಿದ್ದರು.


ಹೂಳು ತುಂಬಿ, ಗಿಡ–ಗಂಟಿ ಬೆಳೆದಿರುವ ನಾಲೆ

ರೈತರಿಗೆ ತಲುಪದ ನೀರು, ಪ್ರತಿಭಟನೆಯ ಎಚ್ಚರಿಕೆ

ಹುಣಸೂರು, ಅ.9– ತಾಲೂಕಿನ ಕಟ್ಟೆಮಳಲವಾಡಿ ಅಣೆಕಟ್ಟೆಯಿಂದ 1500 ಎಕರೆ ಪ್ರದೇಶಗಳಿಗೆ ನೀರು ಹರಿಯುವ ನಾಲಾ ವ್ಯಾಪ್ತಿಯಲ್ಲಿ ಹೂಳು ತುಂಬಿ, ಗಿಡ–ಗಂಟಿಗಳು ಬೆಳೆದು ಜಮೀನಿಗಳಿಗೆ ಸರಿಯಾಗಿ ನೀರು ಹರಿಯದೆ ತೊಂದರೆಯಾಗಿದ್ದು, ಹೂಳು ತೆಗೆಸಿ ನಾಲೆ ದುರಸ್ತಿಪಡಿಸುವಂತೆ ಸತ್ಯ ಎಂ.ಎ.ಎಸ್ ಫೌಂಡೇಶನ್ ಅಧ್ಯಕ್ಷ ಸತ್ಯಪ್ಪ ಒತ್ತಾಯಿಸಿದ್ದಾರೆ.

ಈ ಬಾರಿ ಉತ್ತಮ ಮಳೆಯಾಗಿದ್ದು, ಲಕ್ಷ್ಮಣತೀರ್ಥ ನದಿ ತುಂಬಿ ಅಣೆಕಟ್ಟುಗಳಲ್ಲಿ ಅಗತ್ಯವಿರುವಷ್ಟು ನೀರು ಶೇಖರಣೆಯಾಗಿದೆ. ರೈತರ ಜಮೀನುಗಳಿಗೆ ಅಣೆಕಟ್ಟುಗಳಿಂದ ನೀರು ಹರಿಸಲಾಗುತ್ತಿದೆ. ಆದರೆ ಕಟ್ಟೆಮಳಲವಾಡಿ ಅಣೆಕಟ್ಟು ವ್ಯಾಪ್ತಿಗೆ ಸೇರಿದ ನಾಲೆಗಳಲ್ಲಿ ಹೂಳು ತುಂಬಿಕೊಂಡು, ಗಿಡಗಂಟಿಗಳು ಬೆಳೆದು ಈಗಾಗಲೇ ಬಿಡುತ್ತಿರುವ ನೀರು ನಾಲೆಯಲ್ಲಿ ಸರಾಗವಾಗಿ ಹರಿಯದೆ ಪೋಲಾಗುತ್ತಿದೆ. ರೈತರು ಇದನ್ನು ಅಸಹಾಯಕತೆಯಿಂದ ನೋಡುವಂತಾಗಿದೆ ಎಂದು ಅವರು ಆಪಾದಿಸಿದ್ದಾರೆ.

ನಾಲೆಗಳ ಆಧುನೀಕರಣ ಸದ್ಯಕ್ಕೆ ಆಗದಿದ್ದರೂ ನಾಲೆಗಳ ಹೂಳು ತೆಗೆದು ಗಿಡಗಂಟಿಗಳನ್ನು ತೆರವುಗೊಳಿಸಿ ಕಟ್ಟೆಮಳಲವಾಡಿ ಅಣೆಕಟ್ಟಿನಿಂದ ಬಿಡುತ್ತಿರುವ ನೀರು ನೇರವಾಗಿ ರೈತರ ಜಮೀನಿಗೆ ಸರಾಗವಾಗಿ ಹರಿಯುವಂತೆ ಮಾಡಬೇಕೆಂದು ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ. ತಪ್ಪಿದಲ್ಲಿ ಇನ್ನು ಹದಿನೈದು ದಿನಗಳ ಒಳಗಾಗಿ ನಾಲೆಗಳ ಹೂಳು ತೆಗೆಯುವ ಕಾರ್ಯ ಕೈಗೊಳ್ಳದಿದ್ದಲ್ಲಿ ಸಂಬಂಧಪಟ್ಟ ಇಲಾಖೆಯ ಮುಂಭಾಗ ನೊಂದ ರೈತರೊಂದಿಗೆ ಪ್ರತಿಭಟನೆ ಹಮ್ಮಿಕೊಳ್ಳಲಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ.



ಅಮೇರಿಕಾದ ತಂಬಾಕು ಬೆಳೆಗಾರರ ಸಭೆಗೆ ಭಾರತದ ಪ್ರತಿನಿಧಿಯಾಗಿ ಜವರೇಗೌಡ



ಬೈಲಕುಪ್ಪೆ, ಅ.9– ತಂಬಾಕು ಬೆಳೆಗಾರರ ಹಾಗೂ ಉತ್ಪಾದನೆಯ ಸಮಸ್ಯೆಗಳ ಬಗ್ಗೆ ಚರ್ಚಿಸಲು ಅಮೆರಿಕಾದಲ್ಲಿ ನಡೆಯುವ ಸಭೆಯಲ್ಲಿ ಭಾರತ ದೇಶದ ಪ್ರತಿನಿಧಿಯಾಗಿ ಅಖಿಲ ಭಾರತ ರೈತ ತಂಬಾಕು ಒಕ್ಕೂಟದ ಅಧ್ಯಕ್ಷ ಬಿವಿ ಜವರೇಗೌಡ ಪಾಲ್ಗೊಳ್ಳಲಿದ್ದಾರೆ.

ಇದೇ ತಿಂಗಳು 15ರಿಂದ 18 ರವರೆಗೆ ಅಮೆರಿಕ ದೇಶದಲ್ಲಿ ನಾರ್ತ್ ಕೊರೋಲಿನಾ ಪ್ರಾಂತ್ಯದ ರಾಜಧಾನಿ ರಿಲೇ ನಗರದಲ್ಲಿ ಈ ಸಭೆ ನಡೆಯಲಿದೆ. ಪ್ರಪಂಚದ ಎಲ್ಲಾ ದೇಶದ ತಂಬಾಕು ಬೆಳೆಯುವ ತಂಬಾಕು ಬೆಳೆಗಾ ರರು ಈ ಸಭೆಯಲ್ಲಿ ಸೇರಲಿದ್ದು ತಮ್ಮನ್ನು ಆಹ್ವಾನಿಸಿರುವುದಾಗಿ ಅವರು ತಿಳಿಸಿದ್ದಾರೆ.

ದಸರಾ ಮೆರವಣಿಗೆ ಉಪ ಸಮಿತಿಗೆ ನೇಮಕ



ತಿ.ನರಸೀಪುರ, ಅ.9– ಮೈಸೂರು ದಸರಾ ಮಹೋತ್ಸವದ ಮೆರವಣಿ ಉಪ ಸಮಿತಿಗೆ ವರುಣ ವಿಧಾನಸಭಾ ಕ್ಷೇತ್ರದ ಗೋಪಾಲಪುರ ಗ್ರಾಮದ ಮಹೇಶ್ ಅವರನ್ನು, ಸದಸ್ಯರನ್ನಾಗಿ ಜಿಲ್ಲಾಧಿಕಾರಿಗಳಾದ ಲಕ್ಷ್ಮಿ ಕಾಂತ ರೆಡ್ಡಿ ಅವರು ನೇಮಕ ಮಾಡಿದ್ದಾರೆ. ತಮ್ಮ ನೇಮಕಕ್ಕೆ ಕಾರಣರಾದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ ಎಚ್.ಸಿ.ಮಹದೇವಪ್ಪ, ಸಂಸದ ಸುನಿಲ್ ಬೋಸ್, ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಅವರನ್ನು ಅಭಿನಂದಿಸಿದ್ದಾರೆ.

ಟಿ20: ಬಾಂಗ್ಲಾ ವಿರುದ್ಧ ಭಾರತಕ್ಕೆ ಜಯ

ನವದೆಹಲಿ: ಬಾಂಗ್ಲಾದೇಶ ವಿರುದ್ಧದ ಎರಡನೇ ಟಿ20 ಕ್ರಿಕೆಟ್ ಪಂದ್ಯದಲ್ಲಿ ಭಾರತ ತಂಡವು ಬಾಂಗ್ಲಾದೇಶದ ವಿರುದ್ಧ 86 ರನ್‌ಗಳ ಅಂತರದಿಂದ ಗೆಲುವು ಸಾಧಿಸಿದೆ. ಇದರೊಂದಿಗೆ 3 ಪಂದ್ಯಗಳ ಟಿ20 ಸರಣಿಯನ್ನು ಭಾರತ 2–0ರಿಂದ ಕೈವಶ ಮಾಡಿಕೊಂಡಿತು. ದೆಹಲಿಯ ಅರುಣ್ ಜೆಟ್ಲಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ 20 ಓವರ್ಗಳಲ್ಲಿ 9 ವಿಕೆಟ್ ನಷ್ಟಕ್ಕೆ 221 ರನ್ ಗಳಿಸಿತ್ತು.

ಟೀಮ್ ಇಂಡಿಯಾ ಪರ ನಿತೀಶ್ ರೆಡ್ಡಿ (74; 34ಎಸೆತ) ಅತ್ಯಂತ ಆಕರ್ಷಕ ಬ್ಯಾಟಿಂಗ್ ಮಾಡಿದರು. 7 ಸಿಕ್ಸರ್ ಮತ್ತು 4 ಬೌಂಡರಿಗಳನ್ನು ಸಿಡಿಸಿದ ಅವರು ಪ್ರೇಕ್ಷಕರಿಗೆ ರಸದೌತಣ ನೀಡಿದರು. ಇನ್ನೊಂದೆಡೆ ರಿಂಕು (53; 29ಎ) ಅವರೂ ತಮ್ಮ ಎಂದಿನ ಬೀಸಾಟದಿಂದ ಗಮನ ಸೆಳೆದರು. ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ ಇವರಿಬ್ಬರೂ ಸೇರಿಸಿದ 108 ರನ್ ಗಳಿಸಿದ್ದರು. ಬಳಿಕ ಕ್ರೀಸ್‌ಗೆ ಬಂದ ಹಾರ್ದಿಕ್ ಪಾಂಡ್ಯ 19 ಎಸೆತಗಳಲ್ಲಿ 32 ರನ್ ಗಳಿಸಿ ತಂಡಕ್ಕೆ ಆಸರೆಯಾದರು. 222 ರನ್‌ಗಳ ಬೃಹತ್ ಮೊತ್ತ ಬೆನ್ನತ್ತಿದ ಬಾಂಗ್ಲಾ 20 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 135 ರನ್ ಗಳಿಸಲಷ್ಟೇ ಶಕ್ತವಾಯಿತು.

ರಂಗಾಯಣದ ವಾರಾಂತ್ಯದಲ್ಲಿ ಪ್ರದರ್ಶಿತ ನಾಟಕಗಳ ಟಿಕೆಟ್ ಬೆಲೆ ಹೆಚ್ಚಿಸಲು ಪ್ರಸ್ತಾಪ

ಮೈಸೂರು, ಅ.9(ಎಸ್‌ಪಿಎನ್)– ರಂಗಾಯಣ ವಾರಾಂತ್ಯದಲ್ಲಿ ಪ್ರದರ್ಶನಗೊಳ್ಳುವ ನಾಟಕದ ಟಿಕೆಟ್ ಬೆಲೆ ಹೆಚ್ಚಿಸಲು ರಂಗಾಸ್ತಕರು, ವಿದ್ಯಾರ್ಥಿಗಳು, ಮೈಸೂರು ಜನತೆ ಸಹಕರಿಸುವಂತೆ ರಂಗಾಸಕ್ತರಲ್ಲಿ ರಂಗಸಮಾಜದ ಸದಸ್ಯ ಮಹಾಂತೇಶ್ ಗಜೇಂದ್ರಗಡ ಮನವಿ ಮಾಡಿದರು.

ಮೈಸೂರು ರಂಗಾಯಣ ಭೂಮಿಗೀತದಲ್ಲಿ ರಂಗಾಯಣದ ವತಿಯಿಂದ ಏರ್ಪಡಿಸಿದ್ದ ನವರಾತ್ರಿ ಜನಪದ ರಂಗ ಉತ್ಸವದಲ್ಲಿ 'ಕರಿಭಂಟನ ಕಾಳಗ' ಯಕ್ಷಗಾನ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ರಂಗಸಮಾಜದ ಹಿರಿಯ ಚಿಂತಕರಾದ ಶಶಿಧರ್ ಭಾರೀಘಾಟ್, ಡಾ.ಕೆ.ರಾಮಕೃಷ್ಣಯ್ಯ, ಮಹಾಂತೇಶ್ ಗಜೇಂದ್ರಗಡ, ಲಕ್ಷ್ಮಿ ಚಂದ್ರಶೇಖರ್, ಹೆಚ್.ಎಸ್.ಸುರೇಶ್ ಬಾಬು, ಡಿಂಗ್ರಿ ನರೇಶ್ ಹಾಗೂ ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು ಅವರ ನೇತೃತ್ವದಲ್ಲಿ ಮೂಡಲಪಾಯ ಯಕ್ಷಗಾನದ ಹಿರಿಯ ಕಲಾವಿದ, ತಿಪಟೂರು ಕೊನೆಹಳ್ಳಿಯ ಎ.ಬಿ.ಶಂಕರಪ್ಪರನ್ನು ಸನ್ಮಾನಿಸಲಾಯಿತು. ನಂತರ ಮಹಾಂತೇಶ್ ಗಜೇಂದ್ರ ಗಡ ಮಾತನಾಡಿದರು.

ರಂಗಾಯಣದ ವಾರಾಂತ್ಯದಲ್ಲಿ ಪ್ರದರ್ಶನಗೊಳ್ಳುವ ನಾಟಕಗಳಿಗೆ ಇಲ್ಲಿಯವರೆಗೆ ಟಿಕೆಟ್ ಬೆಲೆ 50 ರೂ. ಇದೆ. ಇದನ್ನು ಹೆಚ್ಚಿಸುವಂತೆ ಹಲವು ವರ್ಷಗಳಿಂದ ಬೇಡಿಕೆಯಿದೆ. ಈ ಟಿಕೆಟ್ ಬೆಲೆಯನ್ನು ಹೆಚ್ಚಿಸಲು ರಂಗಸಮಾಜದಲ್ಲಿ ಚರ್ಚಿಸುವ ಸಲುವಾಗಿ ಮೈಸೂರು ಜನತೆ, ಕಾಲೇಜು ವಿದ್ಯಾರ್ಥಿಗಳು, ರಂಗಾಸಕ್ತರು ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ನಾಡಹಬ್ಬ ದಸರಾ ಮಹೋತ್ಸವದಲ್ಲಿ ಮೂಡಲಪಾಯ ಯಕ್ಷಗಾನ ಟ್ರಸ್ಟ್‌ನ ಹಿರಿಯ ಕಲಾವಿದರಾದ ಎ.ಬಿ.ಶಂಕರಪ್ಪ ಅವರನ್ನು ಸನ್ಮಾನಿಸುತ್ತಿರುವುದು ಸಂತೋಷದ ಸಂಗತಿ. ಜನಪದ ಉತ್ಸವದಲ್ಲಿ ಹಲವು ಜಾನಪದ ಕಲೆಗಳು ದಸರಾ ಸಂದರ್ಭದಲ್ಲಿ ಪ್ರದರ್ಶನಗೊಳ್ಳುತ್ತಿವೆ. ರಂಗಾಯಣದಲ್ಲೂ ಕಳೆದ ಏಳು ದಿನಗಳಿಂದ ವಿವಿಧ ಕಾರ್ಯಕ್ರಮಗಳು ಜರುಗಿರುವುದು ಸಂತೋಷದ ಸಂಗತಿ. ರಂಗಾಯಣ ಕಳೆದ 35 ವರ್ಷಗಳಿಂದ ದೇಶ–ವಿದೇಶಗಳಲ್ಲಿ ನಾಟಕ ಪ್ರದರ್ಶನದ ಮೂಲಕ ವಿಶ್ವವಿಖ್ಯಾತಿ ಪಡೆದಿದೆ. ಈ ಸಾಧನೆ ಅನೇಕ ನಿರ್ದೇಶಕರ ಶ್ರಮವಿದೆ ಎಂದರು.

ವೇದಿಕೆಯಲ್ಲಿ ರಂಗಾಯಣ ಉಪ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ನವರಾತ್ರಿ ಜನಪದ ರಂಗ ಉತ್ಸವ ಸಂಚಾಲಕಿ ಬಿ.ಎನ್. ಶಶಿಕಲಾ, ಯುವ ಕಲಾವಿದ ಗಣೇಶ್ ಮುಂದಾರ್ತಿ, ರಂಗಾಯಣ ರೆಪರ್ಟರಿ ಕಲಾವಿದ ಡಿ.ಆರ್.ನಿತಿನ್ ಸೇರಿ ದಂತೆ ಇತರರಿದ್ದರು. ಇದಕ್ಕೂ ಮುನ್ನ ಕೇರಳದ ಮಹಿಳಾ ಕಲಾವಿದರಿಂದ ಸಿಂಗಾರಿ ಮೇಳಂ ಚಂಡೆವಾದನ ನಡೆಸಿಕೊಟ್ಟರು.

ಕಿರು ರಂಗಮಂದಿರ ವೇದಿಕೆಯಲ್ಲಿ ಬೆಂಗಳೂರು ಗ್ರಾಂಮಾಂತರದ ಶ್ಯಾಲಿನಿ ಮತ್ತು ತಂಡದವರಿಂದ ಸಮೂಹ ಶಾಸ್ತ್ರೀಯ ನೃತ್ಯ ನಡೆಸಿಕೊಟ್ಟರು. ಕಲಬುರಗಿ ಜಾನಪದ ಕಲಾಸಂಘ ಹಾಗೂ ಶ್ರೀ ಮಹಾತ್ಮ ಜ್ಯೋತಿ ಬಾಪುಲೆ ಬಯಲಾಟದ ಸಹಯೋಗದೊಂದಿಗೆ 'ಜ್ಯೋತಿ ಬಾಪುಲೆ' ನಾಟಕ ಪ್ರದರ್ಶನಗೊಂಡಿತು. ಚಿಕ್ಕಮಗಳೂರಿನ ಅಭಿನಯ ದರ್ಪಣ ಯುವ ವೇದಿಕೆ ವತಿಯಿಂದ 'ಮಸ್ಸಂಜೆಯಲ್ಲಿ ನಡೆದ ಘಟನೆ ನಾಟಕ' ಪ್ರದರ್ಶನಗೊಂಡಿತು.

ಕರ್ನಾಟಕ ಕಲಾಮಂದಿರ ವೇದಿಕೆಯಲ್ಲಿ ಚಾಮರಾಜನಗರ ಮಂಟೆಸ್ವಾಮಿ ಸುಗ್ಗಿ ಕುಣಿತ ಕಲಾಸಂಘದಿಂದ ಸುಗ್ಗಿ ಕುಣಿತ, ತಿ.ನರಸೀಪುರ ದೊಡ್ಡರಾಚಪ್ಪ ಮತ್ತು ತಂಡದಿಂದ ತಂಬೂರಿ ಜಾನಪದ, ಹಾಸನ ಆಗಿಲೆಯ ಎ.ಪಿ.ಜಗದೀಶ್ ತಂಡದಿಂದ ಸುಗಮ ಸಂಗೀತ, ಬಿದರಿ ಬೀದರ್ ಸಾಂಸ್ಕೃತಿಕ ವೇದಿಕೆಯಿಂದ ಸುಗಮ ಸಂಗೀತ, ಬೆಂಗಳೂರು ಶ್ರೀ ಗಣೇಶ್ ನೃತ್ಯಾಲಯ ಟ್ರಸ್ಟ್ ಕಲಾವಿದರು ನಡೆಸಿಕೊಟ್ಟ ಭರತನಾಟ್ಯ ಪ್ರದರ್ಶನ ಪ್ರೇಕ್ಷಕರ ಮೆಚ್ಚುಗೆ ಪಡೆಯಿತು.



ಸಿಂಗಾರಿ ಮೇಳಂ ಚಂಡೆವಾದನ ನಡೆಸಿಕೊಟ್ಟ ಕೇರಳದ ಮಹಿಳಾ ಕಲಾವಿದರು



ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮೂಡಲಪಾಯ ಯಕ್ಷಗಾನದ ಹಿರಿಯ ಕಲಾವಿದ, ತಿಪಟೂರು ಕೊನೆಹಳ್ಳಿಯ ಎ.ಬಿ.ಶಂಕರಪ್ಪರನ್ನು ಸನ್ಮಾನಿಸಲಾಯಿತು.

ಶ್ರೀಗಂಧ ಕಳ್ಳರಿಬ್ಬರಿಗೆ ಜೈಲು ಶಿಕ್ಷೆ

ಕೊಳ್ಳೇಗಾಲ, ಅ.9–ಶ್ರೀಗಂಧ ಸಾಗಿಸುವಾಗ ಸಿಕ್ಕಿಬಿದ್ದ ಇಬ್ಬರು ಕಳ್ಳರಿಗೆ ಕೊಳ್ಳೇಗಾಲದ ಅಪರ ಜಿಲ್ಲಾ ಮತ್ತು ಸೆಷನ್ಸ್ ನಾಯಾಲಯ 5 ವರ್ಷ ಜೈಲು ಶಿಕ್ಷೆ ಹಾಗೂ ತಲಾ 55 ಸಾವಿರ ದಂಡ ವಿಧಿಸಿ ತೀರ್ಪು ನೀಡಿದೆ.

ಹನೂರು ತಾಲೂಕಿನ ಕೆ.ಕೆ.ಡ್ಯಾಂ ಗ್ರಾಮದ ಮಾದೇವ ಅಲಿಯಾಸ್ ಕೋಣ್ಣೂರ ಹಾಗೂ ರಂಗ ಶಿಕ್ಷೆಗೆ ಗುರಿಯಾದವರು. ಇವರಿಬ್ಬರು ಕುಂಬೇಗೌಡ ಅಲಿಯಾಸ್ ಕುಂಭನೊಂದಿಗೆ (ಈತ ವಿಚಾರಣೆ ವೇಳೆ ಮೃತಪಟ್ಟಿದ್ದಾನೆ) 20202ರ ಸೆ.26ರಂದು ಪಿ.ಜಿ.ಪಾಳ್ಯ ವನ್ಯಜೀವಿ ವಲಯದಲ್ಲಿ 16 ಕೆಜಿಯ ಶ್ರೀಗಂಧದ ತುಂಡು ಹಾಗೂ ಚಕ್ಕೆಗಳನ್ನು ಬ್ಯಾಗ್‌ನಲ್ಲಿ ಸಾಗಿಸುತ್ತಿದ್ದರು. ಈ ವೇಳೆ ಲೊಕ್ಕನಹಳ್ಳಿ ಕಳ್ಳಬೇಟೆ ಶಿಬಿರದ ಸೂಲರ್ ಗೇಟ್ ಬಳಿ ಅರಣ್ಯ ಸಿಬ್ಬಂದಿಗೆ ಸಿಕ್ಕಿಬಿದ್ದಿದ್ದರು.

ನಂತರ ಪ್ರಕರಣ ದಾಖಲಿಸಿ, ಈ ಮೂವರನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿತ್ತು. ಬಳಿಕ ಈ ಸಂಬಂಧ ತನಿಖೆ ನಡೆಸಿ ನ್ಯಾಯಾಲಕ್ಕೆ ದೋಷರೋಪಣಪಟ್ಟಿ ಸಲ್ಲಿಸಲಾಗಿತ್ತು. ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಟಿ.ಸಿ.ಶ್ರೀಕಾಂತ್ ಅವರು ಅಪರಾಧಿಗಳಿಗೆ 5 ವರ್ಷ ಜೈಲು ಶಿಕ್ಷೆ ಹಾಗೂ ತಲಾ 55 ಸಾವಿರ ದಂಡ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸಿ.ಬಿ.ಗಿರೀಶ್ ವಾದ ಮಂಡಿಸಿದರು.

ಮಹಾ ಪೈಲ್ವಾನರ ಸೆಣಸಾಟದೊಂದಿಗೆ ದಸರಾ ಕುಸ್ತಿಗೆ ತೆರೆ

ಬಾಗಲಕೋಟೆ ಪೈ.ಶಿವಯ್ಯ ಪೂಜಾರಿ 'ದಸರಾ ಕಂಠೀರವ'; ಮುಧೋಳ್ ಪೈ.ಸದಾಶಿವ ನಲವಡೆ 'ದಸರಾ ಕೇಸರಿ'; ದಾವಣಗೆರೆ ಪೈ.ಕುರುವರ ಸಂಜೀವ 'ದಸರಾ ಕಿಶೋರ'; ಪೈ.ಎಸ್.ಶಾಲಿನಿ 'ದಸರಾ ಕಿಶೋರಿ'; ಪಾಲಹಳ್ಳಿ ಪೈ.ಗಿರೀಶ್ 'ದಸರಾ ಕುಮಾರ'



ಮೈಸೂರು ದಸರಾ ಕುಸ್ತಿ ಪಂದ್ಯಾವಳಿಯಲ್ಲಿ ಬಾಗಲಕೋಟೆಯ ಪೈ.ಶಿವಯ್ಯ ಪೂಜಾರಿ 'ದಸರಾ ಕಂಠೀರವ', ಮುಧೋಳ್‌ನ ಪೈ.ಸದಾಶಿವ ನಲವಡೆ 'ದಸರಾ ಕೇಸರಿ', ಪಾಲಹಳ್ಳಿಯ ಪೈಗಿರೀಶ್ 'ದಸರಾ ಕುಮಾರ' ದಾವಣಗೆರೆಯ ಪೈಕುರುವರ ಸಂಜೀವ 'ದಸರಾ ಕಿಶೋರ', ಹಾಗೂ ಪೈ.ಎಸ್.ಶಾಲಿನಿ 'ದಸರಾ ಕಿಶೋರಿ' ಪ್ರಶಸ್ತಿ ಗೆದ್ದು, ಅಖಾಡದಲ್ಲಿ ಬೆಳ್ಳಿ ಗದೆಯನ್ನು ಹೆಗಲೇರಿಸಿ ಸಂಭ್ರಮಿಸಿದರು.



'ದಸರಾ ಕಂಠೀರವ' ಪ್ರಶಸ್ತಿಗೆ ಸೆಣಸಾಡಿದ ಬಾಗಲಕೋಟೆಯ ಪೈ.ಶಿವಯ್ಯ ಪೂಜಾರಿ ಹಾಗೂ ಮುಧೋಳ್‌ನ ಪೈ.ಬಾಪು ಸಾಹೇಬ್ ಸಿಂಧೆ.



'ದಸರಾ ಕೇಸರಿ' ಪೈ.ಸದಾಶಿವ ನಲವಡೆ ಅವರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪ್ರಶಸ್ತಿ ವಿತರಿಸಿದರು.

ಮೈಸೂರು, ಅ.9(ಎಸ್‌ಬಿಡಿ)– ಮೈಸೂರು ದಸರಾ ಮಹೋತ್ಸವದ ಅಂಗವಾಗಿ ದೊಡ್ಡಕೆರೆ ಮೈದಾನದ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ವಾರ ಕಾಲ ನಡೆದ ಪಾರಂಪರಿಕ ದಸರಾ ಕುಸ್ತಿ ಪಂದ್ಯಾವಳಿಗೆ ಟೈಟಲ್ ಪ್ರಶಸ್ತಿ ಸೆಣಸಾಟದೊಂದಿಗೆ ಬುಧವಾರ ರೋಚಕ ತೆರೆಬಿದ್ದಿತು.

ಬಾಗಲಕೋಟೆಯ ಪೈಶಿವಯ್ಯ ಪೂಜಾರಿ 'ದಸರಾ ಕಂಠೀರವ', ಮುಧೋಳ್‌ನ ಪೈ.ಸದಾಶಿವ ನಲವಡೆ 'ದಸರಾ ಕೇಸರಿ', ದಾವಣಗೆರೆಯ ಪೈ.ಕುರುವರ ಸಂಜೀವ 'ದಸರಾ ಕಿಶೋರ', ದಾವಣಗೆರೆಯ ಪೈ.ಎಸ್.ಶಾಲಿನಿ 'ದಸರಾ ಕಿಶೋರಿ' ಹಾಗೂ ಮಂಡ್ಯದ ಪಾಲಹಳ್ಳಿಯ ಪೈ.ಗಿರೀಶ್ 'ದಸರಾ ಕುಮಾರ' ಪ್ರಶಸ್ತಿಗಳನ್ನು ಗೆದ್ದು, ಅಖಾಡದಲ್ಲಿ ಬೆಳ್ಳಿ ಗದೆ ಮೇಲೆತ್ತಿ ಸಂಭ್ರಮಿಸಿದರು.

ಪಂದ್ಯಾವಳಿಯ ಅಂತಿಮ ಹಣಾಹಣಿಯಲ್ಲಿ ಪೈಲ್ವಾನರು ಪಟ್ಟು–ಪ್ರತಿಪಟ್ಟುಗಳೊಂದಿಗೆ ಕೆಮ್ಮಣ್ಣು ಅಖಾಡದಲ್ಲಿ ಧೂಳೆಬ್ಬಿಸಿ, ನೆರೆದಿದ್ದ ಕುಸ್ತಿ ಪ್ರೇಮಿಗಳನ್ನು ಬೆರಗಾಗಿಸಿದರು. ನಾಡಹಬ್ಬ ದಸರಾದಲ್ಲಿ ಪ್ರಶಸ್ತಿ ಗೆಲ್ಲಬೇಕೆಂಬ ಗುರಿಯೊಂದಿಗೆ ಮದಗಜಗಳಂತೆ ಕಾದಾಡಿದರು. ಗೆದ್ದವರು ಖುಷಿಯಲ್ಲಿ ತೇಲಿದರೆ, ಪರಾಜಿತ ಪೈಲ್ವಾನರಲ್ಲಿ ಪ್ರಬಲ ಪೈಪೋಟಿ ನೀಡಿದ ತೃಪ್ತಿ ಕಾಣಿಸಿತು. ಎಲ್ಲಾ ಪಂದ್ಯಗಳ ವೇಳೆಯೂ ನೆರೆದಿದ್ದ ಕ್ರೀಡಾಪ್ರೇಮಿಗಳು ಶಿಳ್ಳೆ–ಕೇಕೆ, ಚಪ್ಪಾಳೆ ಮೂಲಕ ಪೈಲ್ವಾನರನ್ನು ಪ್ರೋತ್ಸಾಹಿಸಿದರು.

ದಸರಾ ಕಂಠೀರವ: ದಸರಾ ಕುಸ್ತಿ ಪಂದ್ಯಾವಳಿಯ ಪ್ರತಿಷ್ಠಿತ 'ದಸರಾ ಕಂಠೀರವ' ಟೈಟಲ್ ಪ್ರಶಸ್ತಿಗೆ ಮುಧೋಳ್‌ನ ಪೈ.ಬಾಪು ಸಾಹೇಬ್ ಸಿಂಧೆ ಹಾಗೂ ಬಾಗಲಕೋಟೆಯ ಪೈ.ಶಿವಯ್ಯ ಪೂಜಾರಿ ಕೆಂಪು ಮಟ್ಟಿಯಲ್ಲಿ ಮದಗಜಗಳಂತೆ ಕಾದಾಡಿದರು. ಬಲಾಢ್ಯರಾಗಿರುವ ಇಬ್ಬರೂ ಗೆಲ್ಲುವ ವಿಶ್ವಾಸವನ್ನು ಕಡೇವರೆಗೂ ಹಿಡಿದಿಟ್ಟುಕೊಂಡಿದ್ದರು. ಕ್ಷಣ ಕ್ಷಣಕ್ಕೂ ತೊಡೆತಟ್ಟಿ ಪಟ್ಟು–ಪ್ರತಿಪಟ್ಟುಗಳನ್ನು ಹಾಕಿದರು. ನಿಗದಿತ 20 ನಿಮಿಷಗಳ ಸೆಣಸಾಟದಲ್ಲಿ ಸಮಬಲ ಕಾಯ್ದುಕೊಂಡಿದ್ದರಾದರೂ ಅಂತಿಮವಾಗಿ 6 ಅಂಕ ಗಳಿಸುವುದರೊಂದಿಗೆ ಬಾಗಲಕೋಟೆಯ ಪೈ.ಶಿವಯ್ಯ ಪೂಜಾರಿ 'ದಸರಾ ಕಂಠೀರವ' ಟೈಟಲ್ ಅನ್ನು ಹೆಗಲೇರಿಸಿಕೊಂಡರು. ಐದು ಅಂಕದೊಂದಿಗೆ ಬಿಗಿ ಪಟ್ಟು ತೋರಿದ ಎದುರಾಳಿ ಪೈ.ಬಾಪು ಸಾಹೇಬ್ ಕೇವಲ ಒಂದು ಅಂಕದಿಂದ ಪರಾಜಿತರಾದರು.

ದಸರಾ ಕೇಸರಿ: ದಾವಣಗೆರೆಯ ಪೈ.ಬಸವರಾಜ ಪಾಟೀಲ್ ಹಾಗೂ ಪೈ.ಸದಾಶಿವ ನಲವಡೆ 'ದಸರಾ ಕೇಸರಿ' ಪ್ರಶಸ್ತಿಗೆ ಕಾದಾಡಿದರು. ಇಬ್ಬರೂ ಒಮ್ಮೊಮ್ಮೆ ಮೇಲುಗೈ ಸಾಧಿಸುವ ಮೂಲಕ ಒಂದು ಹಂತದಲ್ಲಿ ಸಮಬಲ ಪ್ರದರ್ಶನ ಮಾಡಿದರು. 20 ನಿಮಿಷಗಳ ಕುಸ್ತಿಯಲ್ಲಿ ಅಂತಿಮವಾಗಿ ಪೈ.ಸದಾಶಿವ ನಲವಡೆ 15 ಅಂಕ ಪಡೆದು ಗೆದ್ದು ಬೀಗಿದರು. ಪರಾಜಿತ ಪೈ.ಬಸವರಾಜು ಪಾಟೀಲ್ 7 ಅಂಕ ಗಳಿಸಿದರು. ಈ ಮೂಲಕ ಪೈ.ಸದಾಶಿವ ಮೂರನೇ ಬಾರಿ 'ದಸರಾ ಕೇಸರಿ' ಪ್ರಶಸ್ತಿ ಪಡೆದ ಕೀರ್ತಿಗೆ ಪಾತ್ರರಾದರು. ಈ ಹಿಂದೆ 2018 ಹಾಗೂ 2019ರ ದಸರಾದಲ್ಲೂ ಇವರು ಪ್ರಶಸ್ತಿ ಪಡೆದಿದ್ದರು.

ದಸರಾ ಕಿಶೋರ: ದಾವಣಗೆರೆಯ ಪೈ.ಮಹೇಶ್ ಪಿ.ಗೌಡ ಹಾಗೂ ಪೈ.ಕುರುವರ ಸಂಜೀವ ನಡುವಿನ ಮಟ್ಟಿ ಕಾಳಗದಲ್ಲಿ ಅಂತಿಮವಾಗಿ 6 ಅಂಕಗಳೊಂದಿಗೆ ಪೈ.ಕುರುವರ ಸಂಜೀವ 'ದಸರಾ ಕಿಶೋರ' ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ಈ ಮೂಲಕ ಸತತ ಎರಡನೇ ಬಾರಿಗೆ ಈ ಪ್ರಶಸ್ತಿ ಪಡೆದ ಕೀರ್ತಿಗೆ ಪಾತ್ರರಾದರು. 15 ನಿಮಿಷಗಳ ಸೆಣಸಾಟದಲ್ಲಿ ಎದುರಾಳಿ ಮಹೇಶ್ ಪಿ.ಗೌಡ ಅವರಿಗೆ ಒಂದು ಪಾಯಿಂಟ್ ಮಾತ್ರ ಬಿಟ್ಟುಕೊಟ್ಟರು.

ದಸರಾ ಕಿಶೋರಿ: ದಾವಣಗೆರೆಯವರಾದ ಪೈ.ಗಾಯತ್ರಿ ಹಾಗೂ ಪೈ.ಎಸ್.ಶಾಲಿನಿ 'ದಸರಾ ಕಿಶೋರಿ' ಪ್ರಶಸ್ತಿಗೆ ಪಟ್ಟು–ಪ್ರತಿಪಟ್ಟುಗಳೊಂದಿಗೆ ಸೆಣಸಾಡಿದರು. ನಿಗದಿತ 15 ನಿಮಿಷಗಳಲ್ಲಿ 12 ಅಂಕ ಗಳಿಸುವ ಮೂಲಕ ಶಾಲಿನಿ 'ದಸರಾ ಕಿಶೋರಿ'ಯಾಗಿ ಹೊರಹೊಮ್ಮಿದರೆ, ಎದುರಾಳಿ ಗಾಯತ್ರಿ ಎರಡು ಅಂಕಗಳೊಂದಿಗೆ ಪರಾಜಿತರಾದರು.

ದಸರಾ ಕುಮಾರ: ಮೈಸೂರು ವಿಭಾಗ ಮಟ್ಟದ 'ದಸರಾ ಕುಮಾರ' ಪ್ರಶಸ್ತಿಗೆ ಮಂಡ್ಯದ ಪೈಗಿರೀಶ್ ಹಾಗೂ ಮೈಸೂರಿನ ಪೈ.ಆರ್.ನಿತಿನ್ ನಡುವೆ ಭಾರಿ ಪೈಪೋಟಿ ನಡೆಯಿತು. ಪೈಗಿರೀಶ್ ಕಡೆವರೆಗೂ ಬಿಗಿಪಟ್ಟುಗಳನ್ನು ಹಾಕಿ ಎದುರಾಳಿಯನ್ನು ಮಣಿಸಿದರು. ಬರೋಬ್ಬರಿ 23 ಅಂಕಗಳನ್ನು ಗಳಿಸಿ 'ದಸರಾ ಕುಮಾರ'ನಾಗಿ ಮೆರೆದರು. ಪ್ರಬಲ ಪೈಪೋಟಿ ನೀಡಿದ ಪೈ.ನಿತಿನ್ 13 ಅಂಕಗಳೊಂದಿಗೆ ಪರಾಭವಗೊಂಡರು. 20 ನಿಮಿಷಗಳ ಕುಸ್ತಿಯ ಪ್ರಾರಂಭದಲ್ಲಿ 2 ಅಂಕ ಪಡೆಯುವ ಮೂಲಕ ನಿತಿನ್ ಮುನ್ನಡೆ ಸಾಧಿಸಿ, ಗೆಲುವಿನ ವಿಶ್ವಾಸ ತೋರಿದರಾದರೂ ಬಳಿಕ ಪೈಗಿರೀಶ್ ಹಿಡಿತ ಸಾಧಿಸಿದರು. ಅಂತಿಮ ಕ್ಷಣದಲ್ಲಿ ಎದುರಾಳಿಯನ್ನು ಚಿತ್ ಮಾಡುವ ಪ್ರಯತ್ನವೂ ಫಲ ನೀಡಲಿಲ್ಲ. ಅಂತಿಮವಾಗಿ ಪೈ.ಗಿರೀಶ್ ಗೆಲುವು ದಾಖಲಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ದಸರಾ ಕುಸ್ತಿ ಉಪ ಸಮಿತಿ ಉಪ ವಿಶೇಷಾಧಿಕಾರಿಯಾದ ಎಎಸ್‌ಪಿ ಎಲ್. ನಾಗೇಶ್ ಹಾಗೂ ಸಮಿತಿ ಪದಾಧಿಕಾರಿಗಳು ವಿಜೇತರಿಗೆ ಪ್ರಶಸ್ತಿ ನೀಡಿ, ಅಭಿನಂದಿಸಿದರು.

ಬೆಳ್ಳಿ ಗದೆಯೊಂದಿಗೆ ನಗದು ಬಹುಮಾನ

'ದಸರಾ ಕಂಠೀರವ' ಪೈ.ಶಿವಯ್ಯ ಪೂಜಾರಿ ಅವರಿಗೆ ಒಂದೂಕಾಲು ಕೆಜಿ ಬೆಳ್ಳಿ ಗದೆ ಹಾಗೂ 15 ಸಾವಿರ ನಗದು ಬಹುಮಾನ, 'ದಸರಾ ಕೇಸರಿ' ಪೈ.ಸದಾಶಿವ ನಲವಡೆ ಅವರಿಗೆ ಒಂದು ಕೆಜಿ ಬೆಳ್ಳಿ ಗದೆ ಹಾಗೂ 12,500 ರೂ., 'ದಸರಾ ಕಿಶೋರ' ಪೈ.ಕುರುವರ ಸಂಜೀವ ಹಾಗೂ 'ದಸರಾ ಕಿಶೋರಿ' ಪೈ.ಎಸ್.ಶಾಲಿನಿ ಅವರಿಗೆ ತಲಾ ಅರ್ಧ ಕೆಜಿ ಬೆಳ್ಳಿ ಗದೆ ಹಾಗೂ 10 ಸಾವಿರ ರೂ. ಮತ್ತು 'ದಸರಾ ಕುಮಾರ' ಪೈ.ಗಿರೀಶ್ ಮುಕ್ಕಾಲು ಕೆಜಿ ಬೆಳ್ಳಿ ಗದೆ ಹಾಗೂ 10 ಸಾವಿರ ರೂ. ನಗದು ಬಹುಮಾನ ನೀಡಿ, ಅಭಿನಂದಿಸಲಾಯಿತು. ಈ ಎಲ್ಲಾ ವಿಭಾಗದಲ್ಲೂ ದ್ವಿತೀಯ, ತೃತೀಯ ಹಾಗೂ ನಾಲ್ಕನೇ ಬಹುಮಾನವನ್ನೂ ನೀಡಲಾಯಿತು.

ವಿವಿಧ ಪ್ರಶಸ್ತಿ ಗೆದ್ದ ಪೈಲ್ವಾನರು

ದಸರಾ ಕುಸ್ತಿ ಪಂದ್ಯಾವಳಿಯಲ್ಲಿ ಸಾಹುಕಾರ್ ಚನ್ನಯ್ಯ ಕುಸ್ತಿ ಅಖಾಡದ ಪೈಭೈರಪ್ಪ ನಾಯಕ 'ಮೈಸೂರು ಮಹಾರಾಜ ಒಡೆಯರ್ ಕಪ್', ಬೋಗಾದಿ ಹತ್ತು ಜನರ ಗರಡಿಯ ಪೈ.ಮನು 'ಮೈಸೂರು ಮೇಯರ್ ಕಪ್', ನಂಜನಗೂಡು ಒಕ್ಕಲಿಗರ ಗರಡಿಯ ಪೈ.ಸೂರ್ಯಕಾಂತ 'ಸಾಹುಕಾರ್ ಚನ್ನಯ್ಯ ಪ್ರಶಸ್ತಿ' ಪಡುವಾರಹಳ್ಳಿ ಹತ್ತು ಜನಗಳ ಗರಡಿಯ ಪೈ.ಚಂದ್ರು 'ಸಿದ್ದರಾಮಯ್ಯ ಪ್ರಶಸ್ತಿ', ಅಂತಾರಾಷ್ಟ್ರೀಯ ಕ್ರೀಡಾಪಟು ಪೈ.ಮಹೇಶ್ 'ಡಾ.ಯತೀಂದ್ರ ಸಿದ್ದರಾಮಯ್ಯ ಪ್ರಶಸ್ತಿ' ಹಾಗೂ ಬನ್ನೂರು ಕಾಳಯ್ಯನ ಗರಡಿಯ ಪೈ.ನಂದಿನಿ 'ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ' ಗೆದ್ದುಕೊಂಡರು.

ಅರಮನೆ ಅಂಗಳದಲ್ಲಿ ಸಂಗೀತದ ಇಂಪಿನ ಕಂಪನ

- ಗಜಪಡೆ ಪಾಲಕರ ಮಕ್ಕಳ ಸಾಂಸ್ಕೃತಿಕ ಸಂಭ್ರಮ
- ಭರತನಾಟ್ಯದ ವೈಭವದ ಸೊಗಸು
- ಶಾಸ್ತ್ರೀಯ ಗಾಯನದ ರಸಧಾರೆ



ಅರಮನೆ ವೇದಿಕೆಯಲ್ಲಿ ಚೈತನ್ಯ ಷಡಕ್ಷರಿ ಮತ್ತು ತಂಡದ ಭರತನಾಟ್ಯ ಪ್ರದರ್ಶನ.



ಡಾ.ಜ್ಯೋಸ್ತ್ನ ಶ್ರೀಕಾಂತ್ ನೇತೃತ್ವದಲ್ಲಿ ವಯಲಿನ್ ವಾದ್ಯ ಸಂಗೀತ ಕಾರ್ಯಕ್ರಮ

ಮೈಸೂರು, ಅ.9(ಪಿಎಂ)– 'ಕಾಡು ಕುರುಬರ ಮಕ್ಕಳು... ಜೇನು ಕುರುಬರ ಮಕ್ಕಳು... ದೂರಿ ದೂರಿ...' ಗೀತೆಗೆ ದಸರಾ ಗಜಪಡೆ ಕಾವಾಡಿ ಹಾಗೂ ಮಾವುತರ ಮಕ್ಕಳು ಪ್ರದರ್ಶಿಸಿದ ನೃತ್ಯವು ಪ್ರೇಕ್ಷಕರ ಮನಸೂರೆಗೊಂಡಿತು. ಅಲ್ಲದೆ, ಭರತನಾಟ್ಯದ ಸೊಗಸು... ಹಿಂದೂಸ್ತಾನಿ ಗಾಯನಕ್ಕೆ ಪ್ರತಿಯಾಗಿ ಮೇಳೈಸಿದ ಸಿತಾರ್ ವಾದನದ ಜುಗಲ್‌ಬಂದಿ, ವಯಲಿನ್ ವಾದ್ಯ ಸಂಗೀತ ಮೋಡಿ... ಮೈಸೂರು ಅರಮನೆ ವೇದಿಕೆಯಲ್ಲಿ ಕಂಡುಬಂದ ಸಾಂಸ್ಕೃತಿಕ ವೈಭವವಿದು.

ದಸರಾ ಮಹೋತ್ಸವ ಪ್ರಯುಕ್ತ ಸಾಂಸ್ಕೃತಿಕ ಉಪಸಮಿತಿ ವತಿಯಿಂದ ಇಲ್ಲಿ ಹಮ್ಮಿಕೊಂಡಿರುವ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಏಳನೇ ದಿನವಾದ ಬುಧವಾರ ಸಂಜೆ ಇಂತಹ ಸಂಗೀತ–ನೃತ್ಯದ ರಸಧಾರೆ ಹೊಮ್ಮಿ ನೆರೆದವರು ಕಲಾತ್ಮಕ ಲೋಕದಲ್ಲಿ ತೇಲಿದರು.

ತಮ್ಮ ಬುಡಕಟ್ಟು ಸಮುದಾಯದ ಸಾಂಸ್ಕೃತಿಕ ವೈಭವವನ್ನು ಕಾವಾಡಿ ಮತ್ತು ಮಾವುತರ ಮಕ್ಕಳು 'ನೃತ್ಯನವ್ವಾಲೆ' ಶೀರ್ಷಿಕೆಯಡಿ ನೃತ್ಯದ ಮೂಲಕ ಅನಾವರಣಗೊಳಿಸಿದರು. ತಮ್ಮ 'ಕುಂಡೆ ಹಬ್ಬ'ದಲ್ಲಿ ಹಾಡುವ ಗೀತೆ ಹಾಗೂ ನೃತ್ಯವನ್ನು ಪ್ರಸ್ತುತಪಡಿಸಿ ಸಭಿಕರ ಚಪ್ಪಾಳೆ ಗಿಟ್ಟಿಸುವಲ್ಲಿ ಯಶಸ್ವಿಯಾದರು. ಅಲ್ಲದೆ, ತಮ್ಮ ಪೂರ್ವಜರು ಕಾಡಿನಲ್ಲಿ ಬೇಟೆಗೆ ಹೋಗುತ್ತಿದ್ದ ಸನ್ನಿವೇಶವನ್ನು ಹಾಡು ಮತ್ತು ನೃತ್ಯದಲ್ಲಿ ಕಟ್ಟಿಕೊಟ್ಟು ತಮ್ಮ ಬುಡಕಟ್ಟು ಬದುಕಿನ ಸಾಂಸ್ಕೃತಿಕ ಲೋಕದಲ್ಲಿ ಸಭಿಕರನ್ನು ತೇಲಿಸಿದರು. ಕೆ.ಆರ್.ಸುಮತಿ ಅವರ ಪರಿಕಲ್ಪನೆ ಹಾಗೂ ರಂಗಕರ್ಮಿ ಜನಾರ್ಧನ್ (ಜನ್ನಿ) ಅವರ ಸಂಗೀತ ನಿರ್ದೇಶನದಲ್ಲಿ ಈ ನೃತ್ಯ ಮೂಡಿಬಂದಿತು. ದುಬಾರೆ ಆನೆ ಶಿಬಿರದ ಸಂಗೀತಾ ನೇತೃತ್ವದಲ್ಲಿ ನೃತ್ಯ ಸಾದರಪಡಿಸಲಾಯಿತು.



ಉಸ್ತಾದ್ ಫಯಾಜ್ ಖಾನ್ ಅವರ ಹಿಂದೂಸ್ತಾನಿ ಗಾಯನ ಮತ್ತು ಉಸ್ತಾದ್ ಶಫೀಕ್ ಖಾನ್ ಅವರ ಸಿತಾರ್ ವಾದನದ ಜುಗಲ್‌ಬಂದಿ ಕಾರ್ಯಕ್ರಮ ನಡೆಯಿತು.

ಅದೇ ರೀತಿ ಡಾ.ಜ್ಯೋಸ್ತ್ನ ಶ್ರೀಕಾಂತ್ ಮತ್ತು ಅವರ ತಂಡ ನಡೆಸಿಕೊಟ್ಟ ವಯಲಿನ್ (ಪಿಟೀಲು) ವಾದ್ಯ ಸಂಗೀತ ಸಪ್ತಸ್ವರದ ರಸಧಾರೆ ಹರಿಸಿತಲ್ಲದೆ, ಶಾಸ್ತ್ರೀಯ ಹಾಗೂ ಪಾಶ್ಚಾತ್ಯ ಸಂಗೀತದ ಸಮ್ಮಿಲನಗೊಳಿಸಿ ನಾದದ ಮಾಧುರ್ಯ ಹೊಮ್ಮಿಸಿ, ಸಂಗೀತದ ತರಂಗದಲ್ಲಿ ಸಭಿಕರು ಮೈಮರೆಯುವಂತೆ ಮಾಡಿತು.

ಪ್ರಾರಂಭದಲ್ಲೇ 'ಕಾಯೌ ಶ್ರೀ ಗೌರಿ...' ನುಡಿಸುತ್ತಿದ್ದಂತೆ ಅಂದಿನ ಮೈಸೂರು ಸಂಸ್ಥಾನದ ಈ ಗೀತೆಗೆ ಸಭಿಕರು ಎದ್ದು ನಿಂತು ಗೌರವ ಸೂಚಿಸಿದರು. ಅಂತೆಯೇ ಮುತ್ತುಸ್ವಾಮಿ ದೀಕ್ಷಿತರ 'ವಾತಾಪಿ ಗಣಪತಿಂ ಭಜೇ...' ಗೀತೆಯು ಪಿಟೀಲು ವಾದನದಲ್ಲಿ ಹೊರಹೊಮ್ಮುತ್ತಿದ್ದರೆ, ಸಭಿಕರು ತನ್ಮಯತೆಯಲ್ಲಿ ತೇಲಿದರು. ಹಂಸಧ್ವನಿ ರಾಗ ಮತ್ತು ಆದಿತಾಳದಲ್ಲಿ ಮೂಡಿಬಂದ ಈ ವಾದ್ಯಸಂಗೀತಕ್ಕೆ ಶ್ರೋತೃಗಳು ಮೋಡಿಗೆ ಒಳಗಾಗಿದ್ದರು. ಅಲ್ಲದೆ, ಪಟ್ನಂ ಸುಬ್ರಮಣ್ಯ ಅಯ್ಯರ್ ಅವರ ಸಂಗೀತ ಸಂಯೋಜನೆಯನ್ನು ವಯಲಿನ್ ವಾದನದಲ್ಲಿ ಹೊಮ್ಮಿಸಿ, ಸಭಿಕರು ಮಂತ್ರಮುಗ್ಧರಾಗಿ ಮೈಮರೆಯುವಂತೆ ಮಾಡಲಾಯಿತು. ಅಂತೆಯೇ ಸಲ್ಲಾಪಂ ರಾಗದ ಸಂಗೀತಕ್ಕೆ ತಲೆದೂಗಿದ ಶ್ರೋತೃಗಳು ಅಭಿಮಾನದಿಂದ ಚಪ್ಪಾಳೆ ಮಳೆ ಸುರಿಸಿದರು.

ಸ್ಪ್ರಿಂಟ್ ಗೀತೆಗೆ ಸಿಂಧು ಭೈರವಿ ರಾಗ ಅಳವಡಿಸಿ ವಯಲಿನ್ ನುಡಿಸುತ್ತಿದ್ದರೆ, ಅದರೊಂದಿಗೆ ಇನ್ನು ಹಲವು ವಯಲಿನ್‌ಗಳು, ಡ್ರಮ್ ಹಾಗೂ ಕೀ ಪ್ಯಾಡ್ ವಾದನದಿಂದ ಒಮ್ಮೆಗೆ ಹೊಮ್ಮಿದ ನಾದತರಂಗವು ಶ್ರೋತೃಗಳು ಸಂಗೀತದ ಸುಧೆಯಲ್ಲಿ ತೇಲುವಂತೆ ಮಾಡಿತು. ಈ ವೇಗದ ಸಂಗೀತವು ಸಭಿಕರಲ್ಲಿ ಇಂಪಿನ ಕಂಪನ ಉಂಟು ಮಾಡಿತು. ಐರ್ಲೆಂಡ್ ಜನಪದ ಸಂಗೀತ ಹಾಗೂ ಶಾಸ್ತ್ರೀಯ ಸಂಗೀತ ಸಮ್ಮಿಲನಗೊಳಿಸಿ ಹೊರಹೊಮ್ಮಿಸಿದ ಸಂಗೀತ ನೆರೆದವರ ಮನಸೂರೆಗೊಂಡಿತು. 'ನಗುವ ನಯನ ಮಧುರ ಮೌನ...' ಚಿತ್ರಗೀತೆಯ ವೈಯಲಿನ್ ಸಂಗೀತಕ್ಕೆ ಸಭಿಕರು ನಲಿದಾಡಿ ಸಂಭ್ರಮಿಸಿದರು.

ಡಾ.ಜ್ಯೋಸ್ತ್ನ ಶ್ರೀಕಾಂತ್ ಅವರ ವಾದ್ಯಸಂಗೀತಕ್ಕೆ ಡ್ರಮ್‌ನಲ್ಲಿ ಅಮೋಘ, ಕೀ ಬೋರ್ಡ್‌ನಲ್ಲಿ ಅಭಿಷೇಕ್ ಸಹಕಾರ ನೀಡಿದರು. ಅಲ್ಲದೆ, ಹಲವು ವಯಲಿನ್‌ಗಳನ್ನು ನುಡಿಸುವ ಮೂಲಕ ಅಮರ್‌ನಾಥ್, ಮೋಹನ್‌ರಾಜ್, ಜಪ್ರಿ ಮಾರ್ಟಿನ್ ಮೊದಲಾದವರು ಸಹ ಸಾಥ್ ನೀಡಿದರು.

ಇದಕ್ಕೂ ಮುನ್ನ ಖ್ಯಾತ ಭರತನಾಟ್ಯ ಹಿರಿಯ ಕಲಾವಿದೆ ಡಾ.ವಸುಂದರ ದೊರೆಸ್ವಾಮಿ ಶಿಷ್ಯೆ ಕುಮಾರಿ ಚೈತನ್ಯ ಷಡಕ್ಷರಿ ತಮ್ಮ ತಂಡದೊಂದಿಗೆ ಪ್ರಸ್ತುತಪಡಿಸಿದ ಭರತನಾಟ್ಯ ನೋಡುಗರ ಕಣ್ಣೆದುರಲ್ಲಿ ದೃಶ್ಯ ಕಾವ್ಯ ಮೂಡಿಸಿತು. ಆದಿತಾಳದಲ್ಲಿ ಮೇಳಪ್ರಾಪ್ತಿ ಸಾದರಪಡಿಸಿ ನಾಟ್ಯದಲ್ಲಿ ನಟರಾಜನನ್ನು ಸ್ಮರಿಸಲಾಯಿತು. ಅಲ್ಲದೆ, ನೃತ್ಯಾಂಜಲಿ ಪ್ರಸ್ತುತಿ ಮೂಲಕ ತಾಯಿ ಚಾಮುಂಡೇರಿ ಆರಾಧಿಸಿ ಸಭಿಕರಲ್ಲಿ ಭಕ್ತಿಭಾವ ಉಂಟು ಮಾಡಲಾಯಿತು. ಅಲ್ಲದೆ, ತಮ್ಮ ನಾಟ್ಯದ ಭಾವಭಂಗಿಯಲ್ಲಿ 'ಮಹಿಷಾಸುರ ಮರ್ಧಿನಿ' ಸನ್ನಿವೇಶ ಅನಾವರಣಗೊಳಿಸುತ್ತಿದ್ದಂತೆ ಸಭಿಕರು ಚಪ್ಪಾಳೆ ಮಳೆ ಸುರಿಸಿದರು.

ಅಂತೆಯೇ ಉಸ್ತಾದ್ ಫಯಾಜ್ ಖಾನ್ ಅವರ ಹಿಂದೂಸ್ತಾನಿ ಗಾಯನ ಮತ್ತು ಉಸ್ತಾದ್ ಶಫೀಕ್ ಖಾನ್ ಅವರ ಸಿತಾರ್ ವಾದನದ ಜುಗಲ್‌ಬಂದಿ ಸಭಿಕರನ್ನು ಮಂತ್ರಮುಗ್ಧರನ್ನಾಗಿಸಿತು. ಅದೇ ರೀತಿ ಪದ್ಮಶ್ರೀ, ಪದ್ಮಭೂಷಣ ಸುಧಾ ರಘುನಾಥನ್ ಅವರ ಕರ್ನಾಟಕ ಶಾಸ್ತ್ರೀಯ ಸಂಗೀತದ ಗಾನ ಲಹರಿಯೂ ಹರಿಯಿತು. ಜೊತೆಗೆ ಅಕ್ಬರ್ ಮತ್ತು ತಂಡದವರ ಸುಗಮ ಸಂಗೀತವೂ ಸಭಿಕರ ಮೋಡಿ ಮಾಡಿತು. ಸಾಂಸ್ಕೃತಿಕ ಉಪಸಮಿತಿ ಅಧ್ಯಕ್ಷ ಅಹಿಂದ ಜವರಪ್ಪ, ಉಪಾಧ್ಯಕ್ಷೆ ಶ್ವೇತ ಮಡಪ್ಪಾಡಿ ಸೇರಿದಂತೆ ಸದರಿ ಸಮಿತಿ ಸದಸ್ಯರು ಮತ್ತಿತರರು ಹಾಜರಿದ್ದರು.



ಅರಮನೆ ವೇದಿಕೆಯಲ್ಲಿ ಬುಧವಾರ ಗಜಪಡೆ ಪಾಲಕರ ಮಕ್ಕಳು ನೃತ್ಯ ಪ್ರದರ್ಶನ ನೀಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವೆಟ್ಟೈಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೇವರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೈರಾದೇವಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ದೇವರ (ತೆ)	4 ಪ್ರದರ್ಶನಗಳು
ರಾಜಕಮಲ್	
ಜೋಕರ್ ಪೋಲಿಕಾ ಡ್ಯೂಕ್ಸ್ (ಇಂ)	4 ಪ್ರದರ್ಶನಗಳು
ಸಂಗಂ	
ಭೈರಾದೇವಿ (ಕ)	4 ಪ್ರದರ್ಶನಗಳು
ಲಿಡೋ	
ಉಪೇಂದ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ಪ್ರಭಾ	
ಭೀಮ (ಕ)	2 ಪ್ರದರ್ಶನಗಳು
ರಾಜಯೋಗ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಜೋಕರ್ ಫೋಲಿಕಾ ಡ್ಯೂಕ್ಸ್ (ಇಂ): ಬೆ.10.05ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.55ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1ಕ್ಕೆ.
ಸ್ಕ್ರೀನ್ 2	ದೇವರ 1 (ತೆ): ರಾ.10ಕ್ಕೆ.
ಸ್ಕ್ರೀನ್ 3	ಸ್ತ್ರೀ 2 (ಹಿಂ): ಬೆ.10.05ಕ್ಕೆ, ದೇವರ 1 (ತೆ): ಮ.1ಕ್ಕೆ, ಅನ್ನ (ಕ): ಸಂ.4.30ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ರಾ.7ಕ್ಕೆ, ಕಳಿಂಗ (ತೆ): ರಾ.10.10ಕ್ಕೆ.
ಸ್ಕ್ರೀನ್ 4	ಪುಷ್ಪಕ ವಿಮಾನಂ (ಮ): ಬೆ.10.20ಕ್ಕೆ, ಭೈರಾದೇವಿ (ಕ): ಮ.1.05ಕ್ಕೆ, ದೇವರ 1 (ತೆ): ಮ.3.45ಕ್ಕೆ, ರಾ.7.05ಕ್ಕೆ, ತೆಕ್ಕು ವಡಕ್ಕು (ಮ): ರಾ.10.30ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.10ಕ್ಕೆ, ಸ್ವಾಗ್ (ತೆ): ಸಂ.4.10ಕ್ಕೆ, ತೆಕ್ಕು ವಡಕ್ಕು (ಮ): ರಾ.7.10ಕ್ಕೆ, ಗುಮಾಸ್ತಾನ್ (ಮ): ರಾ.9.40ಕ್ಕೆ.
ಸ್ಕ್ರೀನ್ 2	ಜೋಕರ್ ಫೋಲಿಕಾ ಡ್ಯೂಕ್ಸ್ (ಇಂ): ಮ.1.45ಕ್ಕೆ, ದೇವರ 1 (ತೆ): ಸಂ.4.40ಕ್ಕೆ, ರಾ.8ಕ್ಕೆ.
ಸ್ಕ್ರೀನ್ 3	ಭೈರಾದೇವಿ (ಕ): ಮ.1.40ಕ್ಕೆ, ಸಂ.4.15ಕ್ಕೆ, ಜೋಕರ್ ಫೋಲಿಕಾ ಡ್ಯೂಕ್ಸ್ (ಇಂ): ಸಂ.6.50ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 4	ದೇವರ 1 (ಕ): ಮ.1.30ಕ್ಕೆ, ದೇವರ 1 (ತೆ): ಸಂ.6.05ಕ್ಕೆ, ರಾ.9.20ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರು ರೇಸ್

12ನೇ ದಿನ, ಗುರುವಾರ, 10–10–2024

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 2.30 ಗಂಟೆಗೆ

I. ಲಲಿತ ಮಹಲ್ ಪ್ಲೇಟ್ –1100 ಮೀ. ರೇಟೆಡ್ 00 ರಿಂದ 25. (ಮೈಸೂರು ಬೇಸ್ಡ್ ಹಾರ್ಸ್). ಮಧ್ಯಾಹ್ನ 2.30ಕ್ಕೆ
1. ಅರಿಗಟೋ 2. ಲೀಡ್ ಸಿಂಗರ್ 3. ಬಚ್ಚೂಸ್

II. ಲೋಕಪಾವನಿ ಪ್ಲೇಟ್ –1400 ಮೀ. ರೇಟೆಡ್ 20 ರಿಂದ 45. (ನೋ ವ್ಹಿಪ್). ಮೈಸೂರು ಬೇಸ್ಡ್ ಹಾರ್ಸ್. ಮ.3.00ಕ್ಕೆ
1. ಸಾರ್ಜೆಂಟ್ ರೆಕ್‌ಲೆಸ್ 2. ಪರ್ಫೆಕ್ಟ್ ಹಾರ್ಟ್ 3. ಔರ್ಲಿ

III. ಶ್ರೀಕಂಠೀರವ ನರಸಿಂಹರಾಜ ಸ್ಪೋರ್ಟ್ಸ್ ಕ್ಲಬ್ ಟ್ರೋಫಿ –1400 ಮೀ. ರೇಟೆಡ್ 40 ರಿಂದ 65. ಮಧ್ಯಾಹ್ನ 3.30ಕ್ಕೆ
1. ಅಶ್ವವೇದಾ 2. ಹ್ಯಾಂಡ್ ಆಫ್ ಗಾಡ್ 3. ಶೇರಾಕ್

IV. ಮೈಸೂರ್ ದಸರಾ ಸ್ಪ್ರಿಂಟ್ ಚಾಂಪಿಯನ್‌ಶಿಪ್–1200 ಮೀ. 3 ವರ್ಷ (ಟರ್ಮ್ಸ್). ಸಂ.4.00ಕ್ಕೆ
1. ಈಸ್ ನಾಟ್ ಶಿ ಬ್ಯೂಟಿಫುಲ್ 2. ಆಲ್ಟಾ ಗೇಟ್ 3. ಪಾಲೀಶ್ ಗರ್ಲ್

V. ಅರಸ್‌ಕಾರ್ ಟ್ರೋಫಿ–1200 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.30ಕ್ಕೆ
1. ಬ್ರೇವ್ ಟ್ರೂಪರ್ 2. ವಿಜಯ ಫಾಲ್ಕನ್ 3. ಸಿಲ್ವರ್ ಸ್ಪ್ರಿಂಗ್

VI. ತ್ರಿವೇಣಿ ಪ್ಲೇಟ್ –1200 ಮೀ. ರೇಟೆಡ್ 40 ರಿಂದ 65. (ಮೈಸೂರು ಬೇಸ್ಡ್ ಹಾರ್ಸ್). ಸಂ.5.00ಕ್ಕೆ
1. NRI ಟಚ್ 2. ಸ್ಪಿರಿಚಿಯಲ್ ಫೋರ್ಸ್ 3. ಟ್ರಸ್ಟ್ ಬಾಂಡ್


ದಿನದ ಅತ್ಯುತ್ತಮ	ಈಸ ನಾಟ್ ಶಿ ಬ್ಯೂಟಿಫುಲ್
ಡಬ್ಬಲ್	ಬ್ರೇವ್ ಟ್ರೂಪರ್, ಸಾರ್ಜೆಂಟ್ ರೆಕ್‌ಲೆಸ್
ಜಾಕ್‌ಪಾಟ್	2, 3, 4, 5 ಮತ್ತು 6
ಮಿನಿ ಜಾಕ್‌ಪಾಟ್	3, 4, 5, ಮತ್ತು 6
I ಟ್ರಿಬಲ್	1, 2 ಮತ್ತು 3
II ಟ್ರಿಬಲ್	4, 5 ಮತ್ತು 6
ಎಕ್ಸ್‌ಆಕ್ಟ್	1 ರಿಂದ 6

ಟಿಪ್‌ಸ್ಟರ್ ಪಿಜಿಸಿ

ರತನ್ ಟಾಟಾ ನಿಧನಕ್ಕೆ ಸಿ.ನಾರಾಯಣಗೌಡ ಸಂತಾಪ



ಮೈಸೂರು,ಅ.9– ರತನ್ ಟಾಟಾ ಅವರ ನಿಧನಕ್ಕೆ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಸಂತಾಪ ಸೂಚಿಸಿದ್ದಾರೆ. ಭಾರತದ ಕೈಗಾರಿಕಾ ವಲಯಕ್ಕೆ ರತನ್ ಟಾಟಾ ಅವರ ಕೊಡುಗೆ ಅಪಾರ. ಮೃತರ ಆತ್ಮಕ್ಕೆ ಶಾಂತಿ ದೊರಕಲಿ ಎಂದು ಶ್ರದ್ಧಾಂಜಲಿ ಅರ್ಪಿಸಿದ್ದಾರೆ.



22ನೇ ವರ್ಷದ ಪುಣ್ಯಸ್ಮರಣೆ

ಯಜಮಾನ್ ಛೇರ್ಮನ್ ಎಂ.ಜೆ.ಸಿದ್ದೇಗೌಡ್ರು
ಮಾಜಿ ಮಂಡಲ ಉಪಪ್ರಧಾನರು, ಮರಟಿ ಕ್ಯಾತನಹಳ್ಳಿ, ಜಯಪುರ ಹೋಬಳಿ, ಮೈಸೂರು ತಾಲ್ಲೂಕು

ನಿಮ್ಮ ನೆನಪಿನಲ್ಲಿರುವ:

ದಿ|| ಶ್ರೀಮತಿ ಪುಟ್ಟತಾಯಮ್ಮ(ಬೋರಮ್ಮ), ಶ್ರೀಮತಿ ಶಾರದಮ್ಮ ಮತ್ತು ಯಜಮಾನ್ ಎಂ.ಎಸ್ ಗಂಗಾಧರರವರು, ಶ್ರೀಮತಿ ಸಾವಿತ್ರಮ್ಮ ಮತ್ತು ಎಂ.ಎಸ್.ಜಗದೀಶ್, ಪಿಎಸಿಎಸ್ ಅಧ್ಯಕ್ಷರು, ಎಂಪಿಸಿಎಸ್ ಮಾಜಿ ಅಧ್ಯಕ್ಷರು, ಎಂ.ಎಸ್. ಜಗದೀಶ್, ಮಾಜಿ ಗ್ರಾಮ ಪಂಚಾಯಿತಿ ಸದಸ್ಯರು, ಶ್ರೀಮತಿ ಪುಷ್ಪಲತಾ, ಏಕಾಂಭರೀಶ್, ಶಾನ್ವಿ ಲೇಔಟ್ & ವೈಷ್ಣವಿ ಲೇಔಟ್ ಮಾಲೀಕರು, ಹೆಣ್ಣು ಮಕ್ಕಳು, ಗೌರಮ್ಮ, ಲೇ|| ರಾಮಚಂದ್ರೇಗೌಡರು, ಲಕ್ಷ್ಮಮ್ಮ ಚಲುವೇಗೌಡರು, ಅಂಕಮ್ಮ, ಸತ್ಯನಾರಾಯಣ, ದಿ|| ಶ್ರೀಮತಿ ನಿಂಗಮ್ಮ–ಯಜಮಾನ್ ಜೋಗೇಗೌಡರ ಕುಟುಂಬವರ್ಗದವರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು.

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತು ಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



15ನೇ ವರ್ಷದ ಸವಿನೆನಪು

ನಾಗೇಂದ್ರ (ಗುಂಡು)
ದುಃಖತಪ್ತರು: ಮರ್ಕಿ ಮಹದೇವ, ಸರೋಜ & ಕುಟುಂಬ ವರ್ಗ ಹಾಗೂ ಸ್ನೇಹಿತರು, ಕೆ.ಜಿ.ಕೊಪ್ಪಲು



5ನೇ ವರ್ಷದ ಸವಿನೆನಪು

ನಾವು ಇನ್ನು ಮುಂದೆ ನೀವು ತೋರಿಸಿದ ಹಾದಿಯಲ್ಲಿ ಸಾಗಲು ನೀವು ದಾರಿದೀಪವಾಗಿರುವರೆಂದು ಭಾವಿಸುತ್ತೇವೆ.
ಪತಿ ಆರ್.ಶಂಕರ್ ಆರ್ ಮತ್ತು ಮಕ್ಕಳು, ಮೊಮ್ಮಕ್ಕಳು

ಪಾರ್ವತಿ ಶಂಕರ
ನಿಧನ: 10.10.2019



ಹಸಿರು
ನಮ್ಮ
ಉಸಿರು

|| ಓಂ ಶ್ರೀ ಗುರುಬಸವಲಿಂಗಾಯ ನಮಃ ||

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ (ರಿ.)

ಮೈಸೂರು ಜಿಲ್ಲಾ ಘಟಕ



ಮೈಸೂರು ಜಿಲ್ಲಾ ಘಟಕದ
ಕಾರ್ಯ ನಿರ್ವಾಹಕ ಸಮಿತಿಯ
ಸರ್ವಸದಸ್ಯರುಗಳಿಗೆ ತುಂಬು ಹೃದಯದ

ಅಭಿನಂದನೆಗಳು

ಹೆಚ್.ವಿ. ಬಸವರಾಜು (ಹಿನಕಲ್)
ಜಿಲ್ಲಾಧ್ಯಕ್ಷರು, ಮೈಸೂರು ಜಿಲ್ಲಾ ಘಟಕ

ನಾಗರಾಜು ಕೆ. ಉಪಾಧ್ಯಕ್ಷರು; ಬಸವರಾಜು ಬಿ.ವಿ. ಉಪಾಧ್ಯಕ್ಷರು; ಎಂ. ನಟರಾಜ್ ಉಪಾಧ್ಯಕ್ಷರು; ಅನಸೂಯ ಗಣೇಶ್ ಉಪಾಧ್ಯಕ್ಷರು; ಶಿವಕುಮಾರ್ ಕೆ. ಪ್ರಧಾನ ಕಾರ್ಯದರ್ಶಿ; ಧರ್ಮ ಮಂಜುನಾಥ್ ಎಲ್.ಪಿ. ಕೋಶಾಧ್ಯಕ್ಷರು; ಗಿರೀಶ್ ಎನ್.ಜಿ. ಕಾರ್ಯದರ್ಶಿ

ಗಿರಿಕುಮಾರ್ ಕೆ. ಕಾರ್ಯದರ್ಶಿ; ಎಂ. ಕುಮಾರ್ ಕಾರ್ಯದರ್ಶಿ; ಎನ್.ಬಿ. ಭಾಗ್ಯ ಡಿ.ಪಿ. ಸುರೇಶ್ ಕಾರ್ಯದರ್ಶಿ

ರಾಷ್ಟ್ರೀಯ ಕಾರ್ಯಕಾರಿಣಿ ಸಮಿತಿ ಸದಸ್ಯರು: ಯು.ಎಸ್. ಬಸವರಾಜು; ಖಂಡೇಶ್ ಕಾಶಿವಿಶ್ವನಾಥ್

ರಾಜ್ಯ ಕಾರ್ಯ ನಿರ್ವಾಹಕ ಸಮಿತಿ ಸದಸ್ಯರು: ಎಚ್.ಕೆ. ಚನ್ನಪ್ಪ; ಬಸವರಾಜಪ್ಪ (ಮೊತ್ತ)

ರಾಜ್ಯ ಕಾರ್ಯ ನಿರ್ವಾಹಕ ಸಮಿತಿ ಸದಸ್ಯರು-ಮಹಾದಾನಿಗಳು: ಎಂ. ಪ್ರದೀಪ್‌ಕುಮಾರ್; ಕೆ.ಪಿ. ಶರತ್ ಪುಟ್ಟಬುದ್ದಿ; ದೀಪು ಕೆ.ಆರ್.

ಜಿಲ್ಲಾ ಕಾರ್ಯ ನಿರ್ವಾಹಕ ಸಮಿತಿ ಸದಸ್ಯರು-ದಾನಿಗಳು: ಎಲ್.ವಿ. ಲೋಕೇಶ್ ಕುಮಾರ್; ಎಲ್.ಎಸ್. ಮಹದೇವಸ್ವಾಮಿ; ಟಿ. ಲಿಂಗರಾಜು; ಕೆ.ಎಸ್. ಮಾದಪ್ಪ; ಕೆ.ಜಿ. ಮಹೇಶ್; ಸಿ.ಜಿ. ಶಿವಶಂಕರ್; ಬಿ.ಎ. ಶಿವಕುಮಾರಸ್ವಾಮಿ; ಎಂ.ಎ. ನಂಜಪ್ಪ; ಎಂ.ಕೆ. ಸ್ವಾಮಿ; ಎಸ್. ಚಂದ್ರಶೇಖರ್; ಎಂ. ವಿದ್ಯಾಲಂಕಾರ್; ಬಿ.ಪಿ. ಮಲ್ಲೇಶ್

ದಕ್ಷಿಣಾಮೂರ್ತಿ; ಮಾದಪ್ಪ ಕೆ.ಎಂ.; ಚಂದ್ರಶೇಖರ್ ಎಂ; ಶೇಖರ್ ಪಿ.; ವಿರೂಪಾಕ್ಷ ಎ.ಪಿ.; ಷಡಕ್ಷರಿ ಎಂ.; ಬಸವರಾಜು ಎಂ.; ಡಾ|| ಮಹದೇವಪ್ಪ ಎಂ.ಎಂ.; ರೇಚಣ್ಣ ಎಂ.ಎಸ್.; ನಟರಾಜು ಕೆ.ಎಂ.; ಮಹೇಶ್ ಜಿ.ಎಂ.

ಪರಮೇಶ್ ಬಿ.ಎಂ.; ಗಿರೀಶ್ ಎಸ್.; ನಟರಾಜು ಸಿ.ಆರ್.; ದಾಕ್ಷಾಯಿಣಿ ಎಂ.; ಡಾ. ಶೈಲಾ ನಾಗರಾಜ್; ಎಂ.ಬಿ. ರಾಜೇಶ್ವರಿ ಮಹೇಶ್; ಸರ್ವಮಂಗಳ ಹೆಚ್.ಎಸ್.; ದಾಕ್ಷಾಯಿಣಿ ಲಿಂಗರಾಜು ಎಸ್.ಎಂ.; ಆರ್.ಎಸ್. ರೂಪ ಸತೀಶ್; ನಾಗಜ್ಯೋತಿ ಬಿ.; ಸೌಭಾಗ್ಯ

ಅಭಿನಂದಿಸುವವರು: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ (ರಿ.) ಜಿಲ್ಲಾ ಘಟಕ, ತಾಲ್ಲೂಕು ಘಟಕ, ನಗರ ಘಟಕ, ಬಸವ ಬಳಗಗಳ ಒಕ್ಕೂಟ ಹಾಗೂ ವೀರಶೈವ ಸಂಘ ಸಂಸ್ಥೆಗಳು ಹಾಗೂ ಸಮಸ್ತ ವೀರಶೈವ ಲಿಂಗಾಯಿತ ಬಂಧುಗಳು, ಮೈಸೂರು ಜಿಲ್ಲೆ